ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ

ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

"ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವೈಚಾರಿಕತೆ"

ಮಾರ್ಗದರ್ಶಕರು

ಪ್ರೊ.ಸುಧಾಕರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ,

ಮೈಸೂರು.

ನಿಬಂಧಕಾರರು

ಹೆಚ್.ಎಸ್.ಹರೀಶ

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ, ಮೈಸೂರು

೨೦೦೯-೧೦

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಸಾಲಿನ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ

ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

"ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವೈಚಾರಿಕತೆ"

ಮಾರ್ಗದರ್ಶಕರು

ಪ್ರೊ.ಸುಧಾಕರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ,

ಮೈಸೂರು.

ನಿಬಂಧಕಾರರು

ಹೆಚ್.ಎಸ್.ಹರೀಶ

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ, ಮೈಸೂರು

೨೦೦೯-೧೦

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನ ಎಚ್.ಎಸ್.ಹರೀಶ ಎಂ.ಫಿಲ್ ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ **"ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವೈಚಾರಿಕತೆ"** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಇವರು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ, ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಸಹಿ

ಪ್ರೊ.ಸುಧಾಕರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ,
ಮೈಸೂರು.

ಸ್ಥಳ : ಮೈಸೂರು
ದಿನಾಂಕ : 20/8/2010

ಪ್ರಮಾಣ ಪತ್ರ

"ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವೈಚಾರಿಕತೆ" ಎಂಬ ವಿಷಯದ ನಿಬಂಧವನ್ನು ಕನ್ನಡ ಎಂಫಿಲ್ ಪದವಿಯ ವಿದ್ಯಾರ್ಥಿಯಾದ ನಾನು ೨೦೦೯-೧೦ನೇ ಸಾಲಿನ ಪರೀಕ್ಷೆಗಾಗಿ **ಪ್ರೊ.ಸುಧಾಕರ್** (ನಿವೃತ್ತ ಪ್ರಾಧ್ಯಾಪಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು) ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ನಿಬಂಧವನ್ನು ಯಾವುದೇ ಬಗೆಯ ಪದವಿ, ಡಿಪ್ಲೊಮಾ, ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲ ಎಂದು ಪ್ರಮಾಣೀಕರಿಸಿರುತ್ತೇನೆ.

ಸಹಿ

ಹರೀಶ ಹೆಚ್. ಎಸ್.

ಸ್ಥಳ : ಮೈಸೂರು

ದಿನಾಂಕ : 20/8/2010

ಹೆಚ್.ಎಸ್.ಹರೀಶ

ಕನ್ನಡ ಎಂ.ಫಿಲ್ ವಿದ್ಯಾರ್ಥಿ(ಹಂಪಿ ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ, ಮೈಸೂರು

ಪರಿವಿಡಿ

ಪೀಠಿಕೆ

ಅವೈಚಾರಿಕತೆ ಮತ್ತು ಅವೈಜ್ಞಾನಿಕತೆ ಅಜ್ಞಾನತಿಮಿರಾವೃತವಾದ ದರಿದ್ರ ರಾಷ್ಟ್ರಗಳಲ್ಲಿ ಕಂಡು ಬರುವ ಭಯಂಕರ ಪಿಡುಗುಗಳೆಂಬುದೂ, ಶೋಷಕ ವರ್ಗದ ದುರಾಚಾರಗಳಿಗೆ ಅವು ಮೆಟ್ಟಿಲುಗಳೆಂಬುದೂ ಸರ್ವವೇದ್ಯ ಸಂಗತಿಯಾಗಿದೆ. ಮೂಢನಂಬಿಕೆಗಳನ್ನು ಬಿತ್ತುವ ಮೂಲಕ ಬುದ್ಧಿವಂತ ಜನ ಶ್ರೀಸಾಮಾನ್ಯರನ್ನು ಕೊಳ್ಳೆ ಹೊಡೆದು ತಮ್ಮ ಡೊಳ್ಳು ಬೆಳೆಸಿಕೊಳ್ಳುತ್ತಾರೆ. ಮಾನವ ವ್ಯವಹಾರ ಕ್ಷೇತ್ರದಲ್ಲಿ ಅನುಸರಿಸಬಹುದಾದ ಮಾರ್ಗಗಳು ಎರಡು. ಒಂದು ವೀಕ್ಷಣೆ, ಪ್ರಯೋಗ, ಆಲೋಚನೆ ಮತ್ತು ಶೋಧನೆಯ ಮೂಲಕ ಮತಿಯ ಬೆಳಕಿನಲ್ಲಿ ಸತ್ಯವನ್ನು ಕಂಡುಕೊಂಡು ಅರ್ಥಪೂರ್ಣವಾದ ಜೀವನವನ್ನು ರೂಪಿಸಿಕೊಳ್ಳುವುದು ಎಂದರ್ಥ, ಎರಡನೆಯದು ವೈಚಾರಿಕ ಜ್ಯೋತಿಯನ್ನು ಮರೆಮಾಡಿ ಸೇಂದ್ರಿಯಾನುಭವ ಲಬ್ಧವಾದ ಸತ್ಯವನ್ನು ನಿರ್ಲಕ್ಷಿಸಿ ಸಂಪ್ರದಾಯವನ್ನು ಒಪ್ಪಿಕೊಂಡು ಕುರುಡು ನಂಬಿಕೆಯನ್ನು ನಂಬಿ ಪಶುಜೀವನ ನಡೆಸುವುದು ಎಂದರ್ಥ.

ದಾಸ್ಯದ ಶಿಶು ಮೌಢ್ಯ, ಬುದ್ಧಿ ವಿವೇಕಗಳ ಶಿಶು ಸತ್ಯ. ಮತಿ ಮಾನವನಿಗೆ ಲಭಿಸಿರುವ ಮಹಾಶಕ್ತಿ, ಅದಕ್ಕೆ ಸಮಾನವಾದದ್ದು ಪ್ರಪಂಚದಲ್ಲಿ ಮತ್ತಾವುದು ಇಲ್ಲ, ಮನುಕುಲ ಅದನ್ನು ಮನಗಂಡದ್ದಾದರೆ ಜಗತ್ತು ಬೌದ್ಧಿಕ ಸಂಪತ್ತಿನ ತವನಿಧಿಯಾಗುತ್ತದೆಂದು ಅಮೇರಿಕೆಯ ಸುಪ್ರಸಿದ್ಧ ವಿಚಾರವಾದಿ ಆರ್.ಜಿ.ಇಂಗರ್‌ಪಾಲ್ ಸಾರಿರುವುದನ್ನು ನಾವು ಕಾಣಬಹುದು. ಎಲ್ಲಿಯ ತನಕ ಜನ ಸಮಾನ್ಯರು ಮೌಢ್ಯತೆಯನ್ನು ಅಳವಡಿಸಿಕೊಂಡು ಜೀವನವನ್ನು ನಡೆಸುತ್ತಾರೆಯೋ ಅಲ್ಲಿಯವರೆಗೆ ಸಮಾಜದಲ್ಲಿ ಸಮಾನತೆಯನ್ನು ಕಾಣಲು ಸಾಧ್ಯವಿಲ್ಲ ಎಂಬ ಮಾತನ್ನು ಆಡಿರುವ ಕುವೆಂಪು ವೈಚಾರಿಕತೆಯ ನಿಲುವಿಗೆ ಒಂದು ಸಾಕ್ಷಿಯಾಗಿದೆ. ವಿಜ್ಞಾನದ ಕೊಡುಗೆ ವೈಚಾರಿಕತೆ, ವೈಚಾರಿಕತೆಯ ತಂದೆ–ತಾಯಿ ಮತ್ತು ಗುರು ಮತಿ, ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ, ಪರಮಾತ್ಮ, ಆತ್ಮ, ದೇವರು, ಪುನರ್ಜನ್ಮ, ಕರ್ಮ ಮೊದಲಾದ ಭಾವನೆಗಳಿಗೂ, ಆ ಸಂಬಂಧಿಸಿದ ವಾದ–ವಿವಾದ ಸಂಶೋಧನೆಗಳಿಗೂ ವಿಚಾರವಾದದಲ್ಲಿ ತಾವಿಲ್ಲ ಆದ್ದರಿಂದಲೇ ವೈಚಾರಿಕತೆಯನ್ನು ಬೋಧಿಸುವಾಗ ಎಚ್ಚರಿಕೆಯಿಂದ ಇರಬೇಕು ಎಂದು ಕುವೆಂಪು ಹೇಳಿರುವ ಮಾತುಗಳು ಸತ್ಯತೆಯಿಂದ ಕೂಡಿವೆ.

ವಿಚಾರವಾದ ಬೋಧಿಸುವಾಗ ದೇವರ ಕಲ್ಪನೆಗಾಗಲಿ, ಧರ್ಮದ ಕಲ್ಪನೆಗಾಗಲಿ ವಿರುದ್ಧವಾಗಿ ಹೋದರೆ ನಮ್ಮ ವಿಚಾರವಾದ ಸೋತು ಹೋಗುತ್ತದೆ, ಯಾವುದು ವೈಜ್ಞಾನಿಕ ಅಲ್ಲವೊ ಅದನ್ನು ವಿಚಾರಿಸಬೇಕು, ವಿಚಾರಿಸಿ ವೈಜ್ಞಾನಿಕವಾದುದನ್ನು ಮಾತ್ರ ಒಪ್ಪಿಕೊಳ್ಳಬೇಕು

ಉಳಿದುದನ್ನು ಮೂಢಾಚಾರವೆಂದು ತಿರಸ್ಕರಿಸಬೇಕು ಎಂಬುದಾಗಿ ಜನರಿಗೆ ವಿವೇಕ ಹೇಳಬೇಕೆಂದು ಕುವೆಂಪು ಅಭಿಪ್ರಾಯಪಟ್ಟಿರುವುದು ಒಂದು ಸಮಾಜದ ಜನರಿಗೆ ಮಾದರಿಯಾಗಿದೆ.

ವೈಚಾರಿಕತೆ ವ್ಯಕ್ತಿಗಳ ವೇಷ-ಭೂಷಣಗಳನ್ನಾಗಲೀ ಗತ್ತು ಗೈರತ್ತುಗಳನ್ನಾಗಲೀ ಅವಲಂಭಿಸಿಲ್ಲ ವ್ಯವಸ್ಥಿತವಾದ ಆಲೋಚನೆಗೆ ಅದು ಇನ್ನೊಂದು ಹೆಸರು. ಆಲೋಚನೆಯ ಮೂಷೆಯನ್ನು ಪ್ರವೇಶಿಸಿ ಪರೀಕ್ಷಿತವಾಗದ ಸಂಗತಿಗಳು ಎಷ್ಟೇ ಪ್ರಾಚೀನವಾದುದಾಗಲೀ ಶಿವಮುಖದಿಂದ ಬಂದವನೆಂದು ಆಚಾರ್ಯರು ಘೋಷಿಸಲಿ ಅವನ್ನು ನಂಬಬಾರದು, ಭಾವಾವೇಶಕ್ಕೊಳಗಾಗದೆ ಕಲ್ಪನೆಗಳಿಗೆ ಮಾರು ಹೋಗದೆ, ಯಾವುದಾದರೂ ವಸ್ತುವನ್ನೋ, ಸಂಗತಿಯನ್ನೋ, ತಲ ಸ್ಪರ್ಶಿಯಾಗಿ ವಸ್ತುನಿಷ್ಠವಾಗಿ ಕುರಿತು ಚಿಂತಿಸುವುದೇ ವೈಚಾರಿಕತೆ ಆದ್ದರಿಂದ ಕುವೆಂಪು ಅವರು ತಮ್ಮ ಶ್ರೇಷ್ಠ ಕಾದಂಬರಿಯಾದ "ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಿ ಜನರ ಮೌಢ್ಯತೆಯ ಬಗ್ಗೆ ಹಾಗೂ ಜನರ ಆಚಾರ-ವಿಚಾರದ ಬಗ್ಗೆ ಕೂಲಂಕುಷವಾಗಿ ತಿಳಿಸಿಕೊಟ್ಟಿರುವುದನ್ನು ನಾವು ನೋಡಬಹುದು. ವೈಚಾರಿಕತೆ ವ್ಯಕ್ತಿಗಳ ವೇಷ ಭೂಷಣಗಳನ್ನಾಗಲೀ ಗತ್ತು ಗೈರತ್ತುಗಳನ್ನಾಗಲೀ ಅವಲಂಭಿಸಿಲ್ಲ ಎಂದು ಕುವೆಂಪು ಹೇಳಿರುವ ಮಾತು ಕಟು ಸತ್ಯವಾಗಿದೆ.

ಮೇಲಿಂದ ಮೇಲೆ ಈ ನಾಡಿನಲ್ಲಿ ವಿಚಾರವಾದಿಗಳು ಜನ್ಮವೆತ್ತಿದರೂ ವಿಚಾರಕ್ರಾಂತಿ ಜನಜೀವನದಲ್ಲಿ ವ್ಯಾಪಕವಾಗಿ ಬೇರೂರುವುದಿಲ್ಲ. ಉಚ್ಚವರ್ಗದ ಸಂಪ್ರದಾಯವಾದಿಗಳ ಕುತಂತ್ರ ಕುಯುಕ್ತಿಗಳ ಬಿರುಹೊನಲಿನಲ್ಲಿ ಅದು ಕೊಚ್ಚಿ ಹೋಗುತ್ತದೆ ಅಜ್ಞಾನ ದಾರಿದ್ರ್ಯಗಳ ಗೊಂಡಾರಣ್ಯದಲ್ಲಿ ತೊಳಲಾಡುತ್ತಿದ್ದ ಶ್ರೀಸಾಮಾನ್ಯರು ಅವರ ಕವಡು ವಿದ್ಯೆಗೆ ಯಜ್ಞಪಶುಗಳಾಗುತ್ತಾರೆ.

ಚಾತುರ್ವರ್ಣವ್ಯವಸ್ಥೆ ಅವರ ಕೊರಳಿಗೆ ಉರುಳಾಗುತ್ತದೆ. ಅದರಿಂದಾಗಿ ಅವರ ಜೀವನ ನರಕೀಯವಾಗುತ್ತದೆ, ಮೊದಲ ಮೂರು ವರ್ಣಗಳ ಜನ ಜತೆಗೂಡಿಸಿಕೊಂಡು ಕೆಳಗಿನವರನ್ನು ನಾನಾ ರೀತಿಗಳಿಂದ ಶೋಷಿಸುತ್ತಾರೆ ಎಂದು ಹೇಳಿರುವಲ್ಲಿ ಕುವೆಂಪು ನಮ್ಮ ಕಾದಂಬರಿಯಾದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲಿ ಮೇಲ್ವರ್ಗದ ಜನ ಕೆಳವರ್ಗದ ಜನರನ್ನು ಯಾವ ರೀತಿ ಶೋಷಣೆ ಮಾಡುತ್ತಾರೆ ಎಂಬುದನ್ನು ವೈಚಾರಿಕವಾಗಿ ತಿಳಿಸಿಕೊಟ್ಟಿದ್ದಾರೆ. ವರ್ಣಾಶ್ರಮ, ಜಾತಿಪದ್ಧತಿ, ಅಸ್ಪೃಶ್ಯವಾದಿ ಸಾಮಾಜಿಕ ದೋಷಗಳನ್ನು ತೊರೆಯದ ಹೊರತು ನಾಡಿಗೆ

ಭವಿಷ್ಯವಿಲ್ಲವೆಂಬ ಸತ್ಯ ಕುವೆಂಪು ಅವರಿಗೆ ಅರಿವಾಗಿರಬೇಕು ಆದ್ದರಿಂದ ಸಾರ್ವಜನಿಕವಾಗಿ ಸಾಮಾಜಿಕ ಅನ್ಯಾಯಗಳನ್ನು ಉಗ್ರವಾಗಿ ಖಂಡಿಸಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಕುವೆಂಪು ಅವರು ಮಲೆನಾಡಿನ ಮೂಲೆಯ ಹಳ್ಳಿಯೊಂದರಲ್ಲಿ ಜನಿಸಿ ಸಂಪ್ರದಾಯಸ್ಥರ ಮನೆಯಲ್ಲಿ ಬೆಳೆದರೂ ಸ್ವಾತಂತ್ರ್ಯ ಸಂಗ್ರಾಮದ ಕಾವು ಅವರ ಬುದ್ಧಿಗಿಳಿಯುವ ಮುಂಚೆ ವೈಚಾರಿಕ ಬುದ್ಧಿ ಮೆಲ್ಲ ಮೆಲ್ಲನೆ ವಿಕಾಸಗೊಳ್ಳುತ್ತದೆ. ಸಂದೇಹ ಪ್ರಶ್ನೆಗಳು ಅವರ ತಾರ್ಕಿಕ ಪ್ರತಿಭೆಯನ್ನು ಕೆರಳಿಸುತ್ತವೆ ಇದರ ಹಿನ್ನೆಲೆಯಲ್ಲಿ ಕುವೆಂಪು ತಮ್ಮ ಕಾದಂಬರಿಯಾದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅಂದಿನ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿ–ಗತಿಯನ್ನು ಆಧಾರವಾಗಿ ಇಟ್ಟುಕೊಂಡು ಸಮಾಜದ ಜನರು ಯಾವ ಯಾವ ರೀತಿಯ ಬದುಕನ್ನು ನಿರ್ವಹಿಸುತ್ತಾರೆ ಎಂಬುದನ್ನು ತಿಳಿಸಿರುವುದನ್ನು ನಾವು ಕಾಣಬಹುದು.

ಕುವೆಂಪು ತಾರುಣ್ಯದಲ್ಲಿಯೇ ಪರಿಪಕ್ವವಾಗಿ ಒಂದು ನೆಲೆಗೆ ನಿಂತ ಅವರ ಬದುಕು ಅವರ ಕೃತಿಗಳಲ್ಲಿ ಸುಸ್ಪಷ್ಟವಾಗಿ ಕಾಣುತ್ತೇವೆ.

ಕುವೆಂಪು ೧೯೩೦ರಷ್ಟು ಹಿಂದೆಯೇ ಇಡೀ ಸಮಾಜ ಗೊಡ್ಡು ಸಂಪ್ರದಾಯಗಳ ನರಕದಲ್ಲಿ ಮುಲುಕುತ್ತಿರುವಾಗಲೇ ಕುವೆಂಪು ಮಲೆನಾಡಿನ ಯುವಕರನ್ನುದ್ದೇಶಿಸಿ ಮಾತಾಡುತ್ತಾ ಆರೋಗ್ಯ ಸಾಧನೆಗೆ ಅಡ್ಡ ಬಂದಿದ್ದ ಗೊಡ್ಡು ಆಚಾರಗಳನ್ನು, ಕುರುಡು ನಂಬುಗೆಗಳನ್ನು ಧರ್ಮ, ದೇವರು ಮತ್ತು ದೇವರ ಪೂಜೆಗಳ ಹೆಸರಿನಲ್ಲಿ ನಡೆಯುತ್ತಿದ್ದ ಅನಾಚಾರಗಳನ್ನು, ಮಧ್ಯಪಾನ, ಬಾಲ್ಯವಿವಾಹ, ಕೋರ್ಟು–ವ್ಯವಹಾರಗಳನ್ನು, ಪುಣ್ಯಾಪುಣ್ಯ ಕಾರ್ಯಗಳಿಗಾಗಿ ಮಾಡುತ್ತಿದ್ದ ದುಂದುವೆಚ್ಚವನ್ನು ಖಂಡತುಂಡವಾಗಿ ಖಂಡಿಸುತ್ತಾರೆ. ಅದೇ ರೀತಿ ತಮ್ಮ ಕಾದಂಬರಿಯಾದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಲೆನಾಡಿನ ಒಕ್ಕಲಿಗರು ಇತರ ಶೂದ್ರವರ್ಗದವರಂತೆ ಬ್ರಾಹ್ಮಣರೊಡ್ಡಿದ ಮತಾಚಾರದ ಮೌಢ್ಯ ಸಂಕುಲಗಳ ಬೋನಿನೊಳಗೆ ಸಿಕ್ಕಿಬಿದ್ದ ಇಲಿಗಳಾಗಿ ಆ ಇಲಿಗಳನ್ನು ಬೋನಿನಿಂದ ಹೊರ ಬಿಡಿಸಲು ಕ್ರೈಸ್ತ ಪಾದ್ರಿಗಳು ತಮ್ಮ ರೀತಿಯ ಪ್ರಯತ್ನಗಳನ್ನು ಮಾಡಿ ಆ ಬೋನಿನಿಂದ ಹೊರಬಂದವುಗಳನ್ನು ಹಿಡಿದು ಹಾಕಿಕೊಳ್ಳಲು ತಮ್ಮದೇ ಆಗಿರುವ ಬೇರೆ ರೀತಿಯ ಬೋನುಗಳನ್ನು ಒಡ್ಡಿಕೊಂಡಿರುವ ಸನ್ನಿವೇಶಗಳನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಾಣುತ್ತೇವೆ. ಇಲ್ಲಿ ಕುವೆಂಪು ವೈಚಾರಿಕ ತಳಹದಿಯಲ್ಲಿ ವಿವರಿಸಿರುವುದನ್ನು ನಾವು ಇಲ್ಲಿಯು ಕೂಡ ಕಾಣಬಹುದು.

ದೇವರು, ಧರ್ಮ, ಪಾಪ, ಪುಣ್ಯ, ಸ್ವರ್ಗ, ನರಕ ಇತ್ಯಾದಿ ಆಧ್ಯಾತ್ಮಿಕವೇಷದಿಂದ ಜನರನ್ನು ಪಾರು ಮಾಡಿ ಜನರನ್ನು ನಿಜವಾದ ಉಪನಿಷತ್ ಪ್ರಣೀತವಾದ ವೇದಾಂತದ ಆಧ್ಯಾತ್ಮಶಕ್ತಿಯೆಡೆಗೆ ಅವರನ್ನು ಕರೆದೊಯ್ಯಬೇಕೆಂಬುದೇ ಕುವೆಂಪು ಅವರ ಜೀವನದ ಗುರಿಗಳಲ್ಲಿ ಒಂದಾಗಿತ್ತು ಎನ್ನಬಹುದು.

ಕುವೆಂಪು ವಿದ್ಯಾರ್ಥಿ ಸಮೂಹಕ್ಕೆ ಹೋದಾಗಲೆಲ್ಲ ಅವರು ಮತಿ ಗೌರವದ ಅವಶ್ಯಕತೆಯನ್ನು ಅದಕ್ಕೂ ಆತ್ಮ ಗೌರವಕ್ಕೂ ಇರುವ ನಿಕಟ ಸಂಬಂಧವನ್ನು ಒತ್ತಿ ಹೇಳುತ್ತಾರೆ. ಆತ್ಮ ಶ್ರೀಸಾಧಕನಾದ ವಿದ್ಯಾರ್ಥಿಯೂ ಒಬ್ಬ ತಪಸ್ವಿಯೆಂದೂ, ಮಹದಾಲೋಚನೆಗಳನ್ನು ಮಹದನುಭವಗಳನ್ನಾಗಿ ಪರಿವರ್ತಿಸಿ ಆತ್ಮಶ್ರೀಯನ್ನು ಪ್ರಜ್ವಲವಾಗಿ ಮಾಡುವ ಸಾಧನ ವಿಧಾನವೇ ಧ್ಯಾನವೆಂದೂ ಅವರು ತಿಳಿಸಿರುತ್ತಾರೆ.

ಕುವೆಂಪು ಅವರ ವೈಚಾರಿಕ ಪ್ರಜ್ಞೆ ಅವರ ಕಾದಂಬರಿಗಳಲ್ಲಿ ಹಲವೆಡೆ ಮೈದೋರಿರುವುದನ್ನು ಗಮನಿಸಬಹುದು. ಅನ್ಯರ ರಕ್ಷಕ್ಕೆ ಜಿಗಣೆಯಾಗಿರುವ ಪುರೋಹಿತಶಾಹಿಯನ್ನು ಖಂಡಿಸುವಷ್ಟೇ ತೀಕ್ಷ್ಣತೆಯಿಂದ ಬ್ರಾಹ್ಮಣೇತರರ ಅರ್ಥಹೀನ ಸಂಪ್ರದಾಯಗಳನ್ನು ಬಯಲಿಗೆಳೆಯುತ್ತಾರೆ. ಬ್ರಾಹ್ಮಣರು ಶೂದ್ರರನ್ನು ಸುಲಿಗೆ ಮಾಡುತ್ತಿದ್ದಂತೆ ಒಕ್ಕಲಿಗರು ಹೊಲೆಯರನ್ನು ಮಾತ್ರವಲ್ಲ ಒಕ್ಕಲಿಗರನ್ನೇ ಶೋಷಿಸುತ್ತಾರೆ. ಕಾದಂಬರಿಯ ಕಥೆಗಳಲ್ಲಿ ಸಮಕಾಲೀನ ಮೌಢ್ಯ ಸಂಪ್ರದಾಯಗಳನ್ನು ನಿರೂಪಿಸುವ ಮೂಲಕ ಕುವೆಂಪು ಅವರು ಅವುಗಳನ್ನು ಅಪಹಾಸ್ಯಕ್ಕೆ ಗುರಿಮಾಡಿ ಅವುಗಳ ಅರ್ಥಹೀನತೆಯನ್ನು ಹೊರಗೆಡಹುವಲ್ಲಿ ಸಫಲತೆಯನ್ನು ಹೊಂದಿದ್ದಾರೆ.

ಒಟ್ಟಿನಲ್ಲಿ ಕುವೆಂಪು ಅವರ ಜೀವನದಂತೆಯೇ ಅವರ ಸಾಹಿತ್ಯದಲ್ಲಿಯೂ ಈ ಮೌಲ್ಯತ್ರಯಗಳು ದಟ್ಟವಾಗಿ ವ್ಯಾಪಿಸಿಕೊಂಡಿವೆಯೆಂದೇ ಹೇಳಬಹುದು. ವೈಚಾರಿಕತೆಯೇ ಅವರ ಬಾಳಿನ ಉಸಿರು, ವೈಜ್ಞಾನಿಕತೆಯೇ ಅವರ ಜೀವನ ವಿಧಾನ, ಆಧ್ಯಾತ್ಮಿಕತೆಯೇ ಅವರ ಬದುಕಿನ ಗುರಿ, ಈ ಮೂರು ಗುಣಗಳು ಬಾಲ್ಯದಿಂದಲೇ ಅವರ ಬದುಕಿನ ಪ್ರಧಾನ ಭಾಗವಾಗಿ ಅವರ ಉಸಿರಿನ ಉಸಿರಾಗಿ ಅವರ ಸಕಲ ಸಾಹಸೋದ್ಯಮಗಳ ನೆಲೆ ಬೆಲೆಗಳಾಗಿ ಅವರ ಬಾಳಿಗೆ ಆಸರೆಯಾಗಿ ಅವರ ಸಹಜ ಧರ್ಮಗಳೆಂಬಂತೆ ಉಳಿದು ಬಂದಿವೆಂಬ ಸಂಗತಿ ಸ್ಥೂಲವೂ ಸಂಕ್ಷೇಪವೂ ಆದ ಮೇಲಣ ವ್ಯಾಖ್ಯಾನದಿಂದ ವೇದ್ಯವಾಗದಿರದು. ಈ ನಿಟ್ಟಿನಲ್ಲಿ ಕುವೆಂಪುರವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವೈಚಾರಿಕತೆಯ ನೆಲೆಗಟ್ಟನ್ನು ಸಾಂದರ್ಭಿಕವಾಗಿ ತಿಳಿಸಿರುವುದನ್ನು ನಾವು ಕಾಣಬಹುದಾಗಿದೆ.

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬೃಹತ್ ಮತ್ತು ಮಹತ್ತುಗಳಲ್ಲಿ ಕಾದಂಬರಿ ಲೋಕಕ್ಕೆ ವಿಶಿಷ್ಟವೆನಿಸಿದ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ವಿಸ್ತಾರವಾದ ರಚನೆ ಮತ್ತು ವೈವಿಧ್ಯಗಳಿಂದ ಕೂಡಿದೆ. ಅರವತ್ತಕ್ಕೂ ಮಿಗಿಲಾದ ಪಾತ್ರ ರಚನೆ, ವಿಶಿಷ್ಟವೆನ್ನಬಹುದಾದ ನಿರೂಪಣಾ ಶೈಲಿಯನ್ನು ಈ ಕಾದಂಬರಿ ಒಳಗೊಂಡಿದೆ. ಪಟ್ಟಿಮಾಡುತ್ತಾ ಹೋದಷ್ಟು ಇನ್ನಿಲ್ಲದ ಗುಣ ವಿಶೇಷಗಳು ಈ ಕೃತಿಯ ಸ್ಥಾನವನ್ನು ಸಾಹಿತ್ಯ ಕ್ಷೇತ್ರದಲ್ಲಿ ಅಜರಾಮರಗೊಳಿಸಿವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಕುರಿತು ಹಲವಾರು ಅಧ್ಯಯನ ಮತ್ತು ಚರ್ಚೆಗಳು ಈ ತನಕ ನಿರಂತರವಾಗಿ ನಡೆದು ಬಂದಿವೆ.

ನನ್ನ ಈ ಅಧ್ಯಯನದ ಸಮಕಾಲೀನ ಸಂದರ್ಭದಲ್ಲೂ ಈ ಬಗೆಯ ಅಧ್ಯಯನಕ್ಕೆ 'ಮಲೆಗಳಲ್ಲಿ ಮದುಮಗಳು' ಸಿದ್ಧವಾಗಿದೆ. ಅಂದರೆ ಕೃತಿಯಲ್ಲಿನ ಸಾರಸತ್ವ ಆ ಬಗೆಯದು. ಈ ಕೃತಿಯನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಮುಖ್ಯವಾಗಿ ಈ ಲೇಖಕನ ಗಮನಕ್ಕೆ ಬಂದ ಕೃತಿ ಹಾಗೂ ಲೇಖನಗಳನ್ನು ಸಂಕ್ಷಿಪ್ತವಾಗಿಯಾದರೂ ಗ್ರಹಿಸಬಹುದಾಗಿದೆ. 'ಮಲೆಗಳಲ್ಲಿ ಮದುಮಗಳು' ಕೃತಿಯನ್ನು ಕುರಿತು ಅಧ್ಯಯನವನ್ನು ಈಗಾಗಲೇ ಕೈಗೊಂಡ ಗುರುಪಾದ ಮರಿಗುದ್ದಿಯವರು ಹಲವು ಮಹತ್ವದ ವಿಚಾರಗಳನ್ನು ಹೇಳಿದ್ದಾರೆ. ಇನ್ನೂ ಈ ಕೃತಿಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದವರಿಗಿಂತ ಹೆಚ್ಚಾಗಿ ಕುವೆಂಪು ಅವರ ಎರಡು ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಗುಮಾಡಿದರೆ ಮಿಗಿಲಾಗಿದ್ದಾರೆ. ವಿ.ಎಂ.ಇನಾಂದಾರರು ಕುವೆಂಪು ಕಾದಂಬರಿಗಳು ಎಂಬ ಶಿರ್ಷಿಕೆಯಡಿ ಒಂದು ಕೃತಿಯನ್ನು ರಚಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಪಾತ್ರರಚನೆ ಹಾಗೂ ಬಂಧವನ್ನು ಕುರಿತು ಚರ್ಚೆಗೆ ಅವಕಾಶವಿತ್ತಿದ್ದಾರೆ. ಕುವೆಂಪು ಕಾದಂಬರಿಗಳಲ್ಲಿ 'ಜೈವಿಕಜಾಲ' ಎಂಬ ಕಿರು ಕೃತಿಯನ್ನು ವಿ.ಚಂದ್ರಶೇಖರ್ ನಂಗಲಿಯವರು ನೀಡಿದ್ದಾರೆ. ಕುವೆಂಪು ಕಾದಂಬರಿಗಳಲ್ಲಿ 'ಪರಿಸರ' ಎಂಬ ಮತ್ತೊಂದು ಕಿರು ಕೃತಿಯನ್ನು ಗುರುಪಾದ ಮರಿಗುದ್ದಿಯವರು ರಚಿಸಿದ್ದಾರೆ.

'ಮಲೆಗಳಲ್ಲಿ ಮದುಮಗಳು' ಕೃತಿಯ ಮೇಲೆ ಪುಸ್ತಕ ರೂಪದ ಪ್ರತ್ಯೇಕ ವಿಮರ್ಶೆಗಿಂತ ಲೇಖನಗಳು ಹೆಚ್ಚು ರಚನೆಗೊಂಡಿರುವುದನ್ನು ಕಾಣಬಹುದು. ಅವುಗಳಲ್ಲಿ ಶ್ರೀಕೃಷ್ಣ ಆಲನಹಳ್ಳಿ ಅವರ 'ಮಲೆಗಳಲ್ಲಿ ಮದುಮಗಳು' 'ಪಾತ್ರಗಳ ಅಭ್ಯಾಸ' ಎಂಬ ಲೇಖನ

ಎಂ.ಜಿ.ಕೃಷ್ಣಮೂರ್ತಿಯವರ 'ಮಲೆಗಳಲ್ಲಿ ಮದುಮಗಳು' ಇವರ ಲೇಖನಗಳು ಗಮನಾರ್ಹವಾದವು. ಇನ್ನುಳಿದಂತೆ ಅಭ್ಯಾಸಕ್ಕೆಂದು ನಾನು ನೋಡಿದ ಬಹುತೇಕ ಲೇಖನಗಳು ಕುವೆಂಪು ಅವರ ಕೃತಿಗಳ ಅಧ್ಯಯನಕ್ಕೆ ತೊಡಗಿರುವಂತವು.

ಅವುಗಳಲ್ಲಿ ಹೆಸರಿಸಬಹುದಾದವೆಂದರೆ ಹೆಚ್.ಬಿ.ಯಶೋಧರಾ ಅವರ ಕುವೆಂಪು ಕಾದಂಬರಿಗಳಲ್ಲಿ 'ಸ್ತ್ರೀ', ಡಿ.ಆರ್.ನಾಗರಾಜರ 'ಕುವೆಂಪು ಕೃತಿಗಳಲ್ಲಿ ವರ್ಣ, ವರ್ಗ ಸಂಘರ್ಷ, ಬಿ.ಕೃಷ್ಣಪ್ಪನವರ 'ದಲಿತ ಜೀವನಚಿತ್ರ' ಜಿ.ಎಸ್.ಆಮೂರರ 'ಕುವೆಂಪು ಕಾದಂಬರಿಗಳಲ್ಲಿ ಪ್ರಕೃತಿ ಸಂಸ್ಕೃತಿ', ರಾಜಾರಾಮ ಹೆಗಡೆ ಅವರ ಕುವೆಂಪು ಕಾದಂಬರಿಗಳಲ್ಲಿ ವಸಾಹತುಶಾಹಿಯ ಸ್ವರೂಪ, ದೇ.ಜ.ಗೌ, ಗಿರಡ್ಡಿಗೋವಿಂದರಾಜು, ಸುಜನಾ, ರಾಗೌ ಹಾಗೂ ಕೀರ್ತಿನಾಥ ಕುರ್ತಕೋಟಿ ಇವರ ಮೌಲಿಕವಾದ ಲೇಖನಗಳನ್ನು ಕಾಣಬಹುದು. ಒಟ್ಟಾರೆಯಾಗಿ ಈ ಕೃತಿಯ ಮೇಲೆ ಸಾವಿರಕ್ಕಿಂತ ಹೆಚ್ಚು ಪುಟಗಳಷ್ಟು ವಿಮರ್ಶಾ ಬರಹ ನಡೆದಿರುವುದನ್ನು ಗುರುತಿಸಬಹುದಾಗಿದೆ.

ಪ್ರಸ್ತುತ ನಿಬಂಧದ ಅಧ್ಯಯನದ ಉದ್ದೇಶ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿರುವ ಗಾಢವಾದ ಅನುಭವ ಮತ್ತು ವೈಚಾರಿಕತೆಯನ್ನು ಕುರಿತಿದೆ. ಜೊತೆಗೆ ವೈವಿಧ್ಯದಿಂದ ಕೂಡಿದ ಈ ಕೃತಿಯ ಮಹತ್ವ ಮತ್ತೆ ಚರ್ಚೆಯಾಗಲಿ ಎಂಬ ಧೋರಣೆ. ಕೆಲವು ಅಪೂರ್ಣ ಹಾಗೂ ಅಸ್ಪಷ್ಠ ಚರ್ಚೆಯನ್ನು ಪೂರ್ಣಗೊಳಿಸಿ ಸ್ಪಷ್ಟಪಡಿಸುವುದು ಇವೆ ಮೊದಲಾದ ಮುಖ್ಯ ಕಾರಣ, ಹಾಗೂ ವಿವಿಧ ಆಯಾಮಗಳಲ್ಲಿ ಕೃತಿಯನ್ನು ನೋಡುವುದು ಅಧ್ಯಯನದ ಉದ್ದೇಶಕ್ಕೆ ಪೂರಕವಾಗಿದೆ. ಇನ್ನು ಅಧ್ಯಯನದ ವ್ಯಾಪ್ತಿಯನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಾದರೆ ಕುವೆಂಪು ಉಳಿದ ಸಾಹಿತ್ಯ ಪ್ರಕಾರಗಳ ಕೃಷಿಯ ಜೊತೆಗೆ ಕಾದಂಬರಿ ಕೃಷಿಯನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ 'ಕಾದಂಬರಿಕಾರರಾಗಿ ಕುವೆಂಪು' ಎಂಬ ಅಧ್ಯಯನವನ್ನು ಈ ಪ್ರಬಂಧದ ವ್ಯಾಪ್ತಿಗೆ ಅಳವಡಿಸಲಾಗಿದೆ. ಪಾತ್ರ ಚಿತ್ರಣ ಹಾಗೂ ವೈಚಾರಿಕ ದೃಷ್ಟಿಯಿಂದ 'ಮಲೆಗಳಲ್ಲಿ ಮದುಮಗಳು' ಕೃತಿ ಭಿನ್ನವಾಗಿರುವುದನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಹೊಸದು. ವಸ್ತುವಿನ್ಯಾಸ ಹಾಗೂ ಪಾತ್ರ ರಚನೆ ಮತ್ತು ವೈಚಾರಿಕತೆ ಕುರಿತ ಪ್ರತ್ಯೇಕ ಅಧ್ಯಯನ ನಡೆದಿರುವುದನ್ನು ಕಾಣಬಹುದಾಗಿದೆ. 'ಮಲೆಗಳಲ್ಲಿ ಮದುಮಗಳು' ಕೃತಿ ಮುಖ್ಯವಾಗಿ ಮಾನವನ ಸಹಜ ಬಯಕೆಗಳಲ್ಲಿ ಒಂದಾದ ಕಾಮವನ್ನು ಕುರಿತಾದ್ದರಿಂದ 'ಪ್ರಣಯ ಜೀವನ' ಎಂಬ ಅಧ್ಯಯನವನ್ನು ಕೂಡ ಇಲ್ಲಿ ಕೈಗೊಳ್ಳಲಾಗಿದೆ.

ಕುವೆಂಪು ಆರಂಭದಲ್ಲಿ ನವೋದಯ ಸಾಹಿತ್ಯದ ರಮ್ಯ ಪ್ರಕಾರಗಳಲ್ಲಿ ಕೆಲಸಮಾಡಿದ್ದು ಕಾದಂಬರಿಯಂಥ ವಾಸ್ತವಿಕ ನೆಲೆಗಟ್ಟಿನ ಕೃತಿರಚನೆಗೆ ತೊಡಗಿದ್ದೊಂದು ವಿಶೇಷ ಸಂಗತಿ. ಈ ನೆಲೆಯಿಂದ 'ವಾಸ್ತವತಾವಾದ ಮತ್ತು ಕುವೆಂಪು' ಎಂಬ ಅಧ್ಯಯನವನ್ನು ರಚಿಸಲಾಗಿದೆ. ಜೀವನ ಎಂದ ಮೇಲೆ ಅಲ್ಲಿ ಹೊಂದಾಣಿಕೆ ಇರುವಂತೆಯೇ ವಿರೋಧ ಕೂಡ ಸರ್ವೇ ಸಾಮಾನ್ಯ. ಈ ಧೋರಣೆಗೆ ಪೂರಕವೆಂಬಂತೆ 'ವೈಚಾರಿಕತೆ' ಎಂಬ ಅಧ್ಯಯನವನ್ನು ಇಲ್ಲಿ ಪ್ರಮುಖವಾಗಿ ರೂಪಿಸಿದೆ. ಇನ್ನುಳಿದಂತೆ ಕಾದಂಬರಿಯ ಬಹುಮುಖ್ಯ ಅಂಶಗಳಾದ 'ಜಾತಿಪದ್ಧತಿ' ಹಾಗೂ 'ಮೂಢನಂಬಿಕೆ' ಮತ್ತು 'ಧಾರ್ಮಿಕ ಬದಲಾವಣೆಯನ್ನು' ಅಧ್ಯಯನಕ್ಕೆ ಒಳಗು ಮಾಡಿದೆ. ನಿಬಂಧದ ಉಪಸಂಹಾರ ಭಾಗಗಳಲ್ಲಿ ಕೃತಿಯ ಅರ್ಥ ಮತ್ತು ಮೌಲ್ಯವನ್ನು ಕುರಿತ ಸಂಕ್ಷಿಪ್ತ ವಿವೇಚನೆಯನ್ನು ಕೈಗೊಳ್ಳಲಾಗಿದೆ. ಅನುಬಂಧದಲ್ಲಿ ಕಾದಂಬರಿ ಪ್ರಕಾರ ಹಾಗೂ ಅದರ ವೈಶಿಷ್ಟ್ಯವನ್ನು ಸಂಕ್ಷಿಪ್ತವಾಗಿ ಕಾಣಬಹುದು.

ಅಧ್ಯಾಯ-೨

ಕಾದಂಬರಿಕಾರರಾಗಿ ಕುವೆಂಪು

ಕುವೆಂಪುರವರು 'ಕಾನೂರು ಹೆಗ್ಗಡತಿ'ಯ ಅರಿಕೆಯಲ್ಲಿ ಕಾದಂಬರಿ 'ಕರತಲ ರಂಗಭೂಮಿ' 'ಅಂಗೈ ಮೇಲಣ ನಾಟಕ ಶಾಲೆ' ಎಂದು ಕಾದಂಬರಿ ಕುರಿತು ವ್ಯಾಖ್ಯಾನಿಸಿದ್ದಾರೆ. ಮುಂದುವರಿದು ಕೃತಿಯ ಸೃಷ್ಟಿಯ ರಹಸ್ಯಕ್ಕಿಂತ ಓದುಗರ ಜವಾಬ್ದಾರಿಯನ್ನೇ ಒತ್ತಿ ಹೇಳಿದ್ದಾರೆ. ಅದನ್ನೇ ವಿಸ್ತರಿಸುತ್ತಾ ಕೃತಿ ರಚನೆಯಂತೆ ಕೃತಿಯ ರಸಸ್ವಾದನೆಯ ಒಂದು ಸೃಷ್ಟಿಯಕಾರ್ಯ, ಇದನ್ನು ಕಥೆಯ ಕೋಲಾಹಲಕ್ಕಾಗಿ ಓದಬೇಡಿ, ಸಾವಧಾನವಾಗಿ ಸಚಿತ್ರವಾಗಿ ಸಜೀವವಾಗಿ ಓದಿ ಎಂಬ ಸೂಚನೆಗಳನ್ನು ನೀಡಿದ್ದಾರೆ.

'ಮಲೆಗಳಲ್ಲಿ ಮದುಮಗಳು' ಕೃತಿಗೆ ಯಾವುದೇ ಅರಿಕೆ, ಮುನ್ನುಡಿ ಇಲ್ಲ. ಇಲ್ಲಿ ಯಾರೂ ಮುಖ್ಯರಲ್ಲ, ಯಾರು ಅಮುಖ್ಯರಲ್ಲ, ಯಾವುದೂ ಯಕಶ್ಚಿತ್‌ವಲ್ಲ, ಇಲ್ಲಿ ಎಲ್ಲಕ್ಕೂ ಇದೆ ಅರ್ಥ ಯಾವುದೂ ಅಲ್ಲ ವ್ಯರ್ಥ, ನೀರೆಲ್ಲವೂ ತೀರ್ಥ, ಎಂಬ ಸೂತ್ರ ರೂಪದ ಹೇಳಿಕೆ ಇಡೀ ಕಾದಂಬರಿಯನ್ನು ಬಿಂಬಿಸುತ್ತದೆ. ಈ ಮಾತುಗಳಲ್ಲಿ ಕುವೆಂಪು ಅವರ ಕಾದಂಬರಿಗಳನ್ನು ಒಳಗೊಂಡಂತೆ ಒಟ್ಟು ಕಾದಂಬರಿಯು ಓದುಗನಲ್ಲಿ ಪುನರ್ ಸೃಷ್ಟಿಗೊಳ್ಳಬೇಕು, ಎರಡನೇಯದಾಗಿ ಯಾವುದನ್ನು ಕಡೆಗಣಿಸದೆ ಎಲ್ಲವೂ ಪ್ರಧಾನವೇ ಅರ್ಥಪೂರ್ಣವೇ ಎಂದು ಸ್ವೀಕರಿಸಬೇಕು. ಅಂದರೆ ಯಾವುದೇ ಒಂದು ವಿಶಿಷ್ಟ ಕೃತಿ ಹೊರಬರಲು ಒಂದು ಅಗತ್ಯಭೂಮಿಕೆ ಸಿದ್ದಗೊಂಡಿರಬೇಕು ಇಲ್ಲವೆ ಅದನ್ನು ಸ್ವೀಕರಿಸುವ ಅರಿಯುವ ವಿಧಾನಗಳ ಬಗೆಗೆ ಓದುಗರು, ವಿಮರ್ಶಕರು, ಸಮರ್ಥರಾಗಿರಬೇಕಾಗುತ್ತದೆ.

ಕಾದಂಬರಿಗಳನ್ನು ಕುರಿತು ಕುವೆಂಪುರವರ ಮಾತುಗಳನ್ನೇ ಕೇಳುವುದಾದರೆ "ನಾನು ಮೊದ-ಮೊದಲು ಕಾದಂಬರಿಗಳ ಬಗ್ಗೆ ಅಷ್ಟೇನೂ ಒಳ್ಳೆ ಅಭಿಪ್ರಾಯ ಇಟ್ಟುಕೊಂಡವನಲ್ಲ, ಅದೇನು ಮಹಾ ಅಂತ ಓದುತ್ತಲೇ ಇರಲಿಲ್ಲ, ಅಕಸ್ಮಾತಾಗಿ ಟಾಲ್‌ಸ್ಟಾಯ್ ಅವರ 'ರಿಸರಕ್ಷನ್' ಕಾದಂಬರಿ ಓದಿದೆ, ಆಮೇಲೆ ಅದೂ ಮಹತ್ತಾದ ಕಲಾ ವಿಧಾನ ಅನ್ನಿಸಿತು ನಾನು ಬರೆದೆ"[೧] ಎಂದಿದ್ದಾರೆ.

---

೧. ಕುವೆಂಪು:ಪುನರಾಲೋಕನ-ಜಿ.ಎಸ್.ಶಿವರುದ್ರಪ್ಪ:ಪು.ಸಂ.೨೩೦.

ಕುವೆಂಪು ತಮ್ಮ ಸಾಹಿತ್ಯ ಸೃಷ್ಟಿಯ ನಾಂದಿಯಾಗಿ ಆರಿಸಿಕೊಂಡದ್ದು ಪದ್ಯ ಸಾಹಿತ್ಯವನ್ನು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಉತ್ಕೃಷ್ಟ ಕೃತಿಗಳನ್ನು ನೀಡಿದ ಧೀಮಂತ ಪ್ರತಿಭೆ ಕುವೆಂಪು. ಭಾವಗೀತೆ, ಕಥನ, ಕವನ, ವಚನಗಳು, ನಾಡಗೀತೆ, ಪ್ರಕೃತಿ ಗೀತೆ ಇವೆ ಮೊದಲಾದ ಪದ್ಯ ಸಾಹಿತ್ಯ ರೂಪಗಳಲ್ಲಿ ಕುವೆಂಪು ಗಮನಾರ್ಹ ಕೊಡುಗೆ ಕೊಟ್ಟಿದ್ದಾರೆ. ಪದ್ಯ ಸಾಹಿತ್ಯದ ಮೇರು ಶಿಖರವಾದ ಮಹಾಕಾವ್ಯ ನೀಡಿರುವುದು ಮತ್ತೊಂದು ವಿಶೇಷ. ಆದರ್ಶ ನೆಲೆಯಲ್ಲಿ ಚಿತ್ರಣಗೊಂಡ ಮಹಾಕಾವ್ಯದ ತರುವಾಯ ಮತ್ತೆ ವಾಸ್ತವತಾ ನೆಲೆಯ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ರಚಿಸಿದ್ದು ಒಂದು ವಿಸ್ಮಯ. ಆತ್ಮ ಕಥನಕಾರರಾಗಿ, ವಿಮರ್ಶಕರಾಗಿ, ಕಾವ್ಯಮೀಮಾಂಸಕರಾಗಿ ಬಹು ದೊಡ್ಡ ಕೃತಿಗಳನ್ನು ವೈವಿಧ್ಯಮಯವಾಗಿ ಕಟ್ಟಿಕೊಂಡಿದ್ದಾರೆ. ಯಾವುದೇ ಒಬ್ಬ ಸಾಹಿತಿ ಇಷ್ಟೊಂದು ಸಂಖ್ಯೆಯ ಪ್ರಕಾರಗಳಲ್ಲಿ ಸಮರ್ಥವಾಗಿ ಸಾಹಿತ್ಯ ರಚಿಸಿದ್ದು ಅಪರೂಪ. ಎಲ್ಲಕ್ಕಿಂತ ಮಿಗಿಲಾಗಿ ನಾಟಕಕಾರರಾಗಿ ಮಹಾಕಾವ್ಯ ರಚನಾಕಾರರಾಗಿ ಕುವೆಂಪು ಯಶಸ್ವಿಯಾಗಿದ್ದಾರೆ. ಮಹಾಕಾವ್ಯ ಬರೆದಾದ ತರುವಾಯ ಅನುಭವ ಸಂಪತ್ತೆಲ್ಲ ಮುಗಿದು ಹೋಗುತ್ತದೆ ಎನ್ನುವ ಸಂಪ್ರದಾಯಗಳಿಗೆ 'ಮಲೆಗಳಲ್ಲಿ ಮದುಮಗಳು' ಕೃತಿಯೊಂದು ಸವಾಲು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಬಹುತೇಕ ಲೇಖಕರು ತಮ್ಮ ಅಭಿವ್ಯಕ್ತಿಗಾಗಿ ಯಾವುದೋ ಒಂದೆರಡು ಪ್ರಕಾರಗಳನ್ನಷ್ಟೇ ಬಳಸಿಕೊಂಡಿದ್ದಾರೆ. ಆದರೆ ಕುವೆಂಪು ಎಂಬ ಮಹಾನ್ ಚೇತನ ಸಾಹಿತ್ಯದ ಬಹುತೇಕ ವಿಭಾಗಗಳಲ್ಲಿ ಅತ್ಯುತ್ತಮ ರಚನೆಗಳನ್ನು ನೀಡಿದೆ. ಈ ತೆರನಾಗಿ ಸಾಹಿತ್ಯ ಲೋಕವನ್ನು ಆವರಿಸಿಕೊಂಡವರು ವಿಶ್ವಮಟ್ಟದಲ್ಲೇ ವಿರಳಾತೀ ವಿರಳ ಸಂಖ್ಯೆಯಲ್ಲಿದ್ದಾರೆ.

ಆ ಮಹತ್ವದ ಪಂಕ್ತಿಯಲ್ಲಿ ಕುವೆಂಪು ಅವರಿಗೆ ಒಂದು ವಿಶೇಷ ಸ್ಥಾನ. ಯಾವುದೇ ಪ್ರಕಾರದಲ್ಲಿ ಸಾಹಿತ್ಯ ಕೃಷಿ ಮಾಡಲಿ ಅದರಲ್ಲಿ ನವೀನತೆ ಹಾಗೂ ಪರಂಪರೆಯ ಸಮ್ಮಿಶ್ರಣವನ್ನು ಕಾಣಬಹುದು. ಕುವೆಂಪು ಹೊಸದೆಂದು ಎಲ್ಲವನ್ನು ಸ್ವೀಕರಿಸುವ ಹಳೆಯದೆಂದು ಸಂಪೂರ್ಣ ನಿರಾಕರಿಸುವ ಆತುರದ ನಿರ್ಧಾರ ಮಾಡಿಲ್ಲ. ಬದಲಾಗಿ ಎಲ್ಲವನ್ನು ಮೌಲ್ಯದ ಒರೆಗಲ್ಲಿಗೆ ಹಚ್ಚಿ ನೋಡಿ ಸ್ವೀಕರಿಸಿದ್ದಾರೆ.

ಪ್ರಕಟಣೆಯ ಕ್ರಮದಲ್ಲಿ ೧೯೩೬ರಲ್ಲಿ ಬಂದ ಕಾನೂರು ಹೆಗ್ಗಡತಿ ಮೊದಲನೆಯದು. ಹೆಗ್ಗಡತಿಯ ಪ್ರಮುಖ ಘಟನೆಗಳಲ್ಲಿ ಮನೆಯ ಹೊರಗೆ ಅಂದರೆ ಕಾಡು, ಬಯಲುಗಳಲ್ಲಿ ಅದೂ ಪ್ರಯಾಣ ಸಂದರ್ಭಗಳಲ್ಲಿ ನಡೆದು ಹೋಗುತ್ತದೆ. ಮೊದಲ ಕೃತಿಯ ಪ್ರಕಟಣೆಯ ಅವಧಿ ಭಾರತೀಯ ಸ್ವಾತಂತ್ರ್ಯ ಹೋರಾಟದ ಪ್ರಮುಖ ಕಾಲಘಟ್ಟವಾಗಿತ್ತು. ಗಾಂಧೀಜಿ ಅವರು

ಹೋರಾಟದ ಮುಂದಾಳಾಗಿದ್ದರು. ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಶಕ್ತಿಯನ್ನು ಬಡಿದೆಬ್ಬಿಸಿದ್ದರ ಧ್ವನಿ ಎಲ್ಲೆಡೆ ಮೊಳಗುತ್ತಿತ್ತು. ಮೊದಲ ವಿಶ್ವ ಯುದ್ಧದ ಪರಿಣಾಮಗಳು ಮೊದಲಾದವು ಎದ್ದು ಕಾಣುತ್ತಿದ್ದವು. ಕುವೆಂಪು ಬದುಕಿನಲ್ಲಿ ಈ ದಶಕ ಹಲವು ಘಟನಾವಳಿಗಳಿಂದ ಕೂಡಿತ್ತು. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ನೆಲೆಸಿದ್ದ ಅವರು ಟಾಲ್‌ಸ್ಟಾಯ್ ಕಾದಂಬರಿಗಳನ್ನು ಆತನ ಜೀವನ ಚರಿತ್ರೆಯನ್ನು ಓದಿ ಪ್ರಭಾವಿತರಾದದ್ದನ್ನು ಕಾಣಬಹುದು. ಅಂತಹ ಮಹಾಕೃತಿಗಳು ಕನ್ನಡದಲ್ಲಿ ಬರಬೇಕೆಂಬ ಯೋಚನೆ ಅವರನ್ನು ಬಲವಾಗಿ ಕಾಡಿದೆ. ತಮ್ಮ ಅವಜ್ಞೆಗೆ ಒಳಗಾಗಿದ್ದ ಕಾದಂಬರಿ ಪ್ರಕಾರದ ಬಗ್ಗೆ ಆಸಕ್ತಿ ಮೂಡಿದ್ದು ಈ ರೀತಿಯಲ್ಲಿ ಎನ್ನಬಹುದು. ಕಾನೂರು ಹೆಗ್ಗಡತಿಯನ್ನು ಅವರು ಬರೆಯತೊಡಗಿದ್ದು ಈ ದಿನಗಳಲ್ಲಿ. ಭಾವಗೀತೆ, ನಾಟಕ, ವಿಮರ್ಶಾ ಲೇಖನಗಳ ಬರವಣಿಗೆಯಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದ ಅವಧಿಯಲ್ಲಿಯೇ ಅವರ ಕಾದಂಬರಿಯೂ ಆರಂಭಗೊಂಡಿದ್ದನ್ನು ಗುರುತಿಸಬಹುದು. ರಾಮಕೃಷ್ಣಾಶ್ರಮದಲ್ಲಿ ಸಾಧಕ ಜೀವನ ಸಾಗಿಸುತ್ತಿದ್ದಾಗ ಅಂದರೆ ೧೯೩೬ರಲ್ಲಿ ಕಾದಂಬರಿ ಬೆಳಕು ಕಂಡಿತು. ಭಾರತೀಯ ಸಂದರ್ಭಕ್ಕೆ ಕಾದಂಬರಿ ಹೆಜ್ಜೆಯಿಟ್ಟಿದ್ದು ಮಹತ್ವದ ಸಂಗತಿಯಾದಂತೆಯೇ, ಕನ್ನಡಕ್ಕೆ 'ಕಾನೂರು ಹೆಗ್ಗಡತಿ'ಯ ಪ್ರಪಂಚ ಬಯಲುನಾಡಿನ ಓದುಗನಿಗೆ ದಿಗ್ಭ್ರಮೆಯನ್ನುಂಟು ಮಾಡುವಂತಹ ಮಲೆನಾಡಿನ ಪರಿಸರದ್ದು. ನಾಗರೀಕ ಜಗತ್ತಿನಿಂದ ಬೇರೆಯ ಆದ ಜೀವನ ವಿಧಾನ, ಹೊಸ ಪ್ರಾದೇಶಿಕ ಜಗತ್ತಿನ ಅನಾವರಣದ ಕಾರಣದಿಂದ ಮಾತ್ರವೇ ಇದು ಮಹತ್ವದ ಕೃತಿಯಾಗಿಲ್ಲ.

ಕಥಾ ಹಂದರ ಕಥನಾಕ್ರಮ ಅಲ್ಲಿಯ ವಿವರಗಳು ವರ್ಣನೆ, ಭಾಷಾ ಪಾತ್ರಬಾಹುಳ್ಯ ಘಟನೆಗಳು, ಪ್ರತಿಮೆ ಸಂಕೇತಗಳು, ಕನಸುಗಳು, ಧೋರಣೆ ಆಶಯಗಳು ಮತ್ತು ಇವೆಲ್ಲವನ್ನು ಕಲಾತ್ಮಕವಾಗಿ ಸಂಯೋಜನೆಗೊಳಿಸಿರುವ ಕ್ರಮದಿಂದಾಗಿ ತಮ್ಮ ಕಾಲದ ಕಾದಂಬರಿಗಳಿಂದ ಕುವೆಂಪು ಅವರ ಕಾನೂರು ಹೆಗ್ಗಡತಿ ಭಿನ್ನವಾಗುತ್ತದೆ. ಕಾದಂಬರಿಯ ಆರಂಭದಲ್ಲಿ ನಾವು ನೋಡುವುದು ಮೈಸೂರಿನಲ್ಲಿ ಅಧ್ಯಯನ ಕೈಗೊಂಡು ಈಗ ಊರಿಗೆ ಮರಳುತ್ತಿದ್ದ ಮಲೆನಾಡ ಜಮೀನ್ದಾರರ ಮನೆಯ ಬಿಸಿನೆತ್ತರಿನ ತರುಣರನ್ನು. ಇವರ ಪ್ರವೇಶದೊಂದಿಗೆ ಮಲೆನಾಡು ಬಿಚ್ಚಿಕೊಳ್ಳುತ್ತದೆ. ಅವರು ಪಡೆದ ಶಿಕ್ಷಣ ಅದರ ಪ್ರಭಾವದ ಹೊಸ ಉಡುಪು ಕ್ರಾಪುಗಳು, ಹೊಸ ವಿಚಾರ, ಆಲೋಚನೆಗಳು ಅಲ್ಲಿಯ ಪರಂಪರಾಗತ ಬದುಕನ್ನು ಪ್ರಭಾವಿಸಿ ವಿನೂತನ ಚಲನೆಯನ್ನು ಉಂಟುಮಾಡುತ್ತವೆ. ಅದಕ್ಕೆ ಪ್ರತಿಯಾಗಿ ಮಲೆನಾಡಿನ ಸಂಪ್ರದಾಯಗಳು, ಬೇಟೆ, ಆಚರಣೆಗಳು ಅವರನ್ನು ನಿಯಂತ್ರಿಸುತ್ತವೆ. ಇದರಿಂದ ಉಂಟಾಗುವ ಸಂಘರ್ಷ ವ್ಯಕ್ತಿ ಮತ್ತು

ಸಮುಷ್ಠಿಯ ಮಟ್ಟದಲ್ಲಿ ತೀವ್ರವಾಗುತ್ತದೆ. ಇದರೊಂದಿಗೆ ಪ್ರಕೃತಿಯ ಸಾಮರ್ಥ್ಯಗಳು ತಮ್ಮದೇ ತೆರದಲ್ಲಿ ಪ್ರಭಾವ ಬೀರುತ್ತವೆ.

'ಕಾನೂರು ಹೆಗ್ಗಡತಿಯ' ಕಥೆ ಅದರ ಹೆಸರಿನ ಕಾರಣವಾಗಿ ಸುಬ್ಬಮನ ವೃತ್ತಾಂತವೆಂಬಂತೆ ತೋರಿದರೂ ವಾಸ್ತವದಲ್ಲಿ ಚಂದ್ರಯ್ಯಗೌಡರ ಬದುಕಿನ ಏಳುಬೀಳಿನ ಚಿತ್ರಣವನ್ನು ಮುಖ್ಯವಾಗಿ ಒಳಗೊಂಡಂತೆ ಇದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಹೂವಯ್ಯನ ಆದರ್ಶಗಳ ಸೋಲು–ಗೆಲುವುಗಳ ಕಥೆಯಾಗಿ, ಕಾನೂರು ಮುತ್ತಳ್ಳಿ ಸೀತೆ ಮನೆಗಳ ಪ್ರೀತಿ–ದ್ವೇಷಗಳ ಅನಾವರಣವಾಗುತ್ತದೆ. 'ಮಲೆಗಳಲ್ಲಿ ಮದುಮಗಳು' ಹೊರಬಂದಾಗ ನಾಡಿನ ಸಾಂಸ್ಕೃತಿಕ ರಾಜಕೀಯ ಸ್ಥಿತಿ–ಗತಿಗಳು ಭಿನ್ನವಾಗಿದ್ದವು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಎರಡು ದಶಕಗಳು ಉರುಳಿದ್ದವು, ಸ್ವಾತಂತ್ರ್ಯ ಪೂರ್ವದ ಕನಸು, ಆದರ್ಶಗಳು ಈಗಲೂ ನನಸಾಗುವಂತಿರಲಿಲ್ಲ, ಗಾಂಧೀಜಿ, ಲೋಹಿಯಾ, ಅಂಬೇಡ್ಕರ್‌ರ ಸಮಾನತೆ, ಸಮಾಜವಾದಗಳು ಕಾರ್ಯಗತವಾಗದೆ ಅಧಿಕಾರ ಕೇಂದ್ರಿತ ರಾಜಕೀಯ ವ್ಯವಸ್ಥೆ ಬಲಗೊಂಡಿದೆ. ಕಾರಂತರು ಕಾದಂಬರಿಯ ಮೂಲಕ ಮನುಷ್ಯ ಸಂಬಂಧಗಳು ಬದುಕಿನ ಸಂಕೀರ್ಣತೆಯನ್ನು ವೈಚಾರಿಕವಾಗಿ ವಿಶ್ಲೇಷಿಸುತ್ತಿದ್ದ ಕಾಲ. ಮಾಸ್ತಿ, ಗೊರೂರು ಉದಾರ ಮಾನವೀಯತೆಯ ಚಿತ್ರಣ ನೀಡುತ್ತಿದ್ದರು. ಇದೇ ಹೊತ್ತಿಗೆ ಕಾದಂಬರಿ ರಂಗವು ಪ್ರಗತಿಶೀಲರ ಸಾಮಾಜಿಕತೆಯ ಕಟು ವಾಸ್ತವದಲ್ಲಿ ಹೋರಾಟದ ಅಸ್ತ್ರವಾಗಿತ್ತು. ಕಾದಂಬರಿಕಾರರಾಗಿ ಕುವೆಂಪು ಭಿನ್ನವಾಗಿದ್ದು ಈ ಸಂದರ್ಭದಲ್ಲೇ ಕುವೆಂಪು ಎರಡನೆಯ ಕಾದಂಬರಿಯಲ್ಲಿ ಕಾಲದ ದೃಷ್ಟಿಯಿಂದ ಹಿಂದಕ್ಕೆ ಹೋದುದೇಕೆ? ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಎದುರಾಗುತ್ತದೆ. ಅದಕ್ಕೆ ಉತ್ತರ ಸ್ಪಷ್ಟವಾಗಿದೆ. ಸಮಕಾಲೀನ ಸಮಸ್ಯೆಗಳನ್ನು ಇತಿಹಾಸದ ಬೆಳಕಿನಲ್ಲಿ ಇಟ್ಟು ನೋಡುವುದು. ವರ್ತಮಾನವನ್ನು ಅರ್ಥೈಸಲು ಚರಿತ್ರೆಯ ಕಾಲಖಂಡದ ಪರೀಕ್ಷೆಯನ್ನು ಕುವೆಂಪು ಈ ಕೃತಿಯಲ್ಲಿ ಮಾಡಿದ್ದಾರೆ.

'ಮಲೆಗಳಲ್ಲಿ ಮದುಮಗಳು' ಪ್ರಕಟಣೆಯ ದೃಷ್ಟಿಯಿಂದ ಎರಡನೆಯ ಕಾದಂಬರಿಯಾದರೂ ಕಥಾನಕದ ಕಾಲಕ್ರಮದಿಂದಾಗಿ ಅದು ಕಾನೂರು ಹೆಗ್ಗಡತಿಗಿಂತ ಹಿಂದೆ ಸರಿಯುತ್ತದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗ ಇಲ್ಲಿದೆ. ಕಾನೂರು ಹೆಗ್ಗಡತಿಯಲ್ಲಿ ಒಂದೆಡೆಗೆ ಕಾನೂರು ಚಂದ್ರಗೌಡರು ಮುತ್ತಳ್ಳಿ ಶಾಮಯ್ಯಗೌಡರು ಕಾಣಿಸಿಕೊಳ್ಳುತ್ತಾರೆ. ಅವರು ಅಲ್ಲಿ ರಸಿಕ ಯುವಕರಾಗಿದ್ದು ದೋಣಿಯಲ್ಲಿ ನದಿ ದಾಟಲು ಕಾಯುತ್ತಿರುತ್ತಾರೆ. ಕಾನೂರು ಹೆಗ್ಗಡತಿ ಹಾಗೂ 'ಮಲೆಗಳಲ್ಲಿ ಮದುಮಗಳು' ಎರಡೂ ಕಥಾನಕಗಳು ಹೀಗೆ ಸಂಬಂಧ ಪಡೆದಿವೆ. ಮಲೆನಾಡ ಜೀವನ ಸಮೃದ್ಧಿಯು 'ಮಲೆಗಳಲ್ಲಿ

ಮದುಮಗಳು' ಕಾದಂಬರಿಯು ಅನೇಕ ಪಾತ್ರಗಳಿಂದ ಘಟನೆಗಳಿಂದ ವ್ಯಕ್ತವಾಗಿದೆ. ಕಾದಂಬರಿಯ ಕೇಂದ್ರ ಬೆಳಕು ಮಲೆನಾಡಿನ ಜಮೀನ್ದಾರರ ಮನೆಗಳ ಆಗು-ಹೋಗುಗಳ ಮೇಲೆ ಹೆಚ್ಚು ಬೀಳುವುದಾದರೂ ಅದು ಅಲ್ಲಿಯ ದುಡಿಯುವ ವರ್ಗಗಳ ಬದುಕನ್ನು ಕುಶಲತೆಯಿಂದ ಕಾಣಿಸುತ್ತದೆ. ಹೀಗಾಗಿ ಹಳೆಮನೆ ಸಿಂಬಾವಿ, ದೊಡ್ಡ ಚೌಕಿ ಮನೆಗಳ ಒಳಗಿನ ವಿವರಗಳಂತೆ ಐತ, ಗುತ್ತಿ, ಚೀಂಕ್ರರ ಬಿಡಾರ ಗುಡಿಸಲುಗಳ ಒಳವಿವರಗಳು ಚೆನ್ನಾಗಿ ಮೂಡಿಬರುತ್ತವೆ. ಇಲ್ಲಿ ದೊಡ್ಡವರು ಕೆಳವರ್ಗದವರನ್ನು ಯಾವ ರೀತಿ ನಡೆಸಿಕೊಳ್ಳುತ್ತಾರೆ ಹಾಗೂ ಯಾವ ರೀತಿಯ ಮೌಢ್ಯತೆಯನ್ನು ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಕಾಣಬಹುದು. ಈ ಕಾದಂಬರಿಯ ನಿರೂಪಣೆ ಏಕಮುಖವಾಗಿ ಬಾರದೆ ಬಹುಮುಖವಾಗಿ ಬರುವುದರಿಂದ ಇದರ ವ್ಯಾಪ್ತಿ ಮತ್ತು ವೇಗ ವಿಶಿಷ್ಟವಾಗಿದೆ. ಗುತ್ತಿಯ ಪ್ರಯತ್ನ ಅನೇಕ ರಹಸ್ಯ ವಿಚಾರಗಳನ್ನು ಒಳಗೊಂಡಿದೆ.

ಅದೇ ರೀತಿ ಕೆಳವರ್ಗದ ಜನತೆ ಯಾವ ಯಾವ ರೀತಿಯ ಮೌಢ್ಯತೆಯನ್ನು ಹೊಂದಿದ್ದಾರೆ ಎಂಬುದನ್ನು ತಿಳಿಸುತ್ತದೆ. ಕ್ರಿಶ್ಚಿಯನ್ ಪಾದ್ರಿಯಾದ ಜೀವರತ್ನಯ್ಯ ಜನರನ್ನು ಯಾವ ರೀತಿ ಮರಳು ಮಾಡಿ ಧರ್ಮಾಂದದ ಕಾರ್ಯವನ್ನು ಕೈಗೊಳ್ಳುತ್ತಾನೆ ಎಂಬುದನ್ನು ಒಳಗೊಂಡಿದೆ. ಈ ಕಾದಂಬರಿಯಲ್ಲಿ ಗುತ್ತಿ ಪ್ರಮುಖ ಪಾತ್ರದಾರಿಯಾಗಿದ್ದು ಗುತ್ತಿ ಹೊರಟದ್ದು ತನ್ನ ಒಡೆಯರ ಕೆಲಸಕ್ಕಾಗಿ ಆದರೆ ಅದು ನೆಪ ಮಾತ್ರ, ಆಂತರ್ಯದಲ್ಲಿ ಅವನು ಹೊಂದಿದ್ದ ಯೋಜನೆಯೇ ಬೇರೆ. ಅವನು ತಿಮ್ಮಿಯನ್ನು ಹಾರಿಸಿಕೊಂಡು ಬರುವುದಾಗಿತ್ತು. ದಾರಿ ಸಾಗಿದಂತೆ ಅವನಿಗೆ ಪ್ರಕೃತಿ ನಿರ್ಮಿತ ಮಾನವ ನಿರ್ಮಿತ ಅನೇಕ ಅಡೆತಡೆಗಳು ಒದಗುತ್ತವೆ. ಬದುಕಿನ ಸಂಕೀರ್ಣತೆ ಶಕ್ತಿ ಸಾಮರ್ಥ್ಯಗಳು, ಸಾಂದ್ರತೆಗಳು, ಅಸೆ-ನಿರಾಸೆಗಳು, ಆಕಸ್ಮಿಕಗಳು ಎಲ್ಲ ಆತನ ಪ್ರಯಾಣದ ಕತೆಯಲ್ಲಿ ಸೇರುವಂತೆ ಕುವೆಂಪು ಯೋಜಿಸಿಕೊಂಡಿದ್ದಾರೆ.

ಉಳಿದ ಸಾಹಿತ್ಯ ಪ್ರಕಾರಗಳಂತೆ ಕಾದಂಬರಿ ಪ್ರಕಾರದ ಬಗೆಗೂ ಕುವೆಂಪು ತೋರುವ ಉತ್ಸಾಹ ಮತ್ತು ಶ್ರದ್ಧೆಗಳು ಇಲ್ಲಿಯ ಗದ್ಯವನ್ನು ಹದವಾಗಿಸಿವೆ. ಒಂದು ಭಾವ, ವಿವರ ಘಟನೆಯನ್ನು ಬಿಡಿಯಾಗಿ ಹೇಳುವಾಗ ಸಮಗ್ರತೆಯೊಂದಿಗೆ ಅದರ ಸಂಬಂಧವನ್ನು ಇಡಿಯಾಗಿ ವರ್ಣಿಸುವಾಗ ಅಲ್ಲಿಯ ಬೀದಿಗಳನ್ನು ಅಲಕ್ಷಿಸದಿರುವ ಧಾಟಿ ಅನನ್ಯವೆನಿಸುತ್ತದೆ. ಇದನ್ನು ಗುತ್ತಿ ತಾಯಿತಕ್ಕಾಗಿ ನಿರೀಕ್ಷಿಸುತ್ತಾ ಕೂತಾಗ ಕಾಣುವ ಓಡು ಹುಳದ ಬಣ್ಣನೆಯಲ್ಲಿ, ಹಳೆಮನೆ ಸುಬ್ಬಣ್ಣ ಹೆಗ್ಗಡೆಯ ಮುಂಜಾನೆಯ ಹಂದಿ ಒಡ್ಡಿ, ಕೋಳಿ ಒಡ್ಡಿಗಳ ವಿವರದಲ್ಲಿ ಒಡೇರ ದಿಟ್ಟದ ಪರಿಚಯದಲ್ಲಿ ವಿಶೇಷವಾಗಿ ಕಾಣುತ್ತದೆ. ಮುಕುಂದಯ್ಯರ ವೃತ್ತಾಂತದಂತೆಯೇ ಹುಲಿಯ ನಾಯಿಯ ಸಂಗತಿಯು ಬೆಳವಣಿಗೆ ಕಂಡಿದೆ. ಕುವೆಂಪು ಪ್ರಾದೇಶಿಕ ಸ್ಥಳೀಯ ಚಿತ್ರಣದಲ್ಲಿ

ತೋರುವ ಗಾಡ ನಿಷ್ಠೆಯನ್ನು ಅತೀಂದ್ರಿಯ ಪ್ರಜ್ಞೆಯ ವಿಕಾಸದಲ್ಲೂ ತೋರಿದ್ದಾರೆ. ನಾಯಿಯ ಒಂದು ಪಾತ್ರವಾಗಿ ಚಿತ್ರಣಗೊಂಡಿದ್ದು ಅವರು ಆ ಪ್ರಾಣಿಯನ್ನು ಕಾದಂಬರಿಯಲ್ಲಿ ನಿರ್ವಹಿಸಿದ ಬಗೆ ಇವೆಲ್ಲ ಕಾದಂಬರಿಕಾರರಾಗಿ ಕುವೆಂಪು ಅವರು ಕಂಡುಕೊಂಡು ಕಂಡರಿಸಿದ ಹೊಸ ತನವಾಗಿದೆ.

ಕುವೆಂಪು ಕಾದಂಬರಿಗಳನ್ನು ಕುರಿತು ಅವು ಪ್ರಕಟಣೆ ಗೊಂಡಂದಿನಿಂದ ಹಿಡಿದು ಇಲ್ಲಿಯವರೆಗೂ ವಿಮರ್ಶೆ ಹೊರಬರುತ್ತಲೇ ಇದೆ. ಅಂದರೆ ಸದಾಕಾಲ ಈ ಕೃತಿಗಳು ತಮ್ಮ ಜೀವಂತಿಕೆಯಿಂದ ವಿಮರ್ಶೆಗೆ ಸಿದ್ಧವಾಗಿದೆ. ಲೇಖಕನ ಕಾದಂಬರಿ ರಚನಾ ಕಾರ್ಯ ಆ ಮಟ್ಟಿನ ಮೌಲ್ಯವನ್ನು ಗಟ್ಟಿತನದಲ್ಲಿ ಮೊಗೆದಂತೆಲ್ಲ ಬಿಟ್ಟುಕೊಡುತ್ತದೆ. ಕಾದಂಬರಿಕಾರರಾಗಿ ಕುವೆಂಪು ತಮ್ಮೆರಡು ಕೃತಿಗಳಿಂದ ಅಭೂತ ಪೂರ್ವ ಯಶಸ್ಸು ಪಡೆದಿದ್ದಾರೆ. ಕಾದಂಬರಿಕಾರರಾಗಿ ಕುವೆಂಪು ಪಡೆದ ಸಹೃದಯರ ಸಂಖ್ಯೆ ಅಪರಿಮಿತವಾದದ್ದು, ಎರಡು ಕಾದಂಬರಿಗಳನ್ನು ಓದಿ ಮರು ನೆನೆದಾಗ ಅವುಗಳ ಆಳ, ವಿಸ್ತಾರ, ಜೀವನದ ಸಂಕೀರ್ಣತೆ ಸ್ವಯಂವೇದ್ಯವಾಗುವಂತವು. ಈ ಕಾದಂಬರಿಗಳ ಯಶಸ್ಸು ಕನ್ನಡ ಕಾದಂಬರಿ ಸಾಹಿತ್ಯದ ಅತ್ಯುನ್ನತ ಸಿದ್ಧಿ ಎಂದರೆ ತಪ್ಪಾಗಲಾರದು.

ಕೊನೆಯದಾಗಿ ಕಾದಂಬರಿಕಾರರಾಗಿ ಕುವೆಂಪು ಪ್ರಸ್ತುತ ಅಧ್ಯಯನಕ್ಕೆ ತೆಗೆದುಕೊಂಡಿರುವ ಕೃತಿಯ ಬಗ್ಗೆ ಹೇಳುವ ಮೌಲಿಕ ಮಾತುಗಳನ್ನು ನೋಡಬಹುದು. "ಮಲೆಗಳಲ್ಲಿ ಮದುಮಗಳು ಬರೆಯೋ ಹೊತ್ತಿಗೆ ನನ್ನ ದೃಷಿಯಲ್ಲೇ ಬದಲಾವಣೆ ಆಗಿತ್ತು. ಜೀವ-ಜಗತ್ತು-ಬ್ರಹ್ಮ ಈ ವಿಚಾರಗಳಲ್ಲಿ ಒಂದು ಅತ್ಯಂತ ಪರಿಣಿತ ಸ್ಥಿತಿಗೆ ಬಂದ ಮೇಲೆ ಅದನ್ನು ಬರೆದದ್ದು, ಈ ಒಂದು ಮನೋಧರ್ಮ ಇದಕ್ಕೂ ಹಿಂದೆಯೇ ರೂಪುಗೊಂಡಿತ್ತಾದರೂ ಈ ಕಾದಂಬರಿ ಬರೆಯೋ ಹೊತ್ತಿಗೆ ನಾನು ಸಂಪೂರ್ಣ ಬದಲಾಗಿದೆ. ಈ ಕಾದಂಬರಿಯ ಮೊದಲಲ್ಲಿ ಹೇಳಿದೆನಲ್ಲ ಇಲ್ಲಿ ಯಾವುದೂ ಸಣ್ಣದಲ್ಲ, ಇಲ್ಲಿ ಯಾರು ಮುಖ್ಯರಲ್ಲ ಇತ್ಯಾದಿ. ಪೂರ್ಣ ದೃಷ್ಟಿಯಿಂದ ನೋಡಿದಾಗ ನನಗೆ ಮೇಲು-ಕೀಳು ಎಂಬುದಕ್ಕೆ ಅರ್ಥವಿಲ್ಲ."[೧] ಪ್ರಮುಖವಾಗಿ ಮುಕುಂದಯ್ಯ, ಜೀವರತ್ನಯ್ಯ, ದೇವಯ್ಯ ಹೆಗ್ಗಡೆ ಮುಂತಾದವರು ಮತಾಂತರದಲ್ಲಿ ಯಾವ ರೀತಿಯ ಶೋಚನೀಯ ಸಂಗತಿಗಳನ್ನು ಅನುಭವಿಸುತ್ತಾರೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ. ಈ ಕಾದಂಬರಿಯಲ್ಲಿ ಮೌಢ್ಯ ಜನರನ್ನು ಕ್ರಿಶ್ಚಿಯನ್ ಪಾದ್ರಿಗಳು ಯಾವ ರೀತಿ ಮರಳು ಮಾಡಿ ಜನರನ್ನು ಮತಾಂತರವನ್ನು ಮಾಡುತ್ತಿದ್ದರು ಈ ಕಾದಂಬರಿಯಿಂದ ವೇದ್ಯವಾಗುತ್ತದೆ.

---

೧ . ಕುವೆಂಪು:ಪುನರಾಲೋಕನ-ಜಿ.ಎಸ್.ಶಿವರುದ್ರಪ್ಪ:ಪು.ಸಂ.೨೩೦.

ಕಾದಂಬರಿಕಾರರಾಗಿ ಕುವೆಂಪು ನಮಗೆ ಮುಖ್ಯವಾಗುವುದು ಸರ್ವೋದಯ ಸಮನ್ವಯ ದೃಷ್ಟಿ, ಹಾಗೂ ಮಹಾನ್ ಮಾನವತಾವಾದಿಯಾಗಿ. ಕಣ್ಮರೆಯಾಗುತ್ತಿದ್ದ ಜೀವಂತ ಸಮಾಜದ ವಾಸ್ತವವಾದಿ ಚಿತ್ರಣವನ್ನು ಕುವೆಂಪು ತಮ್ಮೆರಡು ಕಾದಂಬರಿಗಳಲ್ಲಿ ಕಟ್ಟಿಕೊಡುವುದರ ಮೂಲಕ ಕಾದಂಬರಿ ಪ್ರಕಾರದ ನವಮಾರ್ಗ ಪ್ರವರ್ತಕರಾಗಿದ್ದಾರೆ.

ಕುವೆಂಪು ಮಲೆನಾಡಿನ ಜನರ ಆಚಾರ-ವಿಚಾರ, ಸಂಪ್ರದಾಯಗಳನ್ನು ಸೊಗಸಾಗಿ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಮಲೆನಾಡಿನ ಜನತೆಯಲ್ಲಿ ಜಾತಿಯತೆ ಮತ್ತು ಮತಾಂತರಗಳು ಯಾವ ರೀತಿ ಪ್ರಭಾವ ಬೀರುತ್ತವೆ, ಮಲೆನಾಡಿನ ಜನತೆ ದೊಡ್ಡವರ ನಡುವೆ ಯಾವ ರೀತಿ ದುಃಖಕ್ಕೆ ಎಡೆಯಾಗಿದ್ದಾರೆ, ಮನುಷ್ಯ-ಮನುಷ್ಯರಲ್ಲೆ ನೀತಿ-ನಿಯಮಗಳು, ಮೌಢ್ಯತೆಗಳು ಯಾವ ರೀತಿ ಶೋಷಣೆ ಮಾಡಿವೆ ಎಂಬುದನ್ನು ಕುವೆಂಪು ತಿಳಿಸಿರುವುದನ್ನು ಕಾಣಬಹುದಾಗಿದೆ.

ಕುವೆಂಪು ಸಮಾಜದ ಅಜ್ಞಾನವನ್ನು ಸಮಾಜಕ್ಕೆ ತಿಳಿಸಿಕೊಡುವಲ್ಲಿ ಅವರ ಕಾದಂಬರಿಗಳು ಪ್ರಮುಖವಾಗಿ ರೂಪುಗೊಂಡಿವೆ ಹಾಗೂ ಆದರ್ಶಪ್ರಾಯವಾಗಿವೆ ಎನ್ನಬಹುದು.

ಅಧ್ಯಾಯ-೩

ಕಾದಂಬರಿ ಪ್ರಕಾರಕ್ಕೆ ಹೊಸ ಆಯಾಮ

ಕುವೆಂಪು ಕಾದಂಬರಿಗಳು ಪ್ರಧಾನವಾಗಿ ಕವಿಯಾದವನ ಕೃತಿಗಳಾಗಿವೆ. ಆ ದೃಷ್ಟಿಯಿಂದ ಅವು ವಿಶಿಷ್ಟವೂ ಆಗುವುದು ಸಹಜ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಸುತ್ತಣ ಸದ್ಯ ಸಮಾಜವನ್ನು ಕುರಿತದ್ದಲ್ಲ. ಈಗಾಗಲೇ ಕಣ್ಮರೆಯಾಗಿರುವ ಮಲೆನಾಡಿನ ಸಮಗ್ರ ಜೀವನದ ಒಂದು ಭಾಗವಾಗಿದೆ. ಮಲೆನಾಡಿನ ಗ್ರಾಮೀಣ ಜೀವನವನ್ನು ಇಷ್ಟೊಂದು ಸಮೃದ್ಧವಾಗಿ ಸಮಗ್ರವಾಗಿ ಕಾದಂಬರಿಯಲ್ಲಿ ಹಿಡಿದಿಟ್ಟಿರುವ ಲೇಖಕರು ವಿರಳವೆಂದೇ ಹೇಳಬೇಕು. ಈ ಕಾದಂಬರಿಯಲ್ಲಿ ಕಥೆಯಿದ್ದರೂ ಕಥನ ತಂತ್ರಕ್ಕೆ ಅಷ್ಟೊಂದು ಮಹತ್ವವಿಲ್ಲ, ಕಥನ ತಂತ್ರದ ಹಿಂದಿನತತ್ವವನ್ನು 'ಕಾನೂರು ಹೆಗ್ಗಡತಿ' ಒಪ್ಪಿಕೊಳ್ಳುವಂತೆ 'ಮಲೆಗಳಲ್ಲಿ ಮದುಮಗಳು' ಒಪ್ಪುವುದಿಲ್ಲ.

ಕುವೆಂಪು ಅವರ ಎರಡು ಕಾದಂಬರಿಗಳು ಅವರ ಸೃಷ್ಟಿಶೀಲ ಪ್ರತಿಭೆಯ ಅತ್ಯುತ್ತಮ ಅಭಿವ್ಯಕ್ತಿಗಳು. ವಸ್ತುವಿನ ಅಗಾಧವಾದ ಹರಹು, ಉನ್ನತವಾದ ಜೀವನ ಪ್ರೀತಿ, ವರ್ಣನೆಗಳ ಗಾಢತೆ, ನಾಟಕೀಯತೆ, ಪಾತ್ರ ಸೃಷ್ಟಿಯ ಶಕ್ತಿಪೂರ್ಣತೆ ಇವುಗಳನ್ನು ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಕೆಲವು ವಿಮರ್ಶಕರ ದೃಷ್ಟಿಯಲ್ಲಿ ಕುವೆಂಪು ಅವರ ಕಾದಂಬರಿಗಳು ಹಲವಾರು ದೃಷ್ಟಿಯಲ್ಲಿ ಅತ್ಯುನ್ನತ ಕಲೆಗಾರಿಕೆಯ ಹೊಳಹುಗಳನ್ನು ತೋರಿಸಿದರೂ ಅವು ಕಲಾಕೃತಿಗಳಾಗಿ ಪಡೆಯುವ ಯಶಸ್ಸು ಕಡಿಮೆಯಾಗಿದೆ. ಎರಡೂ ಕಾದಂಬರಿಗಳ ಬಂಧದ ಶಿಥಿಲತೆಯ ಬಗ್ಗೆ ಹಾಗೂ ಕೆಲವು ಘಟನೆಗಳ ಬಗ್ಗೆ ಪಾತ್ರಗಳ ನ್ಯೂನತೆಗಳ ಬಗ್ಗೆ ವಿಮರ್ಶೆ ಹೆಚ್ಚು ಆಸಕ್ತಿ ತೋರಿದೆ. "ಆದ್ದರಿಂದಲೇ ಅವರ ಕಾದಂಬರಿಗಳ ವಿಮರ್ಶೆಯಲ್ಲಿ ವಸ್ತುಬಂಧ ಮತ್ತು ಜೀವನದೃಷ್ಟಿ ಇವುಗಳನ್ನು ಬೇರ್ಪಡಿಸಿ ನೋಡುವುದು ತಪ್ಪಾಗುತ್ತದೆ."[೧] ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟಿದ ಕಾದಂಬರಿ ಪ್ರಕಾರವನ್ನು ನಾವು ವಿಮರ್ಶಿಸುವಾಗ ಕಾದಂಬರಿಯ ಬಂಧ, ರೂಪದ ಬಗ್ಗೆ ತೆರೆದ ಮನಸ್ಸಿನ ಧೋರಣೆಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಕನ್ನಡ ಕಾದಂಬರಿ ಪ್ರಕಾರಕ್ಕೆ ಬೃಹತ್ ಕೃತಿಗಳನ್ನು ನೀಡಿದ ಕೀರ್ತಿ ಕುವೆಂಪು ಅವರದು. ಒಂದು ಮಹತ್ವದ ಕೃತಿ ರಚನೆಗೊಂಡಾಗ ಆ ಕೃತಿಯನ್ನು ಈಗಾಗಲೇ ಸಿದ್ಧವಾಗಿರುವ ವಿಮರ್ಶನಾ ಮಾನದಂಡಗಳಿಂದ ಅಳೆಯುವುದು ಸಾಧುವಲ್ಲ. ವಿಮರ್ಶಾ ಕ್ರಮ ಕೃತಿಯ ಒಳಗಿರುವ ಸತ್ವವನ್ನು ಅವಲಂಬಿಸಿರಬೇಕೆ ವಿನಃ

---

೧. ಕುವೆಂಪು ಕಾದಂಬರಿಗಳು - ಸಂ:ಗುರುಪಾದ ಮರಿಗುದ್ದಿ ಕುವೆಂಪು ಮತ್ತು ಕನ್ನಡ ಕಾದಂಬರಿ-ರಾಜೇಂದ್ರ ಜನ್ನಿ, ಪು.ಸಂ.೩೧೧

ಹೊರಗಿನಿಂದ ತಂದು ಹೇರಿದಂತಾಗಬಾರದು. 'ಮಲೆಗಳಲ್ಲಿ ಮದುಮಗಳು' ಕೃತಿ ರಚನೆಯ ವೇಳೆಗಾಗಲೇ ಕುವೆಂಪು ದೃಷ್ಟಿ ಧೋರಣೆಗಳು ಬಂಧದ ದೃಷ್ಟಿಯಿಂದ ಭಿನ್ನವಾಗಿದ್ದವು. ಸಹಜವಾಗಿಯೇ ಈ ವಿಷಯ ಆಶ್ಚರ್ಯವನ್ನು ಮೂಡಿಸುತ್ತದೆ.

ಈ ಕಾದಂಬರಿಗೆ ವಿಷಯ ಯಾವುದು? ಯಾವ ಆಶಯವನ್ನು ಓದುಗರಿಗೆ ತಿಳಿಸಬೇಕೆಂದು ಇಷ್ಟೊಂದು ಸುದೀರ್ಘವಾದ ದೃಶ್ಯಾವಳಿಯನ್ನು ಕಾದಂಬರಿಕಾರರು ಯೋಜಿಸಿಕೊಂಡಿದ್ದಾರೆ. ಯಾವ ಉದ್ದೇಶ ಇಲ್ಲಿಯ ಬರಹಕ್ಕೆ ಪ್ರೇರಣೆಯಾಗಿದೆ ಎಂಬ ಪ್ರಶ್ನೆಗಳು ಸಹಜವಾಗಿ ಓದುಗರಿಗೆ ಹುಟ್ಟುತ್ತವೆ. ಲೇಖಕನ ದೃಷ್ಟಿ ಅಸ್ಪಷ್ಟವಾಗಿಯಾದರೂ ಮನಸ್ಸಿನ ಹಿನ್ನೆಲೆಯಲ್ಲಿ ಅವುಗಳ ಯೋಜನೆಯಲ್ಲಿ ಕೆಲಸ ಮಾಡಿಯೇ ಇರುತ್ತದೆ. ಬಹುಶಃ ಅದಿಲ್ಲದೆ ಯಾವ ಕಾದಂಬರಿಯ ಯೋಜನೆ ಸಿದ್ಧಿಸಲಾರದು.

'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಬರುವ ಎಲ್ಲಾ ಕಥಾ ಭಾಗಗಳು ಒಳಗೊಂಡ ವೈವಿಧ್ಯಪೂರ್ಣವಾದ ಜೀವನಾನುಭವವನ್ನು ಅವುಗಳಲ್ಲಿ ವ್ಯವಹರಿಸುವ ಪಾತ್ರಗಳ ನಡುವಿನ ಸಂಬಂಧಗಳನ್ನು ಹಾಗೆಯೇ ನಡೆದ ಘಟನೆಗಳಿಗೆ ಅವರು ತೋರುವ ಪ್ರತಿಕ್ರಿಯೆಗಳನ್ನು ಗಮನದಲ್ಲಿರಿಸಿಕೊಂಡು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಒಟ್ಟು ಆಶಯ ಯಾವುದು ಎಂಬ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ. "ಹೆಣ್ಣು ಗಂಡುಗಳ ನಡುವಿನ ಸಂಬಂಧದ ಕೆಲವು ಪರಿಗಳನ್ನು ನಿದರ್ಶಕ ಸಾಧನಗಳನ್ನಾಗಿ ಬಳಸಿಕೊಂಡು ಮನುಷ್ಯ ಜೀವನದ ವ್ಯಾಪಾರಗಳನ್ನು ಇನ್ನೂ ಹೆಚ್ಚು ವ್ಯಾಪಕವಾದ ಅನ್ವೇಷಕ ದೃಷ್ಟಿಯಿಂದ ಕಾಣುವ ಪ್ರಯತ್ನವನ್ನು ಈ ಕಾದಂಬರಿ ಮಾಡುತ್ತದೆ"[೧] ಎಂದು ವಿ.ಎಂ.ಇನಾಂದಾರ್ ಹೇಳಿದ್ದಾರೆ.

ಹೆಣ್ಣು – ಗಂಡುಗಳ ಸಂಬಂಧಗಳು ಕಾದಂಬರಿಯಲ್ಲಿ ಕೆಲಮಟ್ಟಿಗಿನ ಪ್ರಾಮುಖ್ಯವನ್ನು ಪಡೆಯುತ್ತವಾದರೂ ಅದನ್ನು ನಿರೂಪಿಸುವುದೇ ಅದರ ಮುಖ್ಯೋದ್ದೇಶವೆಂದು ಅನಿಸುವುದಿಲ್ಲ, ಅದೊಂದು ಪ್ರಾಣಿ ಸಹಜವಾದ ಪ್ರವೃತ್ತಿ ಎಂದು ಅಲ್ಲಗೆಳೆಯಲಾಗುವುದಿಲ್ಲ. ಹೊರ ಸಂಪರ್ಕಗಳಿಲ್ಲದ ಬೇರೆ ಹವ್ಯಾಸಗಳನ್ನು ತಿಳಿಯದ ಪರ್ವತಾರಣ್ಯ ಪ್ರದೇಶದ ಕೊಂಪೆಗಳಲ್ಲಿ ವಾಸವಾಗಿರುವ ಜನಗಳಲ್ಲಿ ಈ ಪ್ರವೃತ್ತಿ ಎದ್ದು ಕಾಣುವುದು ಸ್ವಾಭಾವಿಕವೆ.

'ಮಲೆಗಳಲ್ಲಿ ಮದುಮಗಳು' ಒಂದೇ ಕಥೆಯನ್ನು ಹೇಳುವುದಿಲ್ಲ, ಬೇರೆ ಬೇರೆ ಊರುಗಳಲ್ಲಿಯ ಬೇರೆ ಬೇರೆ ಮನೆತನಗಳಿಗೆ ಸೇರಿದ, ಬೇರೆ ಬೇರೆಯವರ ಕಥೆಗಳು

---

[೧]. ಕುವೆಂಪು ಕಾದಂಬರಿಗಳು – ವಿ.ಎಂ.ಇನಾಂದಾರ್:ಪು.ಸಂ.೪೧.

ಸಮಕಾಲೀನವಾಗಿ ನಡೆಯುತ್ತವೆ. ಅಲ್ಲಿ ಅಲ್ಲಿಯ ಸಂಪ್ರದಾಯ, ಆಚಾರ-ವಿಚಾರಗಳು, ರೀತಿ-ನೀತಿಗಳು, ಶ್ರೀಮಂತ-ಬಡವರ ಒಡನಾಟಗಳು ಕಂಡು ಬರುತ್ತವೆ. ಊರುಗಳಾದರೂ ಹತ್ತಿರವಾಗಿದ್ದು ಮನೆತನಗಳು ಒಂದಕ್ಕೊಂದು ಸಂಬಂಧವುಳ್ಳವಾದ್ದರಿಂದ ಎಲ್ಲಾ ಕಥೆಗಳು ಸಮನಾಂತರವಾಗಿಯಾದರೂ ಬಂದರೊಡನೆ ಇನ್ನೊಂದು ಹೆಣೆದು ಬೆಳೆಯುತ್ತವೆ. ಆದ್ದರಿಂದ ನಾವು ಕಂಡುಕೊಳ್ಳಬೇಕಾಗಿದ್ದ ಅರ್ಥವಂತಿಕೆ ಈ ಎಲ್ಲಾ ಕಥೆಗಳಲ್ಲಿ ಅಡಕವಾಗಿರುವ ಅನುಭವಗಳಿಂದ ಸ್ಮರಿಸಬೇಕಾದದ್ದು, ಈ ಕಾದಂಬರಿಯಲ್ಲಿ ಬರುವ ಕಥೆಗಳನ್ನೆಲ್ಲ ನಾವು ಇಲ್ಲಿ ವಿವರಿಸಬೇಕಾಗಿಲ್ಲವಾದರೂ ಮುಖವಾಗಿ ಕಥೆಗಳು ಯಾವುವು ವಿಷಯಕ್ಕೆ ಸಂಬಂಧಿಸಿದಂತೆ ಅವುಗಳಲ್ಲಿಯ ಮುಖ್ಯಾಂಶಗಳು ಯಾವುವು ಎನ್ನುವುದನ್ನು ವಿಶ್ಲೇಷಣೆಯ ಅನುಕೂಲಕ್ಕಾಗಿಯಾದರೂ ನಾವು ಗುರುತು ಹಾಕಿಕೊಳ್ಳಬೇಕಾಗುತ್ತದೆ. ಕಾದಂಬರಿಯಲ್ಲಿಯ ಕೆಲವು ಮುಖ್ಯ ಪಾತ್ರಗಳ ಸುತ್ತ ಬೆಳೆದ ಕಥೆಗಳು ಕಾದಂಬರಿಯ ಒಟ್ಟು ರಚನೆಯಲ್ಲಿ ಸೇರಿಕೊಂಡಿವೆ. ಆ ಪಾತ್ರಗಳೆಂದರೆ ಸಿಂಬಾವಿ ಭರಮೈ ಹೆಗ್ಗಡೆ, ಸಿಂಬಾವಿ ಹೊಲೆಯರ ಗುತ್ತಿ, ಹಳೆಮನೆ ತಿಮ್ಮಪ್ಪ ಹೆಗ್ಗಡೆ, ಕೋಣೂರು ಮುಕುಂದಯ್ಯ, ಕೋಣೂರು ಐತ, ಪೀಂಚಲು, ಬೆಟ್ಟಳ್ಳಿ ದೇವಯ್ಯಗೌಡ, ಕಾವೇರಿ, ಹೂವಳ್ಳಿ ವೆಂಕಟಣ್ಣ ನಾಯಕ, ಹೂವಳ್ಳಿ ಚೆನ್ನಮ್ಮ, ಹಳೆಮನೆ ಸುಬ್ಬಣ್ಣ ಹೆಗ್ಗಡೆ, ಈ ಎಲ್ಲಾ ಪಾತ್ರಗಳ ಕಥೆಗಳು ಹೆಚ್ಚು ಕಡಿಮೆ ಸರಿಸಮವಾಗಿ ಕಾದಂಬರಿ ಉದ್ಧಕ್ಕೂ ಹೆಣೆದುಕೊಂಡಿದ್ದರೂ ಗುತ್ತಿ-ತಿಮ್ಮಿ, ಮುಕುಂದಯ್ಯ ಚೆನ್ನಮ್ಮ ಮತ್ತು ಐತ-ಪೀಂಚಲು ಇವರ ಕಥೆಗಳೇ ಅಲ್ಲದೆ ಪ್ರಮುಖವಾಗಿ ಮುಕುಂದಯ್ಯ, ದೇವಯ್ಯಗೌಡ, ಜೀವರತ್ನಯ್ಯ ಮುಂತಾದವರು ಯಾವ ರೀತಿಯಲ್ಲಿ ತಮ್ಮದೇ ಆದ ಬಯಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿ ಯಾವ ರೀತಿ ಜನರ ಮುಂದೆ ಅಪಮಾನಕ್ಕೆ ಒಳಗಾಗುತ್ತಾರೆ ಹಾಗೂ ಮತಾಂತರ ಮಾಡಲು ಹೊರಟಾಗ ಯಾವ ರೀತಿ ವಿಫಲತೆಯನ್ನು ಹೊಂದುತ್ತಾರೆ ಎಂಬುದು ಕೂಡ ವೈಚಾರಿಕ ದೃಷ್ಟಿಯಿಂದ ಪ್ರಾಮುಖ್ಯವನ್ನು ಪಡೆಯುತ್ತವೆ. ಈ ಎಲ್ಲಾ ಕಥೆಗಳ ಸಂಪ್ರದಾಯ, ಆಚಾರ, ವಿಚಾರವನ್ನು ಕಾದಂಬರಿಯಲ್ಲಿ ಕಾಣಬಹುದು.

ಮಲೆನಾಡಿನ ಒಂದು ಭಾಗ ಕಾದಂಬರಿಗೆ ಕ್ರಿಯಾ ರಂಗವಾಗಿದೆ. ಕಾದಂಬರಿ ಉದ್ಧಕ್ಕೂ ಅದರ ವರ್ಣನೆಗಳು ಬರುತ್ತವೆ. ನಿಖರವಾದ ಅರಣ್ಯ ಪ್ರದೇಶಗಳ ದುರ್ಗಮವಾದ ಬೆಟ್ಟದ ದಾರಿಗಳು ಮಳೆಗಾಳಿಯ ಭೀಕರ ಪ್ರಕೋಪಗಳು ವನ್ಯ ಪರಿಸರದ ನೂರಾರು ವಿವರಗಳು ಕಾದಂಬರಿಯುದ್ಧಕ್ಕೂ ಸಿಗುತ್ತವೆ. ನಿಜವಾದ ಅರ್ಥದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೆಸರಿನಲ್ಲಿಯೇ ಸ್ಥಾನವನ್ನು ಪಡೆಯುತ್ತದೆ. ಇಲ್ಲಿನ ಮಾನವ ಮನೋವ್ಯಾಪಾರ

ಹಾಗೂ ಪ್ರಾಕೃತಿಕ ಆವರಣದ ವಿವರಣೆಯು ಹಾಗೂ ವೈಚಾರಿಕತೆಯ ನಿಲುವುಗಳು ಕಾದಂಬರಿಗೆ ಒಂದು ಸಮಗ್ರತೆಯನ್ನು ತಂದುಕೊಟ್ಟಿದೆ.

ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಹತ್ತಾರು ಬಗೆಯ ಜನಗಳು, ಅವರ ಅನುಭವಗಳು, ಆಕಾಂಕ್ಷೆಗಳು, ಸಿದ್ಧಿ ಸಾಧನೆಗಳು, ನೋವು ನಿರಾಸೆಗಳು, ಆಚಾರಗಳು, ಸಂಪ್ರದಾಯಗಳು ಹಾಗೂ ಜೀವನಾನುಭವದ ಸಾವಿರ ಮುಖಗಳನ್ನು ತೋರಿಸುತ್ತವೆ. ಅವೆಲ್ಲವೂ ಮನುಷ್ಯ ಜೀವನದಲ್ಲಿಯ ಅನಂತ ಸಾಧ್ಯತೆಗಳನ್ನು ಜಟಿಲವಾಗಿ, ಸಹಜವಾಗಿಯಾದರೂ ವಿಚಿತ್ರವಾಗಿ, ಊಹೆಗೆ ಮೀರಿದ ಸಂಬಂಧಗಳನ್ನು ಹೊಂದಿ ವ್ಯಕ್ತಿಗಳ ಹಾಗೂ ಮನೆತನಗಳ ಬದುಕಿನಲ್ಲಿ ಹೇಗೆ ಏರುಪೇರುಗಳನ್ನು ಮಾಡಬಹುದು, ಸುಖ ದುಃಖಗಳಿಗೆ ಕಾರಣವಾಗಬಹುದು ಎನ್ನುವುದನ್ನು ತೋರಿಸಿ ಮನುಷ್ಯ ಜೀವನದ ವಿಸ್ತಾರವನ್ನು, ವೈಚಿತ್ರವನ್ನು, ವೈವಿಧ್ಯವನ್ನು, ಸಂಪ್ರದಾಯವನ್ನು ಚಿತ್ರಿಸುವುದು ಕಾದಂಬರಿಯ ಉದ್ದೇಶವನ್ನು ರೂಪಿಸುವ ದೃಷ್ಟಿ ಕಾದಂಬರಿಯ ವಿಷಯ ಕೇಂದ್ರ ಹಾಗೂ ಬಂಧವಾಗಿದೆ.

"ಮಲೆಗಳಲ್ಲಿ ಮದುಮಗಳು ಪಾತ್ರ ವೈವಿಧ್ಯ, ಜೀವನದ ವೈವಿಧ್ಯದ ಕಲ್ಪನೆಯನ್ನು ತಂದು ಕೊಡುತ್ತದಾದರೂ ಕಾದಂಬರಿಯನ್ನು ಒಂದು ಕಲಾಕೃತಿ ಎಂಬ ದೃಷ್ಟಿಯಿಂದ ನೋಡಿದಾಗ ಅದರಲ್ಲಿ ಆಯಾ ಜನಾಂಗದ ನಿಷ್ಠೆ ಸಂಪ್ರದಾಯವನ್ನು ಇಲ್ಲಿ ಕುವೆಂಪು ಮನಃಪೂರ್ವಕವಾಗಿ ಮಂಡಿಸಿರುವುದನ್ನು ಕಾಣುತ್ತೇವೆ."[೧] ಗುಡ್ಡ–ಗಾಡಿನ ಪ್ರದೇಶದ ಜನತೆ ಯಾವ ರೀತಿ ಇನ್ನೂ ಸಂಪ್ರದಾಯಗಳಿಗೆ ಓಗೊಟ್ಟು ಜೀವನವನ್ನು ಮಾಡುತ್ತಾರೆ, ಕೆಳಮಟ್ಟದ ಜನಾಂಗದವರು ಶ್ರೀಮಂತರ ಮತ್ತು ಮೌಢ್ಯತೆಗೆ ಹೇಗೆ ಒಳಗಾಗಿದ್ದಾರೆ ಎಂಬುದನ್ನು ಕಾಣಬಹುದಾಗಿದೆ.

ಕುವೆಂಪು ಎರಡನೆಯ ಕಾದಂಬರಿಯನ್ನು ಬರೆದದ್ದು ಪ್ರಾದೇಶಿಕ ಜೀವನದ ಸಮೃದ್ಧ ಅನುಭವದ ಬಂಡವಾಳ ಇನ್ನು ಮುಗಿಯದೇ ಇದ್ದುದರಿಂದಲ್ಲ, ಮಾನವತಾವಾದಿ ಚಿಂತನೆಯ ಬೆಳವಣಿಗೆಯನ್ನು ಕಲೆಯ ಮೂಲಕ ಹಿಡಿದಿಡುವ ಉದ್ದೇಶದಿಂದ ಎನ್ನಬಹುದು. ಮನುಷ್ಯ ಚೇತನದ ಅನನ್ಯತೆಯ ಸಾಧ್ಯತೆಗಳನ್ನು ವಾಸ್ತವವಾದಿ ಮಾರ್ಗದಲ್ಲಿ ಅನ್ವೇಷಿಸುವ ಪ್ರಕ್ರಿಯೆಯಲ್ಲಿ ಕುವೆಂಪು ಆ ಹಿಂದಿನ ಸಂಪ್ರದಾಯದ ಎಲ್ಲಾ ಶಕ್ತಿಯನ್ನು ಇಲ್ಲಿ ದುಡಿಸಿಕೊಂಡದ್ದನ್ನು ಕಾಣಬಹುದು. ಆ ಕಾರಣದಿಂದ ಕಲಾಸೃಷ್ಟಿಯ ಹೊಸದೊಂದು ಆಯಾಮವನ್ನು ಕಾದಂಬರಿಯ ಹೊಸದೊಂದು ಮಗ್ಗುಲನ್ನು ಹುಡುಕಿ ಬರೆಯಲು ಸಾಧ್ಯವಾಯಿತು.

---

೧ . ಕುವೆಂಪು ಕಾದಂಬರಿಗಳು – ವಿ.ಎಂ.ಇನಾಂದಾರ್:ಪು.ಸಂ.೮೮.

ಇನ್ನೊಂದು ರೀತಿಯಲ್ಲಿ ವಿವರಿಸುವುದಾದರೆ ಮನುಷ್ಯ ಜೀವನದ ಅರ್ಥವಂತಿಕೆಯನ್ನು ಗ್ರಹಿಸಲು ಬೇರೆಯೊಂದು ಚೌಕಟ್ಟು ಅಗತ್ಯವಾಗಿತ್ತು. ಮನುಷ್ಯನ ವ್ಯಕ್ತಿನಿಷ್ಠತೆಯನ್ನು ತೊರೆದು ಸಮಷ್ಟಿಯ ಬದುಕನ್ನು ಕಟ್ಟಿಕೊಡುವಲ್ಲಿ ಕುವೆಂಪು ಮುಂದಾಗಿರುವುದನ್ನು ಕಾಣುತ್ತೇವೆ. ಕಾದಂಬರಿ ಬಂಧದಲ್ಲಿನ ಹೊಸ ಆಯಾಮ ಅತ್ಯಂತ ಸಾಮಾನ್ಯನೂ ಕೂಡ ಜನಾಂಗದ ಶ್ರೀಮಂತ ಸ್ಮೃತಿಗಳಲ್ಲಿ ಸ್ಥಾನ ಗಳಿಸುವಂತಾಗುತ್ತದೆ. ಕುವೆಂಪುರವರಂತಹ ಮಾನವತಾವಾದಿ ಬರಹಗಾರನಿಗೆ ಈ ಚಿಂತನೆಯಿಂದ ಸಮಾಜದ ಅತ್ಯಂತ ಕೆಳವರ್ಗದ ಪಾತ್ರಗಳನ್ನು ನಿರ್ಮಿಸುವಾಗ ಅವರನ್ನು ಸಮಷ್ಟಿ ಪ್ರಜ್ಞೆಯ ಪಾಲುದಾರರನ್ನಾಗಿ ನೋಡಿ ವಾಸ್ತವಿಕ ಬದುಕಿನ ನಿಕೃಷ್ಟತೆಯಿಂದ ಮೇಲಕ್ಕೆತ್ತಿ ಸೃಷ್ಟಿಸುವುದು ಸಾಧ್ಯವಾಯಿತು. ಆದ್ದರಿಂದಲೇ ಯಾವ ನೈತಿಕ ಸಂಸ್ಕಾರವೂ ಇಲ್ಲದ ಸಮಗ್ರ ಕಾದಂಬರಿಯಾಗಿದೆ. ಕನ್ನಡದ ನವ್ಯರು ಕುವೆಂಪು ಕಾದಂಬರಿಗಳನ್ನು ಕುರಿತು "ವಿವರಗಳಲ್ಲಿ ಸೊಕ್ಕಿದೆ" ಎಂಬ ಒಂದು ಮಾತಿನಲ್ಲಿ ಕೆಳಕ್ಕೆ ತಳಿದ ನಿದರ್ಶನಗಳು ಇವೆಯಾದರೂ ಇಂದಿನ ಬದಲಾದ ಪರಿಸರ ಹಾಗೂ ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಸೊಕ್ಕಿದ ವಿವರಗಳ ಹಿಂದೆ ಜೀವಕೇಂದ್ರಿತ ದೃಷ್ಟಿಕೋನದ ಸಮಗ್ರತೆಯ ಹಿರಿಮೆಯಿದೆ.

'ಮಲೆಗಳಲ್ಲಿ ಮದುಮಗಳು' ಕೃತಿಗೆ ಒಂದು ಕೇಂದ್ರ ಪ್ರಜ್ಞೆಯಿಲ್ಲ ಎಂಬ ಪ್ರಶ್ನೆ ಕುರಿತು ಈಗಾಗಲೇ ಚರ್ಚೆ ನಡೆದಿದೆ. ಈ ಕೃತಿಯಲ್ಲಿ ಕುವೆಂಪು ಅಧ್ಯಾಯದ ಚೌಕಟ್ಟುಗಳಿಲ್ಲದ ಕಥಾಸಾಗರವನ್ನೆ ಸೃಷ್ಟಿಸಿದ್ದಾರೆ. "ಕುವೆಂಪು ಸಮಾಜದಲ್ಲಿ ಅಂದಿನ ಕಾಲದ ಸಾಮಾಜಿಕ ಬದುಕಿನ ಚಿತ್ರಣವನ್ನು ಸಮರ್ಪಕವಾಗಿ ಚಿತ್ರಿಸಿದ್ದಾರೆ. "ಕುವೆಂಪು ಕಾದಂಬರಿಯಲ್ಲಿ ಪ್ರಕೃತಿಯ ವರ್ಣನೆಯನ್ನು ಆಯ್ದು ಉಲ್ಲೇಖಿಸಿದ್ದಾರೆ".[೧] ಕಾನೂರು ಹೆಗ್ಗಡತಿಯ ಕಾಲಾನುಕ್ರಮಣಿಕೆಗೆ ಹೋಲಿಸಿದರೆ 'ಮಲೆಗಳಲ್ಲಿ ಮದುಮಗಳು' ಆರಂಭವಾಗುವುದೇ ಮಲೆನಾಡಿನ ಮಳೆಯ ವಿವರಗಳಿಂದ ಹಾಗೂ ಅಲ್ಲಿಯ ಸಂಪ್ರದಾಯಗಳಿಂದ ಕುವೆಂಪು ಅಸ್ತ್ರಜ್ಞಾಪೂರ್ವಕವಾಗಿ ಸಾಧಿಸಿರುವ ಕಾಲತತ್ವದ ಈ ಸಂಕೀರ್ಣ ನೆಲೆಯನ್ನು ನೋಡಿದರೆ ಆಧುನಿಕ ಸಾಹಿತ್ಯದ ಅಪೂರ್ವ ಕೃತಿಬಂಧವಾಗಿ ಕಾಣಿಸಿಕೊಳ್ಳುತ್ತದೆ.

ಈ ಕೃತಿ ಸಂರಚನೆ ಮತ್ತು ಕೇಂದ್ರ ಕ್ರಿಯೆಯ ಮೂಲಕ ಕಾದಂಬರಿ ಪ್ರಕಾರಕ್ಕೆ ಹೊಸ ಆಯಾಮ ನೀಡಿದೆ. ಇಡೀ ಕಾದಂಬರಿಯಲ್ಲಿ ಓದುಗನನ್ನು ಅಲುಗಾಡಿಸುವ, ಉಸಿರುಕಟ್ಟುವ ಪರಕಾಷ್ಠೆಯ ಸನ್ನಿವೇಶ ಬರದಿರುವುದು ಕೂಡ ಕಾದಂಬರಿಯ ಉತ್ತುಂಗತೆಗೆ ಕಾರಣವಾಗಿದೆ.

---

೧. ಕುವೆಂಪು ಕಾದಂಬರಿಗಳು – ಸಂ: ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ – ವಿ.ಚಂದ್ರಶೇಖರ ನಂಗಲಿ: ಪು.ಸಂ.೩೩೭

ಮೊದಲಿನಿಂದ ಕೊನೆಯವರೆಗೆ ಹೆಚ್ಚು ಕಡಿಮೆ ಎಲ್ಲವೂ ಭಾವದ ಒಂದೇ ಮಟ್ಟದಲ್ಲಿ ಮುಂದುವರಿಯುತ್ತದೆ. ಬೇರೆಯವರ ಬದುಕಿನಲ್ಲಿ ಸುಖ-ದುಃಖಗಳನ್ನು ತುಂಬಿ ಅದರ ಗತಿಯನ್ನು ನಿರ್ಧರಿಸಬಲ್ಲ ಪ್ರಭಾವ ಅಥವಾ ದರ್ಪದಿಂದ ಕೂಡಿದ ಶಕ್ತಿಯುತ ವ್ಯಕ್ತಿತ್ವವನ್ನುಳ್ಳ ಎತ್ತರದ ಪಾತ್ರಗಳು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಇಲ್ಲದಿರುವುದು ಒಂದು ಆಕ್ಷೇಪಣೆಯ ಮಾತಲ್ಲ, ಅದು ಲೇಖಕರ ಯೋಜನೆಗೆ ಅನುಗುಣವಾಗಿಯೇ ಇದೆ ಎನ್ನುವುದು ಸ್ಪಷ್ಟ. "ಇಲ್ಲಿ ಯಾರು ಮುಖ್ಯರಲ್ಲ ಯಾರು ಅಮುಖ್ಯರಲ್ಲ, ಯಾವುದೂ ಯಕಶ್ಚಿತವಲ್ಲ" ಎಂದು ಓದುಗರಿಗೆ ಮೊದಲಲ್ಲಿಯೇ ತಿಳಿಸಲಾಗಿದೆ. ಇಲ್ಲಿ ಯಾವುದಕ್ಕೂ ಮೊದಲಿಲ್ಲ, ಯಾವುದಕ್ಕೂ ತುದಿಯಲ್ಲ ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ, ಎಂಬ ಮಾತು ಕಾದಂಬರಿಯ ಆರಂಭ ಪರಾಕಷ್ಟೆ ಹಾಗೂ ಅಂತ್ಯವನ್ನು ಕುರಿತದ್ದು, ಬದುಕಿನ ಕಥೆ ಮುಗಿಯದ ಕಥೆಯಾದರೂ ಆ ಕಥೆಯನ್ನು ಹೇಳಬೇಕೆಂದ ಕಾದಂಬರಿ ಎಲ್ಲಿಯಾದರೂ ಮುಗಿಯಲೇಬೇಕು. ಆದರೆ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಕಥೆ ಮುಗಿಯಲಿಲ್ಲ ಎಂಬ ಭಾವನೆಯನ್ನು ಉಂಟುಮಾಡುತ್ತದೆ. ಹೀಗೆ ತಾತ್ತ್ವಿಕ ದೃಷ್ಟಿಕೋನಗಳಿಂದ ಕೃತಿಯನ್ನು ಸಮರ್ಥಿಸುತ್ತ ಹೋಗಬಹುದಾದರೂ ಕಥೆಯ ಗತಿ ನಿಧಾನದ್ದು ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ, ಕಥೆಯ ಗತಿ ಹೇಗೆ ನಿಧಾನಿಸುತ್ತದೆ ಎನ್ನುವುದನ್ನು ಸಿಂಬಾವಿಯಿಂದ ಕಾಗದವನ್ನು ತೆಗೆದುಕೊಂಡು ಹೊರಟ ಗುತ್ತಿ ಲಕ್ಕುಂದದಲ್ಲಿ ರಾತ್ರಿ ತಂಗಿ ನಾಲ್ಕನೆಯ ಅಧ್ಯಾಯದಲ್ಲಿ ಮೇಗರವಳ್ಳಿಗೆ ಬರುತ್ತಾನೆ. ನಾಲ್ಕನೆಯ ಅಧ್ಯಾಯದ ಕೊನೆಯಲ್ಲಿ ಕಣ್ಣಾಪಂಡಿತರು ಬರೆದುಕೊಡುತ್ತೇನೆಂದು ಹೇಳಿದ ಅಂತ್ರಕ್ಕಾಗಿ ಅವರ ಬಾಗಿಲಲ್ಲಿ ಕುಳಿತಿದ್ದವ ಒಂಬತ್ತನೆಯ ಅಧ್ಯಾಯದ ಪ್ರಾರಂಭದವರೆಗೂ ಕಾಯುತ್ತಾ ಅಲ್ಲಿಯೇ ಕುಳಿತಿರುತ್ತಾನೆ ಎನ್ನುವುದನ್ನು ನಾವು ಗಮನಿಸಬೇಕು. ಬಡಕುಟುಂಬಗಳು ತಮ್ಮ-ತಮ್ಮಲ್ಲಿಯೇ ಯಾವ ರೀತಿಯ ಸಂಪ್ರದಾಯಗಳನ್ನು ಅಡಗಿಸಿಕೊಂಡಿರುತ್ತವೆ ಎಂಬುದನ್ನು ಕುವೆಂಪು ಬಿಡಿಸಿಕೊಟ್ಟಿದ್ದಾರೆ. ಉತ್ತಮ ಕಾದಂಬರಿಯ ಅನುಭವ ಪ್ರಪಂಚ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು 'ಮಲೆಗಳಲ್ಲಿ ಮದುಮಗಳು' ಕೃತಿ ಮಾಡಿರುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಅಧ್ಯಾಯ-೪

ವಸ್ತುವಿನ್ಯಾಸ ಮತ್ತು ಪಾತ್ರರಚನೆ

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಥಾಯೋಜನೆ ವಿಶಿಷ್ಟ ಬಗೆಯದು, ಹಾಗೂ ವಿಸ್ತಾರ ಕೃತಿಯ ಮುಖ್ಯ ಲಕ್ಷಣವಾಗಿದೆ. ಇಲ್ಲಿ ಎಲ್ಲಾ ಬಗೆಯ ಎಲ್ಲಾ ವಯಸ್ಸಿನ ಎಲ್ಲಾ ಸ್ತರಗಳ ಜನಗಳಿದ್ದಾರೆ. ಆದರೆ ಒಬ್ಬರಂತೆ ಇನ್ನೊಬ್ಬರಿಲ್ಲ ಎನ್ನುವುದು ಸ್ಪಷ್ಟ. ತಮ್ಮ-ತಮ್ಮ ಸ್ವಭಾವ ಸತ್ವಗಳಿಗನುಗುಣವಾಗಿ ವ್ಯವಹರಿಸುವ ಪಾತ್ರಗಳ ಕ್ರಿಯೆಯೇ ಕಥೆಯಾಗಿ ರೂಪುಗೊಳ್ಳುತ್ತದೆ. ಈ ಕಾದಂಬರಿಯಲ್ಲಿನ ಬರುವ ಹತ್ತಾರು ಪಾತ್ರಗಳ ಸ್ವಭಾವ ವೈವಿಧ್ಯವಾಗಿವೆ. ಇಲ್ಲಿ ಕಂಡು ಬರುವ ಪಾತ್ರಗಳಿಗೆ ಅನುಗುಣವಾಗಿ ಜಾತಿಗಳು ಕಂಡು ಬರುತ್ತವೆ. ಜಾತಿಗೆ ಸಂಬಂಧಿಸಿದಂತೆ ಸಂಪ್ರದಾಯಗಳು, ಆಚಾರ-ವಿಚಾರಗಳನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಕಾದಂಬರಿಕಾರರ ನಿರ್ಮಾಣ ಪ್ರತಿಭೆಗೆ ನಿರಂತರ ಸಾಕ್ಷಿಯಾಗಿ ನಿಲ್ಲಬಲ್ಲ ಇಲ್ಲಿಯ ಪಾತ್ರಗಳ ಜೀವಂತಿಕೆ, ವೈವಿಧ್ಯ ವಿಶಿಷ್ಟಗಳು ಇದೆಲ್ಲ ನಡೆದ ಕಥೆ ಎಂಬ ಭ್ರಮೆಯನ್ನುಂಟು ಮಾಡುತ್ತವೆ. ಈ ಎಲ್ಲಾ ದೃಷ್ಟಿಯಿಂದ 'ಮಲೆಗಳಲ್ಲಿ ಮದುಮಗಳು' ಅನನ್ಯ ಸಾಧಾರಣವಾದ ಕೃತಿಯಾಗಿದೆ.

ವಸ್ತುವಿನ್ಯಾಸ

ಒಂದು ಕಲ್ಲಿನಿಂದ ಉಂಟಾದ ಅಲೆಗಳು ವಿಸ್ತರಿಸುತ್ತ ದೂರ-ದೂರ ಸಾಗುವಂತೆ ಒಂದು ಸಾಮಾನ್ಯ ಘಟನೆಯಿಂದ ಅಥವಾ ಸಂಗತಿಯಿಂದ ಪ್ರಾರಂಭವಾದ ಕಾದಂಬರಿಯು ಮುಂದೆ ವಿಶಾಲವಾದ ವ್ಯಾಪ್ತಿಯನ್ನು ಪಡೆಯುತ್ತಾ ಹೋಗುತ್ತದೆ. ಮೊದಲ ಘಟನೆಯನ್ನು ತೆಗೆದುಕೊಂಡಾಗ ಸಿಂಬಾವಿ ಭರಮ್ಮೆ ಹೆಗ್ಗಡೆಯವರಿಂದ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರಿಗೆ ಒಂದು ಕಾಗದವನ್ನು ತೆಗೆದುಕೊಂಡು ಗುತ್ತಿ ಹೊರಟಿದ್ದಾನೆ. ಹಾಗೆ ಹೊರಟ ಗುತ್ತಿ ಬೆಟ್ಟಳ್ಳಿಗೆ ಹೋಗಿ ತಾನು ಪ್ರೀತಿಸುತ್ತಿದ್ದ ತಿಮ್ಮಿಯನ್ನು ಹಾರಿಸಿಕೊಂಡು ಬರಬೇಕು ಎಂಬ ಮನೋಧೋರಣೆಯಿಂದ ಹೊರಡುವುದರ ಮೂಲಕ ಕಾದಂಬರಿ ತೆರೆದುಕೊಳ್ಳುತ್ತದೆ.

ನಂತರ ಕಾದಂಬರಿಯು ಹಲವಾರು ಜಾತಿ, ಸಂಪ್ರದಾಯ, ಮೌಢ್ಯತೆಯ ಬಗ್ಗೆ ತಿಳಿಸಿಕೊಡುತ್ತಾ ಸಾಗುತ್ತದೆ. ಮಲೆನಾಡಿನ ಜನರಲ್ಲಿ ಕಂಡುಬರುವ ಬ್ರಾಹ್ಮಣರು, ಗೌಡರು, ದಲಿತರು, ಕ್ರಿಶ್ಚಿಯನ್ನರು ಯಾವ ಯಾವ ಆಚಾರ ವಿಚಾರಗಳನ್ನು ಅಳವಡಿಸಿಕೊಂಡು ಮೌಢ್ಯತೆಗೆ ಒಳಗಾಗುತ್ತಾರೆ ಹಾಗೂ ಯಾವರೀತಿ ಜನಸಾಮಾನ್ಯರನ್ನು ಶೋಷಣೆಗೆ ಬಳಕೆ ಮಾಡಿಕೊಳ್ಳುತ್ತಾರೆ ಎಂಬುದು ಇಲ್ಲಿ ಕಂಡು ಬರುತ್ತದೆ.

ಗುತ್ತಿಯ ತಿಮ್ಮಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಕಣ್ಣಾಪಂಡಿತರಿಂದ ಅಂತ್ರವನ್ನು ಪಡೆಯಲು ಅವನು ಆಡಿದ ಮಾತುಗಳು ಅಂತ್ರವನ್ನು ಬಯಸಿ ಅದನ್ನು ನೋಡುತ್ತಾ ತನ್ನ ಎರಡು ಕೈಗಳನ್ನು ಅಂಜಲಿಬದ್ಧವಾಗಿ ಮಾಡಿ ಯೋಚಿಸುವುದು ಕಣ್ಣಾಪಂಡಿತರು ಅವನ ಕೈ ಎಲ್ಲಿ ಸೋಕಿತದೋ ಎಂದು ತಿಳಿದು ಕೈಗೆ ಅಂತ್ರವನ್ನು ಎತ್ತರದಿಂದ ಹಾರುವುದು ಇವೆಲ್ಲವನ್ನು ನೋಡಿದಾಗ ಕುವೆಂಪು ಮೌಢ್ಯತೆಯನ್ನು ಸಮರ್ಪಕವಾಗಿ ತಿಳಿಸಿದ್ದಾರೆ. ಅಂತೆಯೇ ಸುಬ್ಬಣ್ಣ ಹೆಗ್ಗಡೆಯವರು ಹೂವಳ್ಳಿ ವೆಂಕಟಣ್ಣಗೆ ಒಂದು ಸಲಗಾನ ಹೊರಿಸಿ ಕಳುಹಿಸಲು ಸಲಗವನ್ನು ಹಿಡಿಯಲು ಹೊಲೆಯರಿಗೆ ಹೇಳಿದಾಗ ಊರು–ಕೇರಿಗೆ ಅದು ನುಗ್ಗಿ ಶಂಕರಪ್ಪನವರ ಮನೆಯ ತುಳಸಿಕಟ್ಟೆಯನ್ನು ಅಪವಿತ್ರಗೊಳಿಸುವುದು ಆದ್ದರಿಂದ ನಮಗೆ ಕೇಡು ಉಂಟಾಗುತ್ತದೆ ಎಂದು ಭಾವಿಸುವುದು ಹೀಗೆ ಇನ್ನೂ ಹತ್ತಾರು ಮೌಢ್ಯತೆಗಳು ಈ ಕಾದಂಬರಿಯಲ್ಲಿ ತೆರೆದುಕೊಳ್ಳುತ್ತದೆ. 'ಭೂತದ ಬನಕ್ಕೆ' ಮುಟ್ಟಾದವರು ಬರಬಾರದು ಬಂದರೆ ಏನಾದರು ಕೆಡಕು ಉಂಟಾಗುತ್ತದೆ ಎಂಬುದನ್ನು ನೋಡುತ್ತೇವೆ.

ಅದೇ ರೀತಿ ಕ್ರಿಶ್ಚಿಯನ್ ಪಾದ್ರಿಯನ್ನು ಊಟಕ್ಕೆ ಕೂರಿಸಿ ಅವನಿಗೆ ಯಾವ ರೀತಿಯ ಊಟವನ್ನು ನೀಡುತ್ತಾರೆ ಮತ್ತು ಜೀವರತ್ನಯ್ಯನೆಂಬ ಪಾದ್ರಿಯು ಕ್ರಿಶ್ಚಿಯನ್ ಧರ್ಮದ ಬಗ್ಗೆ ಹೇಳುವ ಮಾತುಗಳು, ಅವನು ಹಿಂದೂ ಧರ್ಮದವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಸಿಕೊಳ್ಳಲು ಅವನು ಜನರಲ್ಲಿ ಹುಟ್ಟಿಸುವ ಆಸೆಗಳು ಇವೆಲ್ಲವು ಕೂಡ ಕಾದಂಬರಿಯಲ್ಲಿ ಕಾಣುತ್ತವೆ. ಹೀಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮೌಢ್ಯತೆಗಳನ್ನು ತಳಕು ಹಾಕಿ ಸಮಾಜದ ಜನರಿಗೆ ವೈಚಾರಿಕತೆಯ ಮನೋಭಾವನೆಯನ್ನು ಬಿತ್ತುವಲ್ಲಿ ಕುವೆಂಪು ಕಾರಣರಾಗಿದ್ದಾರೆ.

ಪಾತ್ರ ಚಿತ್ರಣ

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಾನವ ಪ್ರವೃತ್ತಿಗಳ ಸಹಜ ಅಭಿವ್ಯಕ್ತಿಯನ್ನು ಕಾಣಬಹುದು. ಜೀವನವನ್ನು ಯಥಾವತ್ತಾಗಿ ನೋಡುವ ಅನುಭವಿಸುವ ಮತ್ತು ಕಲೆಯಾಗಿ ರೂಪಿಸುವ ಪ್ರಾಮಾಣಿಕ ಪ್ರಯತ್ನದ ಫಲ ಈ ಕಾದಂಬರಿ. ಇಲ್ಲಿ ಬರುವ ಪಾತ್ರಗಳು ಪ್ರಕಟಿಸುವ ಸತ್ಯ ಅತ್ಯಂತ ನಿಷ್ಠುರವಾದದ್ದು, ನಾಗರಿಕತೆಯಿಂದ ದೂರವಾದ ಮಲೆನಾಡಿನ ದಟ್ಟಾರಣ್ಯದ ನಡುವೆ ಬದುಕುತ್ತಿರುವ ಇಲ್ಲಿನ ಪಾತ್ರಗಳು 'ಮಣ್ಣಿನಿಂದ ಹೊರತಾದವರಲ್ಲ', ಕ್ರಿಯಾತ್ಮಕ ತುಡಿತಕ್ಕನುಗುಣವಾಗಿ ಯಾವ ಕೃತಕತೆಯೂ ಇಲ್ಲದೆ ಬದುಕುವಂತವರು ಎನ್ನುವ ಮಾತುಗಳು ಗಮನಾರ್ಹವಾದವು.

ಗುತ್ತಿ

ಗುತ್ತಿಯು ತಿಮ್ಮಿಯ ಮೇಲೆ ಅತಿಯಾದ ಪ್ರೀತಿಯನ್ನು ಹೊಂದಿರುತ್ತಾನೆ, ಇವಳನ್ನು ಮದುವೆಯಾಗಬೇಕೆಂದು ನಿರ್ಧರಿಸುತ್ತಾನೆ. ಇವಳನ್ನು ನನ್ನ ಬಿಟ್ಟು ಯಾರು ಮದುವೆಯಾಗಬಾರದೆಂದು ತಿಮ್ಮಿಯು ನನ್ನವಳಾಗಬೇಕು ಎಂಬ ಉದ್ದೇಶದಿಂದ ಕಣ್ಣಾಪಂಡಿತರಿಗೆ ತನ್ನ ಮನದ ಆಶಯವನ್ನು ವಿವರಿಸಿ ತಿಮ್ಮಿ ನನ್ನವಳಾಗುವ ರೀತಿ ಅಂತ್ರವನ್ನು ಕೊಡಿ ಎಂದು ಕೇಳುವ ಗುತ್ತಿ ಕೆಲವು ಸಮಯದ ನಂತರ ಕಣ್ಣಾಪಂಡಿತರು ಅಂತ್ರವನ್ನು ಗುತ್ತಿಗೆ ಕೊಡಲು ಬರುವ ಸಂದರ್ಭದಲ್ಲಿ ಗುತ್ತಿಯು ಅಂತ್ರಕ್ಕಾಗಿ ಕೈಚಾಚಿದಾಗ ಕಣ್ಣಾಪಂಡಿತರು ಗುತ್ತಿಯ ಕೈ ತನ್ನ ಕೈಗೆ ಸೋಕುತ್ತದೆ ಎಂಬ ಉದ್ದೇಶದಿಂದ ಕೈಯನ್ನು ಎತ್ತಿ ಗುತ್ತಿಯ ಕೈಗೆ ಹಾಕುತ್ತಾನೆ ಇಲ್ಲಿಯು ಕೂಡ ಒಂದು ಅಂತ್ರದಿಂದ ಒಂದು ಹೆಣ್ಣು ವಶೀಕರಣವಾಗುತ್ತಾಳೆ ಎನ್ನುವ ಮೌಢ್ಯತೆಯನ್ನು ಕಾಣಬಹುದು.

ಅದೇ ರೀತಿ ಕಣ್ಣಾಪಂಡಿತರು ಕೀಳು ಜಾತಿಯವನ ಕೈ ಸೋಕಿದರೆ ನಾನು ಮೈಲಿಗೆಯಾಗುತ್ತೇನೆ ಎಂಬ ಭಾವನೆಯನ್ನು ಕಾಣಬಹುದು. ಗುತ್ತಿಯು ಕಣ್ಣಾಪಂಡಿತರಿಂದ ಅಂತ್ರವನ್ನು ತೆಗೆದುಕೊಂಡು 'ಮೇಗ್ರೊಳ್ಳಿ ಹಲಸಿನ ಮರದ ಮನೆಗೆ' ಊಟ ಮಾಡಲು ಹೋದಾಗ ಮನೆಯ ಒಡತಿ ಅಂತಕ್ಕ ಗುತ್ತಿಗೆ ಮನೆಯ ಮುಂದಿನ ಪಡಶಾಲೆಯಲ್ಲಿ ಕೂರಿಸದೆ ಮನೆಯ ಹಿಂದಿನ ಬಾಗಿಲಿಗೆ ಕೂರಿಸಿ ಊಟವನ್ನು ಹಾಕುತ್ತಾರೆ, ಹೀಗೆ ಗುತ್ತಿಯು ಕಾವೇರಿಯ ಜೊತೆ ಮಾತನ್ನಾಡುವಾಗಲೂ ಕೂಡ ಮೇಲ್ವರ್ಗದ ಹೆಣ್ಣು ಮಕ್ಕಳು ಕೆಳವರ್ಗದವರ ಜೊತೆ ಹೆಚ್ಚು ಮಾತನ್ನಾಡಬಾರದು ಎಂಬ ಮಾತಿನ ಸಂಕೋಲೆಯನ್ನು ಕಾಣುತ್ತೇವೆ. ತಿಮ್ಮಿಯನ್ನು ತನ್ನ ಜೊತೆ ಕರೆದುಕೊಂಡು ಬರಬೇಕು ಎಂದು ಗುತ್ತಿಯು ಸೋದರತ್ತೆಯಾದ ಸೇಸಿಯ ಮನೆಗೆ ಹೋಗುತ್ತಾನೆ. ಅಲ್ಲಿ ಆವಾಗಲೇ ಅದೇ ಕೇರಿಯ ಬಚ್ಚನಿಗೆ ತಿಮ್ಮಿಯ ನಿಶ್ಚಿತಾರ್ಥವಾಗಿರುತ್ತದೆ. ಸೇಸಿಯು ಬಚ್ಚನಿಗೆ ಕೊಡಲು ಇಷ್ಟವಿಲ್ಲದಿದ್ದರೂ ಗೌಡರ ಜೀತದಾಳಾಗಿ ಅವರಲ್ಲಿ ಸಾಲ ಮಾಡಿ ಅವರಿಗೆ ತನ್ನ ಸಂಪೂರ್ಣವಾಗಿ ಮಾರಿಕೊಂಡಿದ್ದ ದೊಡ್ಡಬೀರ ಆ ವಿಚಾರದಲ್ಲಿ ಒಡೆಯರ ಆಜ್ಞೆಗೆ ತಲೆಬಾಗಿದ್ದನು. ಒಡೆಯರಿಗೆ ಬೇಕಾದ್ದುದು ಜೀತಮಾಡಲು ಒಂದು ಆಳು. ತಮ್ಮ ಹೊಲೆಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತ ಆಗುತ್ತದೆ ಎಂಬ ಮನೋಭಾವನೆಯಿಂದ ಕೇರಿಯ ಹೆಣ್ಣನ್ನು ಅದೇ ಕೇರಿಯ ಗಂಡೇ ಮದುವೆಯಾಗಬೇಕೆಂದು ನಿರ್ಣಯವಾಗಿರುತ್ತದೆ. ಆದರೆ ಸೇಸಿಯು ಗುತ್ತಿಯ ದುಃಖವನ್ನು ಹಾಗೂ ಪ್ರೀತಿಯನ್ನು ಅರ್ಥಮಾಡಿಕೊಂಡು ತಿಮ್ಮಿಯನ್ನು ಗುತ್ತಿಯ ಜೊತೆಯಲ್ಲಿ

ಕಳುಹಿಸಿಕೊಡಲು ಸಿದ್ಧಳಾಗುತ್ತಾಳೆ. ಇಲ್ಲಿಯು ದೊಡ್ಡವರು ಬಡವರ ಸ್ವತಂತ್ರವಾದ ಜೀವನಕ್ಕೆ ಅಡ್ಡಿಯಾಗಿದ್ದಾರೆ ಎನ್ನಬಹುದು. ತಿಮ್ಮಿ ತನ್ನ ಮದುವೆಗೆ ಧರಿಸಿದ್ದ ಒಡವೆಗಳನ್ನು ಒಂದು ಮಡಿಕೆಯೊಳಗೆ ಇಡುತ್ತಾಳೆ, ತಿಮ್ಮಿಯು ತನ್ನ ತಾಯಿಯ ಆಜ್ಞೆಯಂತೆ ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾಳೆ. ತಿಮ್ಮಿಯು ಮನೆ ಬಿಟ್ಟು ಹೋಗುವಾಗ ದೇವರನ್ನು ಕುರಿತು ಪ್ರಾರ್ಥನೆಯನ್ನು ಮಾಡುತ್ತಾ ನನ್ನನ್ನು ಕಾಪಾಡು ಎಂದು ಹೇಳುವುದನ್ನು ಮರೆಯುವುದಿಲ್ಲ. ಅಲ್ಲಿಯೂ ಕೂಡ ಕೆಳ ಸಂಪ್ರದಾಯದವರ ಒಂದು ಮೌಢ್ಯತೆಯನ್ನು ಕಾಣಬಹುದಾಗಿದೆ. ಗುತ್ತಿಯು ರಾತ್ರಿಯೆಲ್ಲ ನಡೆದು ತನ್ನ ವಾಸಸ್ಥಳವನ್ನು ಕಷ್ಟಪಟ್ಟು ಸೇರುತ್ತಾನೆ. ಇಲ್ಲಿಯೂ ಕೂಡ ಕೆಳಸಂಪ್ರದಾಯಸ್ಥನಾದ ಗುತ್ತಿಯು ಮದುವೆಯಾಗಲು ನಾನಾ ಕಷ್ಟಗಳನ್ನು ಅನುಭವಿಸಿ ಅವನ ಜೀವನದಲ್ಲಿ ಹಲವಾರು ನೋವುಗಳನ್ನು ಕಾಣುತ್ತಾನೆ. ಗುತ್ತಿಯು ತಿಮ್ಮಿಯನ್ನು ಮದುವೆಯಾದ ಮೇಲೆ ಅನಿರೀಕ್ಷಿತವಾಗಿ ನಡೆದ ಒಂದು ದೊಂಬಿಯಲ್ಲಿ ಸಿಕ್ಕಿಬಿದ್ದು ನಿರಪರಾಧಿಯಾಗಿದ್ದರೂ ಅಪರಾಧಿಯಾಗಿ ಪೊಲೀಸರ ಕೈಗೆ ಸಿಕ್ಕಿ ಬೀಳುತ್ತಾನೆ. ಪೊಲೀಸರಿಂದ ತಪ್ಪಿಸಿಕೊಂಡು ತಪ್ಪಿಸಿಕೊಂಡು ಬಂದು ತಿಮ್ಮಿಯನ್ನು ಕರೆದುಕೊಂಡು ತುಂಗಾ ನದಿಯ ಆಚೆಯ ದೂರದ ಹಳ್ಳಿಯೊಂದಕ್ಕೆ ದೇಶಾಂತರ ಹೋಗುತ್ತಾನೆ. ಗುತ್ತಿ ತನ್ನ ಜೀವನದಲ್ಲಿ ಹಲವಾರು ಕಷ್ಟಗಳನ್ನು ಅನುಭವಿಸುವುದನ್ನು ನಾವು ಕಾಣಬಹುದು ಕೆಳಜಾತಿಯವರು ಯಾವ ರೀತಿಯ ಮೌಢ್ಯಕ್ಕೆ ಹಾಗೂ ಶೋಷಣೆಗೆ ಒಳಗಾಗುತ್ತಾರೆ ಎನ್ನುವುದನ್ನು ಕುವೆಂಪು ಈ ಕಾದಂಬರಿಯಲ್ಲಿ ಗುತ್ತಿಯ ಪಾತ್ರದ ಮೂಲಕ ಚಿತ್ರಿಸಿದ್ದಾರೆ.

ಶಂಕರಪ್ಪ ಹೆಗ್ಗಡೆ

ಹೂವಳ್ಳಿ ಎಂಕಟಣ್ಣಗೆ ಸುಬ್ಬಣ್ಣ ಹೆಗ್ಗಡೆಯವರು ಒಂದು ಹಂದಿಯನ್ನು ಮಾರಲು ಹೊಲೆಯರಿಗೆ ಹಂದಿ ಹಿಡಿಯಲು ಹೇಳಿದಾಗ ಅದು ಕೊಟ್ಟಿಗೆಯಿಂದ ತಪ್ಪಿಸಿಕೊಂಡು ತೋಟ ಊರಿಗೆ ಮುಂತಾದ ಕಡೆ ಹಂದಿಯು ನುಗ್ಗುತ್ತದೆ. ಹಂದಿಯು ಎಲ್ಲಾ ಕಡೆ ಓಡಾಡಿ ಭಯಭೀತಿಯಿಂದ ಓಡುತ್ತಿರುವಾಗ ಹೊಲೆಯರ ಮಂಜನು ಹಂದಿಗೆ ಒಂದು ಬಡಿಗೆಯಿಂದ ಹೊಡೆಯುತ್ತಾನೆ. ಆಗ ಸುಬ್ಬಣ್ಣ ಹೆಗ್ಗಡೆಯವರು ಬಾಯಿಗೆ ಬಂದಂತೆ ಬೈಯುತ್ತಾರೆ. ಹಂದಿಯು ಶಂಕರಪ್ಪ ಹೆಗ್ಗಡೆಯವರ ಮನೆಯ ಕಡೆಗೆ ನುಗ್ಗಿ ಅವರ ಮನೆಯ ಮುಂದಿನ ತುಳಸಿಕಟ್ಟೆಯ ಮೇಲೆ ಜಿಗಿದು ಓಡುತ್ತದೆ, ಶಂಕರಪ್ಪ ಹೆಗ್ಗಡೆಯವರು ಮತ್ತು ವೆಂಕಟಣ್ಣ ತುಳಸಿಕಟ್ಟೆಯ ಕಡೆಗೆ ಬರುವ ಹಂದಿಯನ್ನು ತಡೆಯಲು ವಿಫಲರಾಗುತ್ತಾರೆ.

ಹಂದಿಯು ತುಳಸಿಕಟ್ಟೆಯನ್ನು ಮೈಲಿಗೆಯನ್ನು ಮಾಡಿ ಅಲ್ಲಿ ಹೊತ್ತಿಸಿಟ್ಟಿದ್ದ ನೀಲಾಂಜನಗಳೂ, ದೇವರಿಗೆ ಮಡಿಸಿದ್ದ ಹೂವುಗಳು ಚಲ್ಲಾಪಿಲ್ಲಿಯಾಗಿ ದೀಪಗಳು

ಆರಿಹೋಗುತ್ತವೆ. ಹಿಂದೆ ಬರುತ್ತಿದ್ದ ಹೊಲೆಯರೆಲ್ಲ ಗಾಬರಿಯಾಗಿ ಮರವಟ್ಟಂತೆ ದೂರದಲ್ಲಿಯೆ ನಿಂತು ಬಿಡುತ್ತಾರೆ. ಅದಕ್ಕಿಂತ ಹೆಚ್ಚಾಗಿ ತಾವು ಹೋಗಬಾರದ ಜಾಗಕ್ಕೆ ಹಂದಿ ಹೋಯಿತಲ್ಲಾ ತಮಗೆ ಕೇಡು ತಪ್ಪಿದಲ್ಲ ಎಂಬ ಪಾಪಭೀತಿಯಿಂದ ಕಂಗಲಾಗುತ್ತಾರೆ, ಸ್ವಲ್ಪ ಹೊತ್ತಿಗೆ ಮುಂಚೆ ತಾನು ಪೂಜಿಸಿ ಪ್ರದಕ್ಷಿಣೆ ಮಾಡಿದ್ದ ತನ್ನ ಮನೆದೇವರಿಗೆ ತನ್ನ ಕಣ್ಣ ಮುಂದೆಯೇ ಒದಗಿದ ಮೈಲಿಗೆಯ ದುಃಸ್ಥಿತಿಯನ್ನು ಎದೆಯಿಕ್ಕದೆ ನಿಟ್ಟಿಸುತ್ತಾ ದಿಗ್‌ಭ್ರಾಂತನಂತೆ ನಿಂತಿದ್ದ ಶಂಕರಪ್ಪ ಹೆಗ್ಗಡೆಯವರ ಕಣ್ಣುಗಳಲ್ಲಿ ನೀರು ಬಳಬಳನೆ ಇಳಿಯತೊಡಗಿತು. ಶಂಕರಪ್ಪ ಹೆಗ್ಗಡೆಯವರಿಗೆ ಅಮಂಗಳ ಕಾದಿದೆ ಎನ್ನುವುದಕ್ಕೆ ಮುನ್ಸೂಚನೆಯಂತಾಗಿ ದಿಗಿಲುಕೊಂಡು ಹೆಂಡತಿಯ ಹೆಸರನ್ನು ಹಿಡಿದು ಕೂಗದಿದ್ದ ಅವರು ತಡೆಯಲಾರದೆ ದುಃಖದಿಂದ ಕಂಗೆಟ್ಟಂತೆ "ಅಯ್ಯೋ, ಸೀತಾ, ನಮ್ಮ ಮನೆಯ ಹಾಳಾಯಿತಲ್ಲೇ ದೇವರಿಗೆ ಹಚ್ಚಿಟ್ಟಿದ್ದ ದೀಪನೆ ಆರಿಸಿದನಲ್ಲೇ ನಮ್ಮ ದಾಯಾದಿ".[೧] ಎಂದು ಗಟ್ಟಿಯಾಗಿ ರೋಧನ ಧ್ವನಿಯಲ್ಲಿ ಕೂಗುತ್ತಾರೆ ಇಲ್ಲಿಯು ಕೂಡ ಹೊಲೆಯರು ಯಾವ ರೀತಿ ಹೆದರುತ್ತಾರೆ, ಹಂದಿಯು ತುಳಸಿಕಟ್ಟೆಯನ್ನು ಹಾರಿದ್ದರಿಂದ ಅಪಶಕುನವಾಯಿತು ಎಂದು ಹೇಳುವ ಸನ್ನಿವೇಶದಲ್ಲಿ ಮೌಢ್ಯತೆಯನ್ನು ಕಾಣಬಹುದಾಗಿದೆ.

ಮುಕುಂದಯ್ಯ

ಕೋಣೂರಿನ ಮುಕುಂದಯ್ಯನಿಗೂ ಹುಲಿಯನಿಗೂ ಇದ್ದ ಪರಿಚಯ ಇಂದು ನಿನ್ನೆಯದಾಗಿರಲಿಲ್ಲ, ಹುಲಿಯ ತನ್ನ ಮರಿಯತನವನ್ನು ದಾಟಿ ಬೇಟೆಗಾರರೊಡನೆ ಕಾಡಿಗೆ ಹೋಗಲು ಪ್ರಾರಂಭ ಮಾಡಿದಾಗಲೆ ಅದರ ಶಕ್ತಿ, ಯುಕ್ತಿ, ಧೈರ್ಯ, ವೇಗ, ಬುದ್ಧಿವಂತಿಕೆಗೆ ಹೆಸರಾಗಿದ್ದ ಹುಲಿಯನ ಕಥೆ ಕಥೆಗಳೇ ಹಳ್ಳಿಯಿಂದ ಹಳ್ಳಿಗೆ ಹಬ್ಬಿಬಿಟ್ಟಿತ್ತು. ಸಿಂಬಾವಿ ಗುತ್ತಿ ಸ್ವತಃ ಹಳು ನುಗ್ಗಿ ಭಾಗವಹಿಸಿದ್ದ ದೊಡ್ಡ ಬೇಟೆಗಳಲ್ಲಿ ಬಿಲ್ಲಿಗೆ ನಿಂತಿದ್ದ ಮುಕುಂದಯ್ಯನಿಗೆ ಹುಲಿಯನ ಹೆಚ್ಚುಗಾರಿಕೆಯ ಅನುಭವ ಪ್ರತ್ಯಕ್ಷವಾಗಿಯೇ ದೊರಕಿತ್ತು ಒಮ್ಮೆ ಒಂದು ಒಂಟಿಗ ಹಂದಿಯನ್ನು ಕಾಡಿನಲ್ಲಿ ಅತ್ತ-ಇತ್ತ ಹೋಗದಂತೆ ತಡೆದು ಅಟ್ಟಿ ತಾನು ನಿಂತಿದ್ದ ಬಳಿಗೆ ಸರಿಯಾಗಿ ಸೋವಿ ಎಬ್ಬಿದುದರಿಂದಲೆ ತಾನು ಅದಕ್ಕೊಂದು ಗುಂಡು ಹೊಡೆಯಲು ಸಾಧ್ಯವಾಗಿತ್ತು. ಆ ಒಂಟಿಗನ ಹಿಂಗಾಲ ತೊಡೆಗೆ ಗುಂಡು ಬಿದ್ದು ಗಾಯಗೊಂಡರೂ ಅದು ಮುನ್ನುಗ್ಗಿ ಮುಂದಿನ ಕಾಡಿಗೆ ತಪ್ಪಿಸಿಕೊಂಡು ಹೋಗುವುದನ್ನು ತಡೆದು ಹಂದಿಯ ಕೋರೆಯಿಂದ ತಿವಿಸಿಕೊಂಡಿರುತ್ತದೆ. ಇಂತಹ ಸಾಹಸಮಯವಾದ ಹುಲಿಯನ ಪ್ರವೃತ್ತಿಗೆ ಮರುಳಾದ ಮುಕುಂದಯ್ಯ ಅದರ ಬಗ್ಗೆ ಹೆಚ್ಚು ಆಸೆಯನ್ನು ಹೊಂದುತ್ತಾನೆ. ಮುಕುಂದಯ್ಯ ಅದನ್ನು ತನಗೆ ಕೊಟ್ಟು ಕೋಣೂರಿನಲ್ಲಿಯೇ

---

೧. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೧೦೪.

ಬಿಟ್ಟು ಹೋಗಬೇಕೆಂದು ಗುತ್ತಿಯನ್ನು ಪರಿಪರಿಯಾಗಿ ಪೀಡಿಸುತ್ತಾನೆ. "ದೊಡ್ಡ ಮನುಷ್ಯರು ಕೇಳುವಾಗ ಹೊಲೆಯ ಬೆಲೆ ಕೊಡದಿರುವುದಕ್ಕಾಗುತ್ತದೆಯೆ? ಗೌರವದಿಂದ ನಡೆದುಕೊಳ್ಳದಿರಲು ಸಾಧ್ಯವೆ? ಮುಕುಂದಯ್ಯನಂತಹ ಸರಳನೂ, ಸ್ನೇಹಪರನೂ, ಆದ ವ್ಯಕ್ತಿಗೆ ಇಲ್ಲ ಎಂದು ಹೇಳಲಾಗದೆ ಗುತ್ತಿ ಕಣ್ಣೀರು ತುಂಬಿ ಗದ್ಗದಸ್ವರದಿಂದ ಒಪ್ಪಿಕೊಳ್ಳಬೇಕಾಯಿತು".[೧] ಕಂಬಕ್ಕೆ ಕಟ್ಟಿದ್ದ ಹುಲಿಯನ ತಲೆ ಸವರಿ ಮುದ್ದಾಡಿ ಗುತ್ತಿ ಸಿಂಬಾವಿಯ ಕಡೆಗೆ ಹೊರಡುತ್ತಾನೆ. ಆಗ ಮುಕುಂದಯ್ಯ ಗುತ್ತಿಗೆ ಚೆನ್ನಾಗಿದ್ದ ಕಸೆ ಅಂಗಿ, ಬಂದಷ್ಟು ಎಲೆ ಅಡಿಕೆ, ಹೊಗೆಸೊಪ್ಪ್, ಒಂದು ರೂಪಾಯಿಯನ್ನು ಕೊಂಡುತ್ತಾನೆ. ಒಂದು ಮೈಲಿ ದೂರ ಹೋದ ಗುತ್ತಿಗೆ ಮುಂದೆ ಹೋಗಲಾಗದೆ ಕಾಡಿನ ನಡುವೆ ಕುಳಿತು ಅಳುತ್ತಾನೆ.

"ಮುಕುಂದಯ್ಯನಿಗೆ ಯರೋ ಹೇಳಿದ್ದರು, ನೆಲ ಸುಟ್ಟು, ಆ ಸುಟ್ಟ ಸ್ಥಳದಲ್ಲಿಯೇ ಬೆಲ್ಲ ಬೆರೆಸಿದ ಅನ್ನ ಹಾಕಿ ತಿನ್ನುವಂತೆ ಮಾಡಿದರೆ ಎಂತಹ ನಾಯಿಯಾದರೂ ತನ್ನ ಹಳೆಯ ಒಲವನ್ನೆಲ್ಲಾ ಮರೆತುಬಿಡುತ್ತದೆ, ಮನೆ ಬಿಟ್ಟು ಹೋಗುವುದಿಲ್ಲ ಎಂದು" ಗುತ್ತಿ ಒಪ್ಪಿ ಹುಲಿಯನನ್ನು ತನಗೊಪ್ಪಿಸಿ ಹೋದ ಮೇಲೆ ಕಟ್ಟಿದ್ದ ಸರಪಳಿಯನ್ನು ತುಯ್ದು ಜಗ್ಗಿಸಿ ಎಳೆದು ಗುತ್ತಿ ಹೋದ ಕಡೆ ಮುಖಮಾಡಿ ರೋಧಿಸುವುದನ್ನು ಕಂಡು ಮುಕುಂದಯ್ಯ ಸಮಾಧಾನ ಪಡಿಸುತ್ತಾನೆ, ಕೊನೆಗೆ ನೆಲಸುಟ್ಟು ಬೆಲ್ಲದನ್ನ ಹಾಕುವ ಉಪಾಯವನ್ನು ಯೋಚಿಸಿದನು.

ಅಷ್ಟರಲ್ಲಿ ಗುತ್ತಿಯು ಮತ್ತೆ ಹಿಂತಿರುಗಿ ಬಂದಿದ್ದಾನೆ ಯಾಕೆ? ಎಂದು ಕೇಳಿದರೆ ಮುಕುಂದಯ್ಯ ಕೊಟ್ಟಿದ್ದ ಸಾಮಾನುಗಳನ್ನು, ರೂಪಾಯಿಯೂ ಸೇರಿ, ಹುಲಿಯನ ಮುಂದೆ ಇಟ್ಟು ಕೈಮುಗಿದು ನಿಂತುಬಿಟ್ಟನು. ಎಲ್ಲರ ಮನಕರಗಿ ನಾಯಿಯನ್ನು ಗುತ್ತಿಗೆ ಕೊಟ್ಟು ಬಿಡುವಂತೆ ಮುಕುಂದಯ್ಯನಿಗೆ ಹೇಳಿದರು. ಆದರೆ ಮುಕುಂದಯ್ಯನಿಗೆ ಮನಸ್ಸಿಲ್ಲದ ಕಾರಣ ಗುತ್ತಿ ಒಡೆಯರ ದೈನ್ಯಕ್ಕೆ ಮನಸೋತು "ನನಗೆ ನಾಯಿಯನ್ನು ಕೊಡದಿದ್ದರೂ ಚಿಂತೆಯಿಲ್ಲ ಅದನ್ನು ಮಾರಿ ಬಿಟ್ಟೆ ಎಂದು ತನ್ನ ಮನಸ್ಸಿಗೆ ಆಗಬಾರದು",[೨] ಈ ಸಾಮಾನ್ಯನ್ನೆಲ್ಲ ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿ ನಡೆಯುತ್ತಾನೆ.

ಸರಪಳಿ ಬಿಚ್ಚಿ ಬಿಟ್ಟುಬಿಡಲು ಅವನ ಮನಸ್ಸಾಯಿತು ಗುತ್ತಿಯ ಹಿಂದೆ ಹೋದರೆ ಹೋಗಲಿ ಎಂದುಕೊಂಡನು. ನೆಲ ಸುಟ್ಟು ಬೆಲ್ಲ ಹಾಕಿದರೆ ಎಲ್ಲ ಮರೆತುಹೋಗಿ ಸೇರಿದ ಮನೆಯನ್ನು ಬಿಡುವುದಿಲ್ಲವಂತೆ ಅದನ್ನೂ ಮಾಡಿ ನೋಡುತ್ತೇನೆ, ಆಮೇಲೆ ತಾನಾಗಿ ನಿಂತರೆ

---

[೧]. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೧೨೮.
[೨]. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೧೨೮.

ನಿಲ್ಲಲಿ, ಹೋದರೆ ಹೋಗಲಿ ಎಂದು ನಿಶ್ಚಯಿಸಿ ಒಂದು ಕಡೆ ಬಿಳಿಹುಲ್ಲು ಹಾಕಿ, ಬೆಂಕಿ ಹೊತ್ತಿಸಿ, ಆ ಬಿಸಿಜಾಗದಲ್ಲಿ ಬೆಲ್ಲದ ಜೋನಿಯನ್ನು ಇಟ್ಟು ನಾಯಿಯನ್ನು ಕಂಬದಿಂದ ಬಿಚ್ಚಿ ಅದರ ಬಳಿಗೆ ಕಟ್ಟಿದನು. ಆದರೆ ನಾಯಿ ಅದನ್ನು ಮೂಸಿನೋಡಿತೇ ಹೊರತು ನೆಕ್ಕಲಿಲ್ಲ, ಮುಕುಂದಯ್ಯನಿಗೆ ಆಶಾಭಂಗವಾಗುತ್ತದೆ.

ಇನ್ನೂ ಸ್ವಲ್ಪ ಹೊತ್ತು ಬಿಟ್ಟು ಬಂದು ನೋಡಿದಾಗ ಬೆಲ್ಲ ಅಲ್ಲಿರಲಿಲ್ಲ, ಹುಲಿಯನೆ ತಿಂದಿತೋ ಅಥವಾ ಇನ್ನಾವುದಾದರೂ ತಮ್ಮ ನಾಯಿಗಳಲ್ಲಿ ಒಂದು ಕಬಳಿಸಿತೋ ಎಂಬ ಸಂದೇಹದಿಂದಲೂ ಮುಕುಂದಯ್ಯ ನಾಯಿಯ ತಲೆಯನ್ನು ಸವರಿ ಹುಲಿಯನ ಕೊರಳು ಬಿಚ್ಚಿದನು. ನಾಯಿ ಸಂತೋಷಕ್ಕೆ ಅವನ ಮೇಲೆ ನೆಗೆದಾಡಿ, ಓಡಾಡಿತು ಕೊನೆಗೆ ನಾಯಿ ಗುತ್ತಿಯ ಹೋದ ಕಡೆ ಓಡುತ್ತದೆ, ತನ್ನ ಒಡೆಯನ ಸ್ಥಾನಕ್ಕೆ ಸೇರುತ್ತದೆ. ಇಲ್ಲಿಯು ಕೂಡ ಬೆಲ್ಲದ ಅನ್ನ, ನೆಲ ಸುಡುವುದು ಮುಂತಾದ ಮೌಢ್ಯತೆಯನ್ನು ಕಾಣಬಹುದಾಗಿದೆ.

ಪಾದ್ರಿ ಜೀವರತ್ನಯ್ಯ

ಕ್ರೈಸ್ತರ ಪಾದ್ರಿಯಾದ ಜೀವರತ್ನಯ್ಯ ಬೈಸಿಕಲ್ಲಿನ ಸವಾರಿ ಮಾಡಿಸುವ ನೆಪದಲ್ಲಿ ಗೌಡ ಜನಾಂಗದವರನ್ನು ಮತಾಂತರ ಮಾಡಲು ಪ್ರಯತ್ನಿಸುವ ಸಂದರ್ಭಗಳು ವೈಚಾರಿಕತೆಯ ಬಗ್ಗೆ ತಿಳಿಸುವಲ್ಲಿ ಸಮರ್ಪಕವಾಗಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ರೂಪುಗೊಂಡಿವೆ. ಸಾಮಾನ್ಯ ದೇವತಾ ಮನುಷ್ಯನ ರೀತಿಯಲ್ಲಿ ಮಲೆನಾಡಿನ ಪ್ರದೇಶಕ್ಕೆ ಪಾದಾರ್ಪಣೆ ಮಾಡಿದ ಜೀವರತ್ನಯ್ಯ ಹಂತ-ಹಂತವಾಗಿ ಜನರನ್ನು ಮತಾಂತರಗೊಳಿಸಲು ಪ್ರಯತ್ನಿಸುತ್ತಾನೆ. ಮಲೆನಾಡಿನ ಮುಗ್ಧ ಜನರಿಗೆ ಕೆಲವೊಂದು ಹೊಸ ಆಮಿಷಗಳನ್ನು ತೋರಿಸಿ ಅಂದರೆ ಬೈಸಿಕಲ್ ಹೊಡೆಯುವುದು ಮುಂತಾದ ಆಸೆಯನ್ನು ತೋರಿಸಿ ಮೊದಲು ಬೆಟ್ಟಹಳ್ಳಿ ಕಲ್ಲಯ್ಯಗೌಡರ ಹಿರಿಯ ಮಗ ದೇವಯ್ಯ ಗೌಡರಿಗೆ ಕಲಿಸುತ್ತಾ ಹಂತ ಹಂತವಾಗಿ ಬರಮಾಡಿಕೊಳ್ಳುತ್ತಾ ಪರಿಚಯವಂತನಾಗಿ ಸಾಗುತ್ತಾ ಹೋಗುತ್ತಾನೆ.

"ಸಿಂಧುವಳ್ಳಿ ಚನ್ನಪ್ಪಗೌಡರಿಗೆ ೧೮೯೩ನೇ ಸೆಪ್ಟೆಂಬರ್ ೧೧ನೇ ಸೋಮವಾರದಂದು ಅಮೇರಿಕಾದ ಚಿಕಾಗೋ ನಗರದಲ್ಲಿ ಸ್ವಾಮಿ ವಿವೇಕಾನಂದರ ಭಾಷಣದ ವೈಖರಿಯನ್ನು ತಿಳಿಸುತ್ತಾ ದೀವದಾನೆ ಕಾಡನೆಯನ್ನು ಆಕರ್ಷಿಸಿ ಖೆಡ್ಡಾಕ್ಕೆ ಕೆಡಹಲು ಪ್ರಯತ್ನಿಸುವಂತೆ ಪಾದ್ರಿ ಜೀವರತ್ನಯ್ಯ ಚನ್ನಪ್ಪನ ಕಾಲಡಿಯ ಕುರುಡು ಆಚಾರ ಮತ್ತು ಮೂಢ ನಂಬಿಕೆಗಳ

ಭೂಮಿಯನ್ನು ಸಡಿಲಗೊಳಿಸಿ, ಅಗೆದು, ತೆಗೆದು, ಕ್ರೈಸ್ತಮತದ ಖೆಡ್ಡಕಂದಕವನ್ನು ಮೆಲ್ಲಗೆ ನಿರ್ಮಿಸುತ್ತಾನೆ".[೧]

ಸಿಂಧುವಳ್ಳಿ ಚನ್ನಪ್ಪನನ್ನು ದೀವದಾನೆಯನ್ನಾಂಗಿ ಪಳಗಿಸಿಕೊಂಡ ಮೇಲೆ ಅವನ ಮುಖಾಂತರವಾಗಿ ಪಾದ್ರಿ ಇತರ ದೊಡ್ಡ ದೊಡ್ಡ ಗೌಡರ ಮನೆಗಳಿಗೆ ಹೋಗಿ ಅವರ ಪರಿಚಯ ಸ್ನೇಹಗಳನ್ನು ಸಂಪಾದಿಸುತ್ತಾನೆ. ಆ ಸ್ನೇಹಕ್ಕೆ ಪ್ರತಿರೂಪವಾಗಿಯೆ ಪಾದ್ರಿಯಿಂದ ಅನಕ್ಷರರಾದ ಗೌಡರುಗಳಿಗೆ ಒದಗುತ್ತಿದ್ದ ಸಹಾಯವೆಂದರೆ ಹಳೆಯ ರಾಜ್ಯಗಳಳಿದು ಬ್ರಿಟಿಷ್ ಚಕ್ರಾಧಿಪತ್ಯ ಸುಭದ್ರವಾಗಿ ಕಾಲೂರುತ್ತಿದ್ದ ಆ ಕಾಲದಲ್ಲಿ ಹೊಸ ಕಾನೂನುಗಳು ಹೊಸ ಹೆಸರಿನ ಅಧಿಕಾರಿಗಳು ಹೊಸ-ಹೊಸ ಕಾನೂನುಗಳನ್ನು ಜಾರಿಗೆ ತರುತ್ತಿದ್ದರಿಂದ ತಕ್ಕಮಟ್ಟಿಗೆ ಇಂಗ್ಲೀಷ್ ತಿಳಿದಿದ್ದ ಆ ಪಾದ್ರಿ ಸರ್ಕಾರದ ವ್ಯವಹಾರಗಳಲ್ಲಿ ಅವರಿಗೆ ನೀಡುತ್ತಿದ್ದ ನೆರವು. ಹಳ್ಳಿಯವರು ತೀರ್ಥಹಳ್ಳಿಗೆ ಹೋದಾಗ ಆಸ್ಪತ್ರೆ, ಡಾಕ್ಟರ್, ಹವಾಲ್ದಾರರು, ಪೊಲೀಸಿನವರು, ಕಾಫಿ, ಹೋಟೆಲ್ ಮುಂತಾದ ಹಿಂದೆಂದೂ ಕೇಳದಿದ್ದ ಭಾಷೆಯ ಹೆಸರುಗಳಿಗೆ ದಿಗಿಲುಪಟ್ಟುಕೊಳ್ಳುತ್ತಿದ್ದಾಗ ಪಾದ್ರಿಯಿಂದ ಅವರಿಗೆ ತುಂಬ ಉಪಕಾರವಾಗುತ್ತಿತ್ತು. ಆ ಅನುಕೂಲಕ್ಕಾಗಿ ಅವರು ಪಾದ್ರಿಯ ನಿಂದನಾತ್ಮಕವೂ ಖಂಡನಾತ್ಮಕವೂ ಆಗಿದ್ದ ಉಪದೇಶವನ್ನೆಲ್ಲ ನಗೆಮೊಗದಿಂದ ಸಹಿಸಿಕೊಂಡು ಹೋಗುತ್ತಿದ್ದರು.

ಬೆಟ್ಟಳ್ಳಿಯ ಮನೆಯಲ್ಲಿ ಪಾದ್ರಿಗೆ ಊಟ ಹಾಕುವ ವಿಷಯಕ್ಕೆ ಮನೆಯ ತುಂಬೆಲ್ಲ ಗುಸು-ಗುಸು ನಡೆಯುತ್ತದೆ ಏಕೆಂದರೆ ಹೊಲೆಯರಿಗಿಂತಲೂ ಕೀಳು ಜಾತಿಯವನು ಪಾದ್ರಿ ಎಂಬ ಮನೋಭಾವದಿಂದ, ಪಾದ್ರಿಯನ್ನು ಎಲ್ಲಿ ಕೂರಿಸಿ ಊಟಕ್ಕೆ ಕೊಡಬೇಕು ಎಂಬ ಬಗ್ಗೆ ಎಲ್ಲರೂ ತಲೆ ಕೆಡಿಸಿಕೊಂಡು ಪಾದ್ರಿಗೆ ಊಟವನ್ನು ಮನೆಯ ಆಳೊಬ್ಬನ ಕೈಲಿ ಒಂದು ಮಣೆ ಕೊಟ್ಟು ಕೆಳಜಗಲಿಯ ಮೂಲೆಯಲ್ಲಿ ಹಾಕಿಸುತ್ತಾರೆ, ಇಲ್ಲಿಯು ಕೂಡ ಮೌಢ್ಯತೆ ಮತ್ತು ಆಚಾರತೆಯನ್ನು ಕಾಣಬಹುದು.

ಊಟಕ್ಕೆ ಬಾಳೆ ಎಲೆ ಆರಿಸುವಾಗ ಒಂದು ಸಣ್ಣ ವಿಚಾರಗೋಷ್ಠಿಯೇ ನಡೆಯುತ್ತದೆ. ಎಲೆಯ ಕೀಳು ಹಾಕುವುದೋ, ಕುಡಿ ಹಾಕುವುದೋ? ಎಂದು ಆದರೆ ದೇವಯ್ಯನ ಹೆಂಡತಿ "ಬ್ಯಾಡ ಅತ್ತೆಮ್ಮ ಒಂದು ಕಂಡು ಹಾಕಿದರೆ ಆಯಿತು"[೨] ಎಂದಳು "ಪಾದ್ರಿಯ ಯೋಗ್ಯತೆಗೆ ಕುಡಿಬಾಳೆಲೆಯ ಸ್ಥಾನಮಾನಗಳ ಮೀರಿದು ಎಂಬುದು ಅವಳ ಒಳ ಇಂಗಿತವಾಗಿತ್ತು".[೩] ಆಳುಗಳೂ ಕೂಡ ಪಾದ್ರಿಗೆ ಕೈಯಾರೆ ಬಿಡಿಸಲು ಒಪ್ಪಲಿಲ್ಲ, 'ದನ ತಿನ್ನುವ ಕೀಳುಜಾತಿಗೆ

---

೧. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೧೯೬.
೨. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೨೦೦.
೩. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೨೦೦.

ಕೈಯಿಂದಲೇ ಅನ್ನ ಹಾಕಿ ಅವರ ಎಂಜಲಿನಿಂದ ಮೈಲಿಗೆಯಾಯಿತೆಂದರೆ ಜಾತಿಯವರಾರೂ ತಮ್ಮನ್ನು ಒಳಕ್ಕೆ ಸೇರಿಸುವುದಿಲ್ಲ' ಎನ್ನುತ್ತಾರೆ. ಕೊನೆಗೆ ಹೊಲೆಯರು ಎಲೆಗೆ ಬಡಿಸುವುದನೆಲ್ಲ ಬಡಿಸಿ ಆ ಎಲೆಯನ್ನೇ ಒಂದು ಮೊರದಲ್ಲಿ ಇಟ್ಟು ಪಾದ್ರಿಗೆ ಕೊಡುತ್ತಾರೆ. ಕುಡಿಯಲು ಕಂಚು ತಾಮ್ರದ ಲೋಟವನ್ನು ಎಚ್ಚರಿಕೆಯಿಂದ ಆರಿಸುತ್ತಾರೆ, ಏಕೆಂದರೆ ಅದನ್ನು ಬೆಂಕಿಯಲ್ಲಿ ಸುಟ್ಟು, ಸಗಣಿ ನೀರಿನಲ್ಲಿ ಅದ್ದಿಟ್ಟು ಮಡಿಮಾಡಿಕೊಳ್ಳಬಹುದು ಎಂದು. ಒಂದು ಭಾರಿ ಕಲ್ಲಯ್ಯಗೌಡರು ತಮ್ಮ ಹಿರಿಯ ಮಗ ದೇವಯ್ಯನೊಡನೆ ತೀರ್ಥಹಳ್ಳಿಗೆ ಕಛೇರಿಯ ಕೆಲಸಕ್ಕೆ ಹೋಗಿದ್ದಾಗ ಜೀವರತ್ನಯ್ಯ ಗೌಡರ ಕೆಲಸ ಬೇಗ ಮುಗಿಯುವಂತೆ ಮಾಡಿದ್ದನು. ಹೀಗೆ ಪಾದ್ರಿಯು ಹಂತ-ಹಂತವಾಗಿ ಮತಾಂತರದ ನೆಲೆಯನ್ನು ಕಾಣಲು ಪ್ರಯತ್ನಿಸುತ್ತಾನೆ.

ಮೇಗರವಳ್ಳಿಯಲ್ಲಿ ಅಂತಕ್ಕ ಸೆಡ್ತಿಯ ಮನೆಯಿಂದ ಸುಮಾರು ಎರಡು ಮೂರು ಫರ್ಲಾಂಗು ದೂರದಲ್ಲಿ ಮಿಷನರಿ ಸ್ಕೂಲ್ ಕಟ್ಟಡ ಪ್ರಾರಂಭವಾಗುತ್ತದೆ. "ಆಗತಾನೆ ಹಳೆತ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು ಆಂಗ್ಲೇಯರ ಆಡಳಿತದ ರೀತಿಯೂ ಇಂಗ್ಲೀಷಿನ ಪ್ರಭಾವವೂ ಮೊಳೆದೋರುತ್ತಿದ್ದ ಸಂಧಿಸಮಯ, ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತಪಾದ್ರಿಗಳ ಕಾರ್ಯ ಶ್ಲಾಘನೀಯವಾಗಿತ್ತು".[೧] ತಮ್ಮ ಮತಕ್ಕೆ ಜನರನ್ನು ಸೇರಿಸಿಕೊಳ್ಳುವ ಧಾರ್ಮಿಕ ಪ್ರಯತ್ನಕ್ಕೆ ಪೀಠಿಕೆಯಾಗಿತ್ತು. ಈ ಲೌಕಿಕ ಸೇವಾ ಕಾರ್ಯ. ಸಾಮಾನ್ಯ ಜನ ಬಹುಕಾಲದಿಂದಲೂ ಹಿಂದೂಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಒಡ್ಡಿದ ಮೂಢಮತಾಚಾರಗಳ ಕೂಣಿಗೆ ಸಿಕ್ಕಿಬಿದ್ದರು. ಅವರನ್ನು ಆ ಕೂಣಿಯಿಂದ ತಪ್ಪಿಸಿ ರಕ್ಷಿಸುವ ನೆಪದಲ್ಲಿ ಕ್ರೈಸ್ತಪಾದ್ರಿಗಳು ತಮ್ಮ ಮತದ ಬಲೆಯನ್ನು ಬೀಸಿ ಅದರೊಳಕ್ಕೆ ಹಾರಿ ಬೀಳುವ ಪ್ರಾಣಿಗಳನ್ನು ಭಕ್ಷಿಸುವ ಅಥವಾ ಅವರ ರೀತಿಯಲ್ಲಿ ರಕ್ಷಿಸುವ ಅಭಿಸಂಧಿಯನ್ನಿಟ್ಟುಕೊಂಡಿದ್ದರು. ಮಂಡಗದ್ದೆಯಲ್ಲಿ ಹೆರಿಗೆ ಆಸ್ಪತ್ರೆ ಸ್ಥಾಪಿಸಿ ತೀರ್ಥಹಳ್ಳಿ, ದೇವಂಗಿ, ಮೊದಲಾದೆಡೆಗಳಲ್ಲಿ ಸ್ಕೂಲುಗಳನ್ನು ಸ್ಥಾಪಿಸುತ್ತಾರೆ. ಮಲೇರಿಯಾಕ್ಕೆ ಬಲಿಯಾದವರನ್ನು ಕಾಪಾಡಿ ತಾವು ಕರುಣೆಯ ಅವತಾರವಾಗಿದ್ದ ಯೇಸುಕ್ರಿಸ್ತನ ಅನುಯಾಯಿಗಳೆಂದು ಪ್ರತ್ಯಕ್ಷ ನಿದರ್ಶನದಿಂದ ತೋರಿಸಿಕೊಟ್ಟು, ಜನರ ಅನುರಾಗ ವಿಶ್ವಾಸಗಳನ್ನೂ ಕೃತಜ್ಞತೆಯನ್ನು ಸೂರೆಗೊಂಡು ಅದನ್ನು ತಮ್ಮ ಮೂಲೋದ್ದೇಶವಾಗಿದ್ದ ಮತಾಂತರಗೊಳಿಸುವ ಕಾರ್ಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ.

[೧]. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೨೭೯.

"ಬೆಟ್ಟಳ್ಳಿಯ ದೇವಯ್ಯನಿಗೆ ಪಾದ್ರಿಯಿಂದ ಬಹುಮಾನವಾಗಿ ಬೈಸಿಕಲ್ಲು ಕೊಟ್ಟು ಇತರರನ್ನೂ ಕ್ರೈಸ್ತಮತಕ್ಕೆ ಸೇರಿಸುವ ಸಲುವಾಗಿ ಕೊಟ್ಟಿದ್ದ ಮುಂಗಾಣಿಕೆಯಾಗಿತ್ತು"[೧] ಅದರ ಪರಿಣಾಮದ ಕಠೋರತೆ ದೇವಯ್ಯನ ಮನಸ್ಸಿಗೆ ಹೊಕ್ಕಿರುವುದಿಲ್ಲ, ಆದರೆ ಪಾದ್ರಿಗೆ ತಾನು ಏನನ್ನು ಮಾಡುತ್ತಿದ್ದೇನೆ ಎಂಬುದರ ಸ್ಪಷ್ಟ ಅರಿವು ಇರುತ್ತದೆ. ತಾನು ಉಪದೇಶಿಯ ಸ್ಥಾನದಿಂದ ರೆವರೆಂಡಿನ ಪಟ್ಟಕ್ಕೆ ಏರಬೇಕಾದರೆ ಎಷ್ಟು ಜನರನ್ನು ಕ್ರೈಸ್ತ ಜಾತಿಗೆ ಸೇರಿಸಬೇಕು ಎಂಬ ಲೆಕ್ಕದ ಪಟ್ಟಿ ಅವನ ಬೊಕ್ಕಣದಲ್ಲಿ ಹಸಿದು ಬಾಯ್ದೆರೆಯುತ್ತದೆ. ಇಲ್ಲಿಯೂ ಕೂಡ ಜನರ ಮೌಢ್ಯತೆ ಮತ್ತು ಪಾದ್ರಿಯ ಕುಟಿಲ ಬುದ್ಧಿಯನ್ನು ಕಾಣಬಹುದು.

ಪಾದ್ರಿ ಜೀವರತ್ನಯ್ಯ ಮಿಶನ್ ಸ್ಕೂಲಿನ ಹತ್ತಿರ ಬಾವಿ ತೋಡಿಸಲು ಸ್ಥಳ ಗೊತ್ತುಮಾಡುವ ಕಾರ್ಯದಲ್ಲಿ ತಲೆ ಕೆಡಿಸಿಕೊಳ್ಳುತ್ತಾನೆ ಏಕೆಂದರೆ "ಕ್ರೈಸ್ತರಾದ ತಾವು ಮುಖ್ಯವಾಗಿ ಕ್ರೈಸ್ತ ಮತ ಪ್ರಚಾರಕ್ಕಾಗಿಯೆ ನಿರ್ಮಿತವಾಗಲಿರುವ ಸಂಸ್ಥೆಗೆ ಕ್ರೈಸ್ತ ಸಮ್ಮತವಲ್ಲದ ಹಿಂದೂ ಧರ್ಮದ ವಿಧಾನವನ್ನು ಪಡೆಯಬಹುದೇ, ಹರಕೆ, ಪೂಜೆ ಮಾಡುವುದು ಇತ್ಯಾದಿಗಳನ್ನೆಲ್ಲ ಅವಹೇಳನ ಮಾಡಿಸುವ ಖಂಡಿಸುವ ನಾವೆ ಅವೈಜ್ಞಾನಿಕವಾದ ಉಪಾಯವನ್ನು ಕೈಗೊಂಡರೆ ನಾಳೆ ತಮ್ಮ ದೊಡ್ಡ ಗುರುಗಳಾದ ರೆವರೆಂಡ್ ಲೇಕ್‌ಹಿಲ್ ದೊರೆಗಳು ಏನೆಂದರು"[೨] ಎಂಬ ಮನೋಭಾವನೆಯನ್ನು ತಾಳುತ್ತಾನೆ.

ನೀರು ಸಿಗುವ ತಾಣದಲ್ಲಿ ಹಸಿರು ಕಡ್ಡಿ ಬಾಗುತ್ತದೆ ಎಂದು ಕಣ್ಣಾಪಂಡಿತರು, ಬೆಟ್ಟಳ್ಳಿ ದೇವಯ್ಯಗೌಡರು, ಕರಿಮೀನು ಸಾಬರು ಹೇಳಿದಾಗ ಪಾದ್ರಿಯಾದ ಜೀವರತ್ನಯ್ಯ ಉದಾಸೀನ ಮಾಡುತ್ತಾನೆ. ಹೊಲೆಯರು ಹಸಿರು ಕಡ್ಡಿಯನ್ನು ಹಿಡಿದು ಹೊರಟಾಗ ಪಾದ್ರಿಯು ಏನೋ ಮೋಸ ನಡೆಯುತ್ತದೆ ಎಂದು ಕಣ್ಣಿನ ಮೇಲೆ ಕಣ್ಣಿಟ್ಟು ಮುಂದಾಗಿ ಪರೀಕ್ಷಾ ಕಾರ್ಯದಲ್ಲಿ ತೊಡಗುತ್ತಾನೆ. ಪಾದ್ರಿ ಬಾವಿ ಅಗೆಯಲು ಹೇಳಿದ ಜಾಗದಲ್ಲಿ ಹಸುರುಕಡ್ಡಿ ಬಾಗಲಿಲ್ಲ, ಆದರೆ ಹೊಲೆಯರು ಮುಂದೆ ಸಾಗಿದಾಗ ಹಸಿರುಕಡ್ಡಿ ನೀರು ಸಿಗುವ ತಾಣದಲ್ಲಿ ಬಾಗುತ್ತದೆ ಆದರೆ ಪಾದ್ರಿಯು ಇದು ಹೊಲೆಯರ ಕೈಚಳಕ ಎಂದು ಭಾವಿಸುತ್ತಾನೆ, ಕಣ್ಣಾಪಂಡಿತರ ಸೂಚನೆಯ ಮೇರೆಗೆ ಐಗಳು ಹಲಸಿನ ಮರದ ದಿಕ್ಕಿಗೆ ತಿರುಗಿ ನಡೆಯತೊಡಗಿದಾಗ ಹಲಸಿನ ಮರದ ಹತ್ತಿರ ಭೂಮಿಗೆ ಹಸಿರುಕಡ್ಡಿ ಬಾಗುತ್ತದೆ, ಆ ಕ್ರಿಯೆ ಎಲ್ಲರಿಗೂ ವಿಸ್ಮಯವನ್ನು ಉಂಟುಮಾಡುತ್ತದೆ. ಇದು ದೇವರ ಶಕ್ತಿಯಲ್ಲ, ದೇವರ ವೈರಿಯಾದ ಸೈತಾನನ ಶಕ್ತಿಯೇ ಇರಬೇಕು ಎಂದು ತಿಳಿಯುತ್ತಾರೆ ಪಾದ್ರಿ, ಪಾದ್ರಿ ತಾನೇ ಒಂದು ಹಸಿರು ಕಡ್ಡಿಯನ್ನು ತಂದು ಪರೀಕ್ಷಿಸಿದಾಗ ನೀರು

---

೧ . ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೨೮೩.

೨. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೨೮೩.

ಬರುವ ಜಾಗದಲ್ಲಿ ಹಸಿರು ಕಡ್ಡಿ ಬಾಗುತ್ತದೆ ಆಗ ಪಾದ್ರಿಗೆ ಮತ್ತೆ ವಿಸ್ಮಯ "ಪಾದ್ರಿಗೆ ವಿಸ್ಮಯ, ದಿಗಿಲು, ಗೊಂದಲ ಉಂಟಾಗಿ ಪಾದ್ರಿ ಬೆರಗಾಗುತ್ತಾನೆ".[೧] ಇಲ್ಲಿಯೂ ಕೂಡ ಮೌಢ್ಯತೆಯ ತಾಣದಲ್ಲಿ ವೈಚಾರಿಕತೆಯನ್ನು ಕಾಣುತ್ತೇನೆ.

ದೇವಯ್ಯಗೌಡರ ಪ್ರಣಯ ವ್ಯವಹಾರ ದೇಹ ಸಂಬಂಧ ಪಾದ್ರಿಯ ಮಗಳೊಡನೆ ಮುಂದುವರಿಯುತ್ತದೆ. ಆದರೆ ಕ್ರೈಸ್ತನಾಗಿದ್ದ ಉಪದೇಶಿ "ಜೀವರತ್ನಯ್ಯ ತನ್ನ ಮಗಳ ಕನ್ಯಾತ್ವಹರಣವನ್ನು ಲಘುವಾಗಿ ಭಾವಿಸಲು ಸಿದ್ಧನಿರಲಿಲ್ಲ, ಜೊತೆಗೆ ಆ ಘಟನೆ ಒಬ್ಬ ಮನೆತನಸ್ಥ ಯುವಕನನ್ನು ಕ್ರೈಸ್ತಮತಕ್ಕೆ ಸೆಳೆಯುವ ಅವಕಾಶ ಒದಗಿಸಲು ಅದನ್ನು ಬಿಟ್ಟುಕೊಡುತ್ತಾನೆಯೇ, ವೈಯಕ್ತಿಕವಾಗಿ ತನಗೂ ಮತ್ತು ತನ್ನ ಮಗಳಿಗೂ ಲಾಭಕರವಾಗಿರುವಾಗ ಗಾಳಕ್ಕೆ ಸಿಕ್ಕಿದ ಮೀನನ್ನು ದಡಕ್ಕೆಳೆಯದೆ ಬಿಡುವಷ್ಟು ಎಗ್ಗನಾಗಿರಲಿಲ್ಲ ಪಾದ್ರಿ"[೨] ಜಾತಿಗೆ ಸೇರಿದರೆ ಮಾತ್ರ ಆ ಸಮಸ್ಯೆ ಹೆಚ್ಚು ತೊಂದರೆಯುಂಟು ಮಾಡದೆ ಸುಸೂತ್ರವಾಗಿ ಪರಿಹಾರವಾಗುತ್ತದೆ ಎಂದು ದೇವಯ್ಯರನ್ನು ಬಲತ್ಕಾರ ಮಾಡಿ ನುಣ್ಣನೆಯ ಮಾತಿನಿಂದ ಒಳಗೆ ಬೆದರಿಕೆಯನ್ನು ಹಾಕುತ್ತಾನೆ.

ಅಪಾಯ ಭೂಯಿಷ್ಠವಾದ ಕೆಂಜಿಗೆಯ ಹಿಂಡಲಿನೊಳಗೆ ನುಗ್ಗಿ ಸಿಕ್ಕಿಬಿದ್ದಿದ್ದೇನೆ ಎಂಬ ಅರಿವು ದೇವಯ್ಯನಿಗೆ ಗೊತ್ತಾಗುತ್ತದೆ. ದೇವಯ್ಯ ತಪ್ಪಿಸಿಕೊಳ್ಳಲು ತಾನು ಇಂದಲ್ಲ ನಾಳೆ ಕ್ರೈಸ್ತ ಜಾತಿಗೆ ಸೇರುತ್ತೇನೆ ಎಂದು ಹೇಳಿ ಅದಕ್ಕೆ ನಂಬಿಕೆಯ ಮುಂಗಡವಾಗಿ ಬಚ್ಚನನ್ನು ಮೊದಲು ಕ್ರೈಸ್ತನನ್ನಾಗಿ ಮಾಡುತ್ತಾನೆ. ಈ ವಿಷಯವನ್ನು ಬಚ್ಚ ಮುಕುಂದಯ್ಯನಿಗೆ ಹೇಳುವುದನ್ನು ಕಾಣುತ್ತೇವೆ. "ದೇವಯ್ಯ ನನ್ನ ಹೆಂಡತಿ ಕ್ರೈಸ್ತಳಾಗಲು ಎಂದಿಗೂ ಒಪ್ಪುವುದಿಲ್ಲ ಆದ್ದರಿಂದ ನಾನು ಹೇಗೆ ಕ್ರೈಸ್ತನಾಗಲಿ"[೩] ಎಂದಾಗ ಪಾದ್ರಿಯು ಕ್ರೈಸ್ತಮತ ಇಬ್ಬರು ಹೆಂಡಿರನ್ನು ಆಗಲು ಎಂದಿಗೂ ಸಮ್ಮತಿಸುವುದಿಲ್ಲ, ಮೊದಲ ಹೆಂಡತಿಗೆ ಕಾನೂನು ಬದ್ಧವಾಗಿ ಡೈವೋರ್ಸ್ ಕೊಡಬಹುದು ಎಂದು ಸೂಚಿಸುತ್ತಾನೆ.

ದೇವಯ್ಯ ಕಾಲವಂಚನೆ ಮಾಡಿ ತಪ್ಪಿಸಿಕೊಳ್ಳಬಹುದೆಂದು ಆಲೋಚಿಸಿ ಮೈಸೂರು ಸಂಸ್ಥಾನದಲ್ಲಿ ಆಗ ಇದ್ದ ಕಾನೂನನ್ನು ಪಾದ್ರಿಗೆ ತಿಳಿಸುತ್ತಾನೆ. ಬ್ರಿಟಿಷರ ಆಳ್ವಿಕೆಯ ಪ್ರಾಂತಗಳಲ್ಲಿ ಹಿಂದೂ ಅವಿಭಕ್ತ ಕುಟುಂಬದ ಒಬ್ಬನು ಅನ್ಯಮತಾವಲಂಬಿಯಾದರೆ ಅವನಿಗೆ ತನ್ನ ಪಿತ್ರಾರ್ಜಿತ ಆಸ್ತಿಯ ಹಕ್ಕು ದಕ್ಕುತ್ತಿದ್ದರೂ ಮೈಸೂರು ಸಂಸ್ಥಾನದಲ್ಲಿ ಅನ್ಯಮತಾವಲಂಬಿಯಾದವನು ಆ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಅದಕ್ಕೆ ಪಾದ್ರಿಯ ಸಮಾಧಾನ ಹೀಗಿತ್ತು. ಬ್ರಿಟಿಷ್

---

೧. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೩೦೪.
೨. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೪೨.
೩. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೪೨.

ಚಕ್ರವರ್ತಿನಿಯೂ ಪ್ರೊಟೆಸ್ಟೆಂಟ್ ಕ್ರೈಸ್ತಮತದವಳೆ, ಆದ್ದರಿಂದ ಇಂಡಿಯಾದಲ್ಲಿ ಬ್ರಿಟಿಷ್ ಸರ್ಕಾರವು ಪ್ರೊಟೆಸ್ಟೆಂಟ್ ಮಿಷನರಿಗಳಿಗೆ ನೇಟಿವ್ ಜನರನ್ನು ಮತಾಂತರಗೊಳಿಸುವುದಕ್ಕೆ ಸರ್ವಾಧಿಕಾರವನ್ನು ಸರ್ವಸೌಲಭ್ಯಗಳನ್ನು ಕೊಡುತ್ತಾ ಇದೆ. ಮೈಸೂರು ಸಂಸ್ಥಾನವು ಅದರ ರಾಜನು ಸಂಪೂರ್ಣವಾಗಿ ಬ್ರಿಟಿಷ್‌ರ ಅಡಿಯಾಳು ಬ್ರಿಟಿಷ್‌ರ ಪ್ರತಿನಿಧಿ ರೆಸಿಡೆಂಟ್ ಸಾಹೇಬರು ಹೇಳಿದ ಹಾಗೆ ಅವನು ಕೇಳಬೇಕಾಗುತ್ತದೆ ಇಲ್ಲದಿದ್ದರೆ ರಾಜ್ಯವನ್ನೆ ಕಳೆದುಕೊಳ್ಳುತ್ತಾನೆ. "ನಮ್ಮ ದೊಡ್ಡ ಪಾದ್ರಿಗಳು ಲೇಕ್‌ಹಿಲ್ ದೊರೆಗಳು ರೆಸಿಡೆಂಟರ ಕಿವಿಯಲ್ಲಿ ಒಂದು ಪಿಸುಮಾತು ಉಸಿರಿದ್ದರೆ ಸಾಕು ನಿಮ್ಮ ಪಿತ್ರಾರ್ಜಿತ ಆಸ್ತಿಗೆ ನಿಮ್ಮ ಅರ್ಧಾಂಗಿ ಆಗುವ ನನ್ನ ಮಗಳು ಹಕ್ಕುದಾರಳಾಗಿ ಬಿಡುತ್ತಾಳೆ"[೧] ಆದ್ದರಿಂದ ದೇವಯ್ಯಗೌಡರ ಮತಾಂತರವನ್ನು ಸಾಕ್ಷಾತ್ ದೊಡ್ಡಪಾದ್ರಿಗಳಾದ ಲೇಕ್‌ಹಿಲ್ ದೊರೆಗಳೇ ಕ್ರಿಸ್‌ಮಸ್‌ನಲ್ಲಿ ಮೇಗರವಳ್ಳಿಯ ಮಿಷನ್ ಸ್ಕೂಲಿನ ಪ್ರಾರಂಭೋತ್ಸವ ನಡೆಸಲು ಬಂದಾಗ ತಾವೆ ಖುದ್ದಾಗಿ ನಡೆಸಿಕೊಡುತ್ತಾರೆ ಎಂದು ನಿಶ್ಚಯವಾಗುತ್ತದೆ.

ಇದನ್ನು ತಪ್ಪಿಸಲು ಮುಕುಂದಯ್ಯ ಮತ್ತು ದೇವಯ್ಯ ಇದಕ್ಕೆ ಕಾರಣವನ್ನು ಹುಡುಕುತ್ತಾರೆ. ಮುಕುಂದಯ್ಯ ಮಿಶನ್ ಸ್ಕೂಲಿನ ಪ್ರಾರಂಭದ ದಿನದಂದು ಕೋವಿಯನ್ನು ಹೆಗಲಿಗೆ ಏರಿಸಿಕೊಂಡು ಮನೆಯಿಂದ ಹೊರಡುತ್ತಾನೆ. ಇದರ ಅಂತರಾಳವನ್ನು ಅರಿತ ಭಾವಿ ಪತ್ನಿಯಾದ ಚಿನ್ನಮ್ಮ ಮನೆಯಿಂದ ಓಡಿ ಬಂದು ಯಾರನ್ನು ಕೊಲೆ ಮಾಡಬಾರದೆಂದು ಮುಕುಂದಯ್ಯನ ಕಾಲು ಹಿಡಿದು ಬೇಡಿಕೊಳ್ಳುತ್ತಾಳೆ. ಅವಳ ದುಃಖಕ್ಕೆ ಕರಗಿದ ಮುಕುಂದಯ್ಯ ನಾನು ಯಾರನ್ನು ಕೊಲ್ಲುವುದಿಲ್ಲವೆಂದು ಕೋವಿಯಲ್ಲಿ ಈಡು ತುಂಬಿಲ್ಲವೆಂದು ಹೇಳಿ ಹೊರಡುವ ಮುಕುಂದಯ್ಯ ಮೇಗರವಳ್ಳಿಯ ಮಿಶನ್ ಸ್ಕೂಲಿನ ಹತ್ತಿರ ಬರುತ್ತಾನೆ, ಮಿಶನ್ ಸ್ಕೂಲಿನ ಪ್ರಾರಂಬೋತ್ಸವವು ಗೌಪ್ಯವಾಗಿರುತ್ತದೆ. ಒಂದು ರೀತಿಯಲ್ಲಿ ಖಾಸಗಿಯಾದುದಾಗಿರುತ್ತದೆ. ಒಂದು ರೀತಿಯಲ್ಲಿ ಬೆಟ್ಟಳ್ಳಿ ದೇವಯ್ಯಗೌಡರ ಮತಾಂತರದ ಸಮಾರಂಭ ಎನ್ನಬಹುದು. ಅಂತಹ ಮತಾಂತರ ಕಾರ್ಯ ಗುಟ್ಟಾಗಿ ನಡೆಯಬೇಕಾಗಿರಲಿಲ್ಲ. ಚರ್ಚಿನಂತಹ ಅಥವಾ ಚರ್ಚು ಇಲ್ಲದೆಡೆಗಳಲ್ಲಿ ಪ್ರಾರ್ಥನಾ ಮಂದಿರದಂತಹ ಪವಿತ್ರ ಸ್ಥಳಗಳಲ್ಲಿ ಪ್ರಚಾರದ ಅವಶ್ಯಕತೆ ಇತ್ತು. ಆದರೆ ದೇವಯ್ಯಗೌಡರ ಸಕಾರಣವಾದ ಅಪೇಕ್ಷೆಯಂತೆ ಅವರ ಮತಾಂತರವನ್ನು ಸದ್ಯಕ್ಕೆ ಅಂತರಂಗವಾಗಿಯೇ ನಡೆಯಿಸಲು ಒಪ್ಪಿಕೊಂಡರು ರೆವರೆಂಡ್ ಲೇಕ್‌ಹಿಲ್ ಪಾದ್ರಿಗಳು, ದೇವಯ್ಯನವರ ಬಂಧುಬಾಂಧವರೆಲ್ಲ ಅವರ ಮತಾಂತರಕ್ಕೆ ವಿರುದ್ಧವಾಗಿದ್ದಾರೆ, ದೇವಯ್ಯನವರು ಮಾತ್ರ ಪವಿತ್ರ ಬೈಬಲ್ಲಿನ ಉಪದೇಶಗಳಿಗೂ ದೇವರ

---

[೧]. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೪೩.

ಕುಮಾರ ಯೇಸುಕ್ರಿಸ್ತನ ವ್ಯಕ್ತಿತ್ವಕ್ಕೂ ಮಾರುಹೋಗಿ, ಬ್ರಾಹ್ಮಣರ ಹಿಂದೂ ಧರ್ಮದ ಮೌಢ್ಯ ವಲಯದಿಂದ ಹೊರಬರಲು ಕಾತರರಾಗಿದ್ದಾರೆ. ಪುರೋಹಿತರು ನಾಮಧಾರಿ ಗೌಡರ ಜನಾಂಗವನ್ನು ಕೀಳುಭಾವನೆಯಿಂದ ಕಾಣುತ್ತಿರುವುದನ್ನು, ಈ ಬ್ರಾಹ್ಮಣರ ಹಿಡಿತದಿಂದ ಹೊರಬಂದು ತಮ್ಮ ಜನಾಂಗದ ಉದ್ಧಾರವನ್ನು ಸಾಧಿಸಲೆಬೇಕೆಂದು ದೇವಯ್ಯನವರ ಅಭಿಲಾಷೆ ಆದರೆ ಸದ್ಯದ ಪರಿಸ್ಥಿತಿಯಲ್ಲಿ ಬಹಿರಂಗವಾಗಿ ಕ್ರೈಸ್ತಮತಕ್ಕೆ ಸೇರುವುದರಿಂದ ತಮ್ಮ ಸಾಧನೆಗೆ ಪ್ರತಿಕೂಲವೇ ಹೆಚ್ಚಾಗಬಹುದಾದ್ದರಿಂದ ಮತಾಂತರವನ್ನು ಗೌಪ್ಯವಾಗಿಡಲು ಬಯಸಿದ್ದಾರೆ ಎಂದು ಜೀವರತ್ನಯ್ಯ ರೆವರೆಂಡ್ ಅವರಿಗೆ ಹೇಳಿದಾಗ ಗುಟ್ಟಾಗಿ ಸರಳವಾಗಿ ಖುದ್ದು ತಾವೇ ಮತಾಂತರಗೊಳಿಸಲು ಒಪ್ಪುತ್ತಾರೆ.

"ಸ್ಕೂಲಿನ ಹತ್ತಿರ ಬಂದ ಮುಕುಂದಯ್ಯ ಕಿಟಕಿಯಲ್ಲಿ ಕೋವಿಯನ್ನು ಗುರಿಯುಟ್ಟು ಹಿಡಿಯುತ್ತಾನೆ ಪ್ರಾರ್ಥನೆಯನ್ನು ಹೇಳುತ್ತಿದ್ದ ಜೀವರತ್ನಯ್ಯ ಯೇಸುಕ್ರಿಸ್ತ, ಬೈಬಲ್ಲು, ಕ್ರೈಸ್ತಮತ, ಧರ್ಮಪ್ರಚಾರ, ಉಪದೇಶಿತ್ವ, ಪಾದ್ರಿತ್ವ ಇತ್ಯಾದಿಯಾದೆಲ್ಲ ತಟಕ್ಕನೆ ಕಳಚಿಬಿದ್ದು ಅವರ ಜೀವ ತನ್ನ ಪ್ರಾಣಿತ್ವದ ಮೂಲೋಪಾಧಿಯೊಂದನ್ನು ಮಾತ್ರ ಅವಲಂಬಿಸಿ ಬದುಕಿದರೆ ಬೆಲ್ಲ ತಿಂದೇನು ಎಂಬಂತೆ ಹೌಹಾರುತ್ತಾನೆ.[೧] ಅವಿತುಕೊಳ್ಳಲು ಮೂಲೆಯ ಕಡೆಗೆ ಓಡುತ್ತಾರೆ. ಇಲ್ಲಿಯ ಜನರು ಗುಂಡಿಕ್ಕಿ ಕೊಲೆಮಾಡಲು ಹವಣಿಸುತ್ತಿದ್ದಾರೆ ಎಂಬುದಂತೂ ಚೆನ್ನಾಗಿ ಅರ್ಥವಾಗಿತ್ತು. ಅಷ್ಟರಲ್ಲಿ ಮುಕುಂದಯ್ಯ "ಪಾದ್ರಿಗಳೆ ನನ್ನ ಭಾವನಿಗೆ ಜಾತಿಕೆಡಿಸುವ ಕೆಲಸ ಮಾಡುತ್ತಿದ್ದೀರಿ ಭಾವಿಗೆ ಹಾರಲಿದ್ದ ನನ್ನ ಅಕ್ಕನನ್ನು ತಡೆದು ನಿಲ್ಲಿಸಿ ಬಂದಿದ್ದೇನೆ ಒಳ್ಳೆಯ ಮಾತಿಗೆ ನನ್ನ ಭಾವನನ್ನು ಕ್ರೈಸ್ತ ಜಾತಿಗೆ ಸೇರಿಸುವುದಿಲ್ಲ ಎಂದು ನಿಮ್ಮ ದೇವರ ಮೇಲೆ ಆಣೆಯಿಟ್ಟು ಅವರನ್ನು ಬಿಟ್ಟು ಕೊಡದಿದ್ದರೆ ಸುಟ್ಟು ಬಿಡುತ್ತೇನೆ".[೨] ಎನ್ನುತ್ತಾನೆ

ಆಗ ಪಾದ್ರಿಗಳು ದೇವಯ್ಯಗೌಡರೆ ನಿಮ್ಮ ಭಾವನಿಗೆ ಬುದ್ಧಿ ಹೇಳಿ ಅವರು ಮಾಡುತ್ತಿರುವುದು ಕ್ರಿಮಿನಲ್ ಕಾರ್ಯ, ಅದಕ್ಕೆ ತಕ್ಕ ಶಿಕ್ಷೆಯಾಗುತ್ತದೆ ಎನ್ನುತ್ತಾರೆ. ನಮಗೆ ಏನಾದರೂ ತೊಂದರೆಯಾದರೆ ಇಡೀ ಬ್ರಿಟೀಷ್ ಚಕ್ರಾಧಿಪತ್ಯವೇ ನಿಮ್ಮ ಮನೆಮಾರುಗಳನ್ನೆಲ್ಲಾ ಧ್ವಂಸಮಾಡಿಬಿಡುತ್ತದೆ ನಮ್ಮನ್ನು ರಕ್ಷಿಸುವ ಭಾರ ನಿಮ್ಮದು ಎಂದು ದೇವಯ್ಯಗೌಡರಿಗೆ ಹೇಳುತ್ತಾರೆ. ದೇವಯ್ಯಗೌಡರು ನಾಟಕದ ಮಾತನಾಡುತ್ತಾ "ಹೆದರಬೇಡಿ ಉಪದೇಶಿಗಳೇ ನಾನು ಹೇಗಾದರು ಮಾಡಿ ನಿಮ್ಮನ್ನು ಉಳಿಸುತ್ತೇನೆ"[೩] ಎನ್ನುತ್ತಾನೆ.

---

೧. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೯೭
೨. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೬೭
೩. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೯೮.

ರೆವರೆಂಡ್ ಲೇಕ್‌ಹಿಲ್ ಪಾದ್ರಿಯು ಇಲ್ಲಿ ಒಳ್ಳೆಯವನಾಗಿ ಕಂಡು ಬರುತ್ತಾರೆ. ಅವರು ದೇವಯ್ಯನನ್ನು ಕುರಿತು "ನಾವೇನೂ ನಿಮ್ಮನ್ನು ಬಲಾತ್ಕಾರವಾಗಿ ಕ್ರೈಸ್ತಮತಕ್ಕೆ ಸೇರಿಸುತ್ತಿಲ್ಲ. ನಿಮ್ಮ ಇಷ್ಟದ ಮೇರೆಗೆ ಹಾಗೆ ಮಾಡುತ್ತಿದ್ದೇವೆ. ನಿಮ್ಮ ಹೆಂಡತಿಯನ್ನು ನೀವು ಒಪ್ಪಿಸದಿದ್ದರೆ ಅದು ನಿಮ್ಮ ತಪ್ಪು, ಅದು ನನಗೆ ಮೊದಲೇ ಗೊತ್ತಾಗಿದ್ದರೆ ನಿಮ್ಮನ್ನು ಮತಾಂತರಗೊಳಿಸಲು ನಾನೇ ಒಪ್ಪುತ್ತಿರಲಿಲ್ಲ, ಕ್ರೈಸ್ತರಿಗೆ ನಿಮ್ಮ ಕುಟುಂಬವನ್ನು ನಾಶಗೊಳಿಸುವ ಉದ್ದೇಶ ಎಂದೂ ಇರುವುದಿಲ್ಲ"[೧] ಎಂದು ಹೇಳುತ್ತಾನೆ. ಪಾದ್ರಿ ಜೀವರತ್ನಯ್ಯ ಮುಕುಂದಯ್ಯನಿಗೆ ಅವನ ಇಷ್ಟದಂತೆ ಆಶ್ವಾಸನೆಯಿತ್ತು ಬಾಗಿಲಿನ ಚಿಲಕ ತೆಗೆಸುತ್ತಾನೆ. ನಂತರ ಜೀವರತ್ನಯ್ಯ ಮುಕುಂದಯ್ಯನ ಮೇಲೆ ಕೆಲವು ಆರೋಪದ ಮಾತುಗಳನ್ನು ಆಡುವ ಸಂದರ್ಭ ಸುದೀರ್ಘವಾಗಿದೆ.

ಎಲ್ಲಾ ಮಾತುಗಳನ್ನು ಆಲಿಸಿದ ಲೇಕ್‌ಹಿಲ್ ರವರು ಜೀವರತ್ನಯ್ಯನವರನ್ನು ಕುರಿತು ಕ್ರಿಸ್ತಸ್ವಾಮಿಯ ಸಂದೇಶವನ್ನು ಕ್ರೈಸ್ತೋಚಿತವಲ್ಲದ ವಿಧಾನಗಳಿಂದ ಪ್ರಚಾರ ಮಾಡಲು ನೀವು ಹೊರಟಿದ್ದೀರಿ ಜನರನ್ನು ಮೈಮೇಲೆ ಹಾಕಿಕೊಂಡು ಆದರೆ ನಾವು ನಮ್ಮ ಸ್ವಾರ್ಥ ಉದ್ದೇಶಗಳನ್ನೆಲ್ಲ ತ್ಯಜಿಸಿ, ಸತ್ತ್ವಮಾರ್ಗದಿಂದಲೇ ಮುಂದುವರಿದು ಜನರ ನಂಬಿಕೆಗೆ ಪಾತ್ರರಾಗಬೇಕು. ಅವರ ವಿಶ್ವಾಸ ಲಭಿಸಿದ ತರುವಾಯ ಅವರು ನಮ್ಮ ಉಪದೇಶಕ್ಕೆ ಕಿವಿಗೊಡುತ್ತಾರೆ, ಔಷದೋಪಚಾರ, ವಿದ್ಯಾಭ್ಯಾಸ ಮೊದಲಾದ ಸಹಾಯಗಳ ಮೂಲಕ ಅವರ ಹೃದಯವನ್ನು ನಾವು ಗೆಲ್ಲಬೇಕು, ಅವರ ಮತೀಯ ಮೌಢ್ಯಗಳಿಂದ ಅವರಿಗಾಗುತ್ತಿರುವ ಅಪಾಯಗಳನ್ನು ಉಪಾಯವಾಗಿ ಅವರಿಗೆ ಮನದಟ್ಟಾಗುವಂತೆ ಮಾಡಬೇಕು ಎನ್ನುವ ಮಾತು ಮನುಷ ಸಹಜವಾದ ಮಾತುಗಳಾಗಿರುವುದನ್ನು ಮತ್ತು ವೈಚಾರಿಕ ಮನೋಭಾವನೆಯನ್ನು ಕಾಣಬಹುದು.

ಲೇಕ್‌ಹಿಲ್ ಪಾದ್ರಿಯು ಮುಕುಂದಯ್ಯನನ್ನು ಕುರಿತು ನೀವು ಎಂಥ ಭಯಂಕರ ಅಪರಾಧ ಕಾರ್ಯದಲ್ಲಿ ತೊಡಗಿದ್ದೀರಿ ಎಂಬುದು ನಿಮಗೆ ಅರ್ಥವಾಗಿದೆಯೇ ಎಂದು ಗಂಭೀರ ಧ್ವನಿಯಲ್ಲಿ ಪ್ರಶ್ನಿಸಿದರು. ಅದಕ್ಕೆ ಪ್ರತಿಯಾಗಿ ಮುಕುಂದಯ್ಯ "ಸ್ವಾಮಿ ನಾನೇನು ಕೊಲೆಮಾಡುವುದಕ್ಕೆ ಬಂದಿರಲಿಲ್ಲ. ನನ್ನ ಅಕ್ಕನಿಗೆ ಅವಳ ಗಂಡನನ್ನು ಉಳಿಸಿಕೊಟ್ಟು ಅವಳ ಪ್ರಾಣವನ್ನು ಮಾಂಗಲ್ಯವನ್ನು ರಕ್ಷಿಸಲು ಬಂದಿದ್ದೆ".[೨] ಎಂದು ಉತ್ತರ ನೀಡುತ್ತಾನೆ ಮುಕುಂದಯ್ಯ. ಕ್ರೈಸ್ತ ಮಿಶನರಿಗಳ ವೈದ್ಯಕೀಯ ಸಹಾಯ, ವಿದ್ಯಾಭ್ಯಾಸ, ಲೋಕೋಪಕಾರ

---

[೧]. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೬೯೮.

[೨]. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೭೦೧.

ಕಾರ್ಯಗಳನ್ನು ಬಾಯಿ ತುಂಬ ಹೊಗಳುವ ಮುಕುಂದಯ್ಯ ಅವರ ಮತಾಂತರ ಚಟುವಟಿಕೆಗಳನ್ನು ಸಮಾಜದ ಅಡಿಪಾಯವನ್ನೇ ಬುಡಮೇಲು ಮಾಡುವ ಕೆಲಸ ಎಂದು ವರ್ಣಿಸಿ ಕೆಲವು ನಿದರ್ಶನಗಳನ್ನು ಕೊಟ್ಟು ಮಿಶನ್ ಸ್ಕೂಲ್ ಚೆನ್ನಾಗಿ ನಡೆಯುವಂತೆ ತಾನು ಸಹಕರಿಸುವುದಾಗಿಯೂ, ಇತರರನ್ನು ಸಹಕರಿಸುವಂತೆ ಮಾಡುವುದಾಗಿಯೂ ಭರವಸೆಯಿಡುತ್ತಾನೆ.

ಲೇಕ್‌ಹಿಲ್ ಮುಂದುವರಿದು "ನಮ್ಮ ಮತಾಂತರ ಚಟುವಟಿಕೆಗಳನ್ನು ನೀವು ಸಾಮಾಜಿಕ ಜೀವನವನ್ನು ಬುಡಮೇಲು ಮಾಡುವ ಕಾರ್ಯ ಎಂದು ವರ್ಣಿಸಿದ್ದೀರಿ, ಯಾರನ್ನೂ ಬಲಾತ್ಕಾರವಾಗಿ ಕ್ರೈಸ್ತರನ್ನಾಗಿ ಮಾಡುವ ಇಚ್ಛೆ ನಮಗಿಲ್ಲ"[೧] ನೀವು ನಮ್ಮ ಜಾತಿಗೆ ಸೇರದಿರಬಹುದು, ಸೇರದಿದ್ದರೆ ಚಿಂತೆಯಿಲ್ಲ ಆದರೆ ನಾನು ಹೇಳುವುದನ್ನು ಕೇಳಿ, ನಿಮ್ಮ ಜಾತಿಯವರು ಎಲ್ಲಿಯವರೆಗೆ ಬ್ರಾಹ್ಮಣರ ಪಾದ ತೊಳೆದು ಅದನ್ನು ತೀರ್ಥವೆಂದು ಕುಡಿಯುವುದನ್ನೇ ತಮ್ಮ ಧರ್ಮಜೀವನ ಸರ್ವಸ್ವ ಎಂದು ಭಾವಿಸುವರೋ ಅಲ್ಲಿಯವರೆಗೆ ನಿಮಗೆ ಹಾಗೂ ನಾಮಾಧಾರಿ ಗೌಡರಿಗೆ ಮತ್ತು ಇತರ ಬ್ರಾಹ್ಮಣೇತರ ವರ್ಗದವರಿಗೆ ಉದ್ಧಾರವಿಲ್ಲ ನಿಮ್ಮ ಮೂಢಾಚಾರಗಳು ಬ್ರಾಹ್ಮಣರ ಜೀವನೋಪಾಯಕ್ಕೆ, ಸಂಪಾದನೆಗೆ ಬಂಡವಾಳ ಸ್ವರೂಪವಾಗಿದೆ, ನಿಮ್ಮನ್ನು ಅವರು ನಾಯಿಗಳನ್ನು ಕಂಡ ಹಾಗೆ ಕಾಣುತ್ತಾರೆ, ಮುಟ್ಟುವುದಿರಲಿ ಹತ್ತಿರ ಬಂದರೂ ಅವರಿಗೆ ಮೈಲಿಗೆ, ಅವರೇ ಅವರ ಅನುಕೂಲಕ್ಕಾಗಿ ಬರೆದುಕೊಂಡಿರುವ ಪುರಾಣ ಕಥೆಗಳನ್ನು ನಿಜವಾಗಿ ನಡೆದವೆಂಬಂತೆ ನಿಮಗೆ ಹೇಳೀ ನಿಮ್ಮನ್ನು ಮರಳು ಮಾಡಿದ್ದಾರೆ, ಶತ–ಶತಮಾನಗಳಿಂದ ನಿಮ್ಮನ್ನು ಈ ಮೂಢಸ್ಥಿತಿಯಲ್ಲಿ ಇಟ್ಟು ನಿಮ್ಮಿಂದ ಸೇವೆ ಸಲ್ಲಿಸಿಕೊಂಡು ಸುಖಜೀವನ ನಡೆಸುತ್ತಿದ್ದಾರೆ. ಕ್ರೈಸ್ತ ಧರ್ಮದಲ್ಲಿ ಜಾತಿಬೇಧವಿಲ್ಲ, ಎಲ್ಲರೂ ದೇವರಿಗೆ ಸಮಾನರು, ನೀವು ಕ್ರೈಸ್ತಮತಕ್ಕೆ ಸೇರಿ ಬಿಡಿ ಅದು ಮುಖ್ಯವಲ್ಲ, ಆದರೆ ಕ್ರೈಸ್ತಧರ್ಮದ ಉದಾರ ತತ್ವಗಳನ್ನು ಸೇವಾ ಮನೋಧರ್ಮವನ್ನು ಸರ್ವಸಮಾನತಾ ಆದರ್ಶಗಳನ್ನು ನಿಮ್ಮ ಮಾರ್ಗದರ್ಶನ ಜ್ಯೋತಿಯನ್ನಾಗಿ ಮಾಡಿಕೊಂಡು ಬ್ರಾಹ್ಮಣ್ಯರ ದೃಷ್ಟಿಯಿಂದ ಬಿಡಿಸಿಕೊಳ್ಳುವುದು ಮಾತ್ರ ನಿಮ್ಮ ಜನಾಂಗದ ಪ್ರಗತಿಗೆ ಅತ್ಯಂತ ಅವಶ್ಯಕವಾಗಿದೆ, ಈ ಸಾಯಂಕಾಲ ನಡೆಯಲಿರುವ ಈ ಸ್ಕೂಲಿನ ಪ್ರಾರಂಭೋತ್ಸವ ಆ ದಿಕ್ಕಿನಲ್ಲಿ ನಮ್ಮ ಮಿಶನ್ ಇಟ್ಟಿರುವ ಮೊದಲ ಹೆಜ್ಜೆ, ನಿಮ್ಮ ಜನರೆಲ್ಲ ಅದರಲ್ಲಿಯೂ ದೇವಯ್ಯಗೌಡರಂತಹ ಯುವಕರು ಮುಂದೆ ಬಂದು ನಮ್ಮೊಡನೆ ಸಹಕರಿಸುತ್ತೀರೆಂದು ನಾನು ದೃಢವಾಗಿ ನಮ್ಮೊಡನೆ ಸಹಕರಿಸುತ್ತೀರೆಂದು ನಂಬಿದ್ದೇನೆ.

---

[೧]. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೭೦೨.

ಸರಕಾರದಿಂದಾಗಲಿ, ವಿದ್ಯಾಭ್ಯಾಸದ ಇಲಾಖೆಯಿಂದಾಗಲಿ ನಮ್ಮ ಕಡೆಯಿಂದಾಗಲಿ ನಿಮಗೆ ಬೇಕಾಗುವ ಎಲ್ಲಾ ಸಹಾಯ ಮಾಡಲು ನಾನು ಪವಿತ್ರಾತ್ಮ ಯೇಸುಕ್ರಿಸ್ತನ ಹೆಸರಿನಲ್ಲಿ ಕಂಕಣ ಬದ್ಧನಾಗಿದ್ದೇನೆ. ಎಂದು ಮಾತು ಮುಗಿಸಿ ಎಲ್ಲಾ ಒಂದು ಅಂಶಗಳಿಗೆ ಒಂದು ರೀತಿಯಲ್ಲಿ ಉತ್ತರ ನೀಡಿ ರೆವರೆಂಡರು ಹೊರನಡೆಯುತ್ತಾರೆ.

ಈ ಮೇಲಿನ ಅಂಶದಿಂದಲೂ ವೈಜ್ಞಾನಿಕತೆಯ, ಮೌಢ್ಯತೆಯ ಅಂಶವನ್ನು ತಿಳಿಯಬಹುದಾಗಿದೆ. ಕ್ರೈಸ್ತರು ಮತಾಂತರ ಮಾಡಿದರು ಕೂಡ ಯಾವುದೇ ಜಾತಿಯತೆಯನ್ನು ಮಾಡದೆ ಎಲ್ಲರೂ ಸಮಾನರು ಎಂಬ ಭಾವನೆಯನ್ನು ಕಾಣುತ್ತೇವೆ ಎಂಬ ಅಂಶವನ್ನು ತಿಳಿಯುತ್ತೇವೆ. ಕ್ರೈಸ್ತ ಸಮುದಾಯದಲ್ಲಿ ಯಾವುದೇ ಮೌಢ್ಯತೆಯನ್ನು ಕಠಿಣವಾಗಿ ಪಾಲಿಸದೆ ಸಂತೋಷದಿಂದ ಜೀವನವನ್ನು ನಿರ್ವಹಿಸಲು ಅವಕಾಶವಿದೆ ಎಂಬ ಅಂಶವ್ಯಕ್ತವಾಗಿದೆ. ಜಾತಿಯಲ್ಲಿ ಯಾವುದೇ ಮೇಲು-ಕೀಳು ಭಾವನೆಯನ್ನು ಮಾಡದೆ ಇರುವ ಅಂಶವನ್ನು ಕಾದಂಬರಿಯಲ್ಲಿ ವ್ಯಕ್ತವಾಗಿರುವ ಅಂಶದಿಂದ ತಿಳಿಯಬಹುದಾಗಿದೆ. ಜೀವರತ್ನಯ್ಯನಲ್ಲಿ ಸ್ವಲ್ಪ ಸ್ವಾರ್ಥವನ್ನು ಕಂಡರೆ ರೆವರೆಂಡರಲ್ಲಿ ಯಾವುದೇ ಸ್ವಾರ್ಥದ ಮನೋಭಾವನೆಯನ್ನು ಕಾಣುವುದಿಲ್ಲ. ಮತಾಂತರದ ಬಗ್ಗೆ ಎದ್ದಿದ್ದ ಗೊಂದಲ ಲೇಕ್‌ಹಿಲ್ ಅವರ ಸಾನಿಧ್ಯದಲ್ಲಿ ಪರಿಹಾರವಾಗಿ ಸುಖಾಂತ್ಯಗೊಳ್ಳುತ್ತದೆ.

ಪಾದ್ರಿಯಾದ ಜೀವರತ್ನಯ್ಯ ಮಲೆನಾಡಿನ ಮುಗ್ಧ ಜನರಿಗೆ ಹಲವಾರು ಆಮಿಷಗಳನ್ನು ತೋರಿಸಿ ಜನರನ್ನು ಮತಾಂತರ ಮಾಡಿ ಕ್ರಿಶ್ಚಿಯನ್ ಧರ್ಮದಲ್ಲಿ ಹೆಸರನ್ನು ಗಳಿಸಬೇಕು ಎಂಬ ಮನೋಭಾವನೆಯನ್ನು ಹೊಂದಿದ ಪಾದ್ರಿಯು ತಾನೇ ಹಾಕಿದ ಮುಳ್ಳಿನ ಬೇಲಿಯಲ್ಲಿ ಸಿಕ್ಕಿ ಹಾಕಿಕೊಳ್ಳುವುದನ್ನು ಈ ಕಾದಂಬರಿಯ ಮೂಲಕ ನಾವು ತಿಳಿಯಬಹುದಾಗಿದೆ.

ಮನುಷ್ಯ ಮನುಷ್ಯನ ನಡುವೆ ಹೊಂದಿರುವ ಮೌಢ್ಯತೆಯನ್ನು ಅಧ್ಯಯನ ಮಾಡಿ ಮೌಢ್ಯತೆ ಮತ್ತು ವೈಚಾರಿಕತೆಯ ಬಗ್ಗೆ ಅರಿಯುವಲ್ಲಿ ಮಲೆಗಳಲ್ಲಿ ಮದುಮಗಳು ಕಾದಂಬರಿ ಸಾಕ್ಷಿಯಾಗಿದೆ.

ಅಧ್ಯಾಯ–೫

ಪ್ರಣಯ ಜೀವನ ಮತ್ತು ವೈಚಾರಿಕತೆ

ಉತ್ತಮ ಆಹಾರ, ಒಳ್ಳೆಯ ಉಡುಪು, ಲೈಂಗಿಕ ತೃಪ್ತಿ ಇವಿಷ್ಟೇ ಪ್ರಸ್ತುತ ಆಧುನಿಕ ನಾಗರೀಕ ಸಮಾಜದಲ್ಲಿನ ಜನರ ಬದುಕಿನ ಸಾರಸರ್ವಸ್ವ. ಇಂತಹ ಪರಿಸ್ಥಿತಿಯಲ್ಲಿ ಕುಂವೆಪು ಅವರ 'ಮಲೆಗಳಲ್ಲಿ ಮದುಮಗಳು'ವಿನಂತಹ ಕೃತಿಯ ಅಧ್ಯಯನ ಹೆಚ್ಚು ಅರ್ಥಪೂರ್ಣವಾದದ್ದು. ಯಾವ ವ್ಯಕ್ತಿಗೂ ಪೂರ್ಣವಾಗಿ ತನ್ನದೇ ಆದ ಪ್ರತ್ಯೇಕ ಹಾಗೂ ವಿಶಿಷ್ಟ ವ್ಯಕ್ತಿತ್ವವೇ ಇಲ್ಲವಾಗುತ್ತಿರುವ ಸಂದರ್ಭವಿದು. ತನ್ನ ಸಹಜೀವಿಯೊಂದಿಗೆ ಇವನು ಹೊಂದಿರುವ ಸಂಪರ್ಕ ಸೊನ್ನೆ ಅಥವಾ ಅತ್ಯಂತ ಮೇಲು ಮೇಲಿನದು. ವ್ಯಕ್ತಿಯು ಪ್ರೀತಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುವಂತೆ ಮಾಡುವ ಆಂತರಿಕ ಹಿಂಜರಿಕೆಗಳೇ ಈ ರೀತಿಯ ಸಮಸ್ಯೆಗಳಿಗೆ ಕಾರಣವಾಗುತ್ತಾ ಬಂದಿವೆ.

ಪ್ರೀತಿಯೆಂದರೆ ಪರಸ್ಪರ ಲೈಂಗಿಕ ತೃಪ್ತಿ ಕೊಡುವುದಷ್ಟೇ ಅಲ್ಲ. ಅದೊಂದು ಬಗೆಯ ಉದಾತ್ತ ಮಾನವೀಯ ಮೌಲ್ಯ. ಪ್ರೀತಿಯು ಲೈಂಗಿಕ ಆಕರ್ಷಣೆಯ ಫಲಿತಾಂಶ ಮಾತ್ರವಲ್ಲ ಎರಡು ಮನಸ್ಸುಗಳ ಪರಸ್ಪರ ಸಹಯೋಗ. ಇದನ್ನು ಗುತ್ತಿ–ತಿಮ್ಮಿ–ಐತ ಪೀಂಚಲು ಹಾಗೂ ಚಿನ್ನಮ್ಮ ಮುಕುಂದಯ್ಯರ ಪಾತ್ರಗಳಲ್ಲಿ ಕಾಣಬಹುದು. ಮೇಲಿನ ಪ್ರಶ್ನೆಯ ಉದ್ಭವಕ್ಕೆ ಮಹತ್ತರವಾದ ಕಾರಣ ಸಹ ಇದೆ. ತಮ್ಮ ಬದುಕನ್ನೆಲ್ಲ ಲಂಗು ಲಗಾಮಿಲ್ಲದ ಲೈಂಗಿಕ ತೃಪ್ತಿಗಾಗಿ ಸೂರೆ ಮಾಡಿದ ಗಂಡಸರು ಹಾಗೂ ಹೆಂಗಸರನೇಕರನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಅವರು ಸಂತೋಷವನ್ನು ಪಡೆದಿದ್ದರೆನ್ನುವುದಕ್ಕೆ ಅವರಿಂದ ಯಾವುದೇ ಉತ್ತರವಿಲ್ಲ. ಬದಲಾಗಿ ಅವರಲ್ಲಿ ತೀವ್ರವಾದ ಮಾನಸಿಕ ಒಳತೋಟಿಗಳು ಕುಂದು–ಕೊರತೆಗಳು ಕಂಡು ಬಂದಿರುವುದು ಮನೋವೈಜ್ಞಾನಿಕ ವಿಶ್ಲೇಷಣೆಯ ಮೂಲಕ ಸಾಬೀತಾಗಿದೆ. ಅಂದರೆ ಪ್ರವೃತ್ತಿ ಮೂಲ ಲೈಂಗಿಕ ಬಯಕೆ ಜೀವನದ ಸಂಪೂರ್ಣ ತೃಪ್ತಿಯ ಸುಖಕ್ಕೆ ತಳಪಾಯವಲ್ಲ.

ಆಧುನಿಕ ಬಂಡವಾಳಶಾಹಿ ಸಮಾಜದಲ್ಲಿ ಉಳಿತಾಯ ಮಾಡುವುದಕ್ಕಿಂತ ಖರ್ಚು ಮಾಡುವುದೇ ಮುಖ್ಯವಾಗಿದೆ. ಮಾನವರ ಮೂಲ ಮನೋಧರ್ಮದಲ್ಲೂ ಬದಲಾವಣೆಯಾಗಿದೆ. ಆರ್ಥಿಕ ಪ್ರಗತಿ ಸಾಧಿಸುವುದರ ಜೊತೆಗೆ ಉಪಭೋಗವೊಂದೇ ತೃಪ್ತಿ ಕೊಡಬಲ್ಲದೆಂಬ ಭಾವನೆ ಬಂದುಬಿಟ್ಟಿದೆ. ಲೈಂಗಿಕತೆಯ ಕ್ಷೇತ್ರದಲ್ಲಿ ಕೂಡ ಬೇರಾವುದೇ ಉಪಭೋಗ ವಲಯದಲ್ಲಿರುವಂತೆ

ಬಯಕೆಗಳ ಪೂರೈಕೆಯನ್ನು ಕ್ಷಣಕಾಲ ಕೂಡ ಆಲೋಚಿಸದೇ ಮುಂದೂಡದೇ ಮಜಾ ಉಡಾಯಿಸುವುದೇ ಮುಖ್ಯ ಧೋರಣೆಯಾಗಿದೆ.

ಆಧುನಿಕ ಮಾನವ ಮಾರುಕಟ್ಟೆಯಲ್ಲಿ ದೊರೆಯುವ ಒಂದು ವಸ್ತುವಾಗಿ ಪರಿವರ್ತಿತನಾಗಿದ್ದಾನೆ. ಪ್ರಚಲಿತವಾಗಿರುವ ಮಾರುಕಟ್ಟೆಯ ಪರಿಸ್ಥಿತಿಯಲ್ಲಿ ಸಾಧ್ಯವಾದಷ್ಟು ಲಾಭ ಪಡೆಯಲು ತನ್ನ ಎಲ್ಲ ಜೀವ ಶಕ್ತಿಗಳನ್ನು ಮಾರಾಟದ ವಸ್ತುವಾಗಿ ಮಾರುಕಟ್ಟೆಯಲ್ಲಿಟ್ಟು ಮಾರಲು ಸಿದ್ಧನಾಗಿ ನಿಂತಿದ್ದಾನೆ. ತನ್ನೆಲ್ಲ ಯೋಗ್ಯತೆ ಮತ್ತು ಸಾಮರ್ಥ್ಯಗಳ ಏಕೈಕ ಪ್ರಯೋಜನ ಲಾಭ ಸಂಪಾದನೆಯೆಂದು ದೃಢವಾಗಿ ನಂಬಿದ್ದಾನೆ. ಮಾನವನ ಸಂಬಂಧಗಳೆಂದರೆ ಪರಸ್ಪರ ಅಪರಿಚಿತವಾದ ಯಂತ್ರ ಜೀವಿಗಳ ನಡುವಿನ ಸಂಬಂಧವೇ ಆಗಿಬಿಟ್ಟಿದೆ. ವಿಚಾರ ಮಾಡುವ ರೀತಿಯಲ್ಲಿ ಭಾವನೆಗಳನ್ನು ಹೊಂದುವ, ಅನುಭವಿಸುವ ವಿಧಾನದಲ್ಲಿ ತನ್ನ ಮುಂದಿರುವ ಮೌಲ್ಯಗಳಿಗೆ ತದ್ವಿರುದ್ಧವಾಗಿ ವ್ಯಕ್ತಿ ನೆಲೆಗಳಿವೆ. ಇದಕ್ಕೆಲ್ಲ ಮಾನವರಲ್ಲಿರುವ ಆಳವಾದ ಅಭದ್ರತೆ ಆತಂಕ ಮತ್ತು ಅಪರಾಧ ಪ್ರವೃತ್ತಿಗಳೇ ಕಾರಣವಾಗಿವೆ.

ಪರಸ್ಪರ ಲೈಂಗಿಕ ತೃಪ್ತಿಯನ್ನು ಒದಗಿಸುವುದೇ ಎಲ್ಲಾ ಪ್ರೇಮ ಸಂಬಂಧಗಳ ಅದರಲ್ಲಿಯೂ ಸುಖೀ ವಿವಾಹಗಳ ಬುನಾದಿಯೆಂದು ಭಾವಿಸಲಾಗಿತ್ತು. ಗಂಡ–ಹೆಂಡಿರ ನಡುವೆ ಬರುವ ಅಸಮಾಧಾನ ಅತೃಪ್ತಿಗಳಿಗೆ ಅವರು ಸೂಕ್ತವಾದ ಲೈಂಗಿಕ ಹೊಂದಾಣಿಯನ್ನು ಮಾಡಿಕೊಳ್ಳದಿರುವುದೇ ಕಾರಣವೆಂದು ತಿಳಿಯಲಾಗಿತ್ತು. ಈ ಎಲ್ಲಾ ವಿಚಾರಗಳ ಹಿಂದೆ ಪ್ರೀತಿಯು ಲೈಂಗಿಕ ತೃಪ್ತಿಯ ಶಿಶುವೆಂಬ ಪರಿಕಲ್ಪನೆ ಸಹ ಇತ್ತು. ಇಂತಹ ಪರಿಕಲ್ಪನೆ ಪ್ರೀತಿಯು ವ್ಯಕ್ತಿತ್ವದ ವಿಕಾಸಕ್ಕೆ ನೆರವಾಗುವ ಬದಲು ವಿನಾಶಕ್ಕೆ ಕಾರಣವಾಗುವಂತೆ ಮಾಡಿಬಿಡುತ್ತದೆ. ಇಬ್ಬರು ವ್ಯಕ್ತಿಗಳು ತಮ್ಮ ಅಸ್ತಿತ್ವದ ಕೇಂದ್ರಗಳಿಂದ ಪರಸ್ಪರ ವಿಚಾರ ಸಂವಹನ ನಡೆಸಿದಾಗ ಮಾತ್ರ ಪ್ರೀತಿ ಸಾಧ್ಯ. ಈ ಸಂವಹನವನ್ನು 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿನ ಮದುಮಕ್ಕಳ ಜೀವನದಲ್ಲಿ ವಿಭಿನ್ನ ನೆಲೆಗಳಲ್ಲಿ ಕಾಣಬಹುದು. ಪ್ರೀತಿ ಇಲ್ಲದ ಕಡೆ ಲೈಂಗಿಕ ತೃಪ್ತಿ ಸಿಗುವುದಿಲ್ಲ. ಇದಕ್ಕೆ ನಮ್ಮ ಕಣ್ಣು ಮುಂದಿರುವ ವಾಸ್ತವತೆಯೇ ಸಾಕ್ಷಿಯಾಗಿದೆ.

ಇನ್ನೊಂದು ಅತಿ ಸಾಮಾನ್ಯ ತಪ್ಪು ಕಲ್ಪನೆ ಎಂದರೆ ಪ್ರೀತಿಯಲ್ಲಿ ಯಾವುದೇ ರೀತಿಯ ಘರ್ಷಣೆ ಇರಲೇಬಾರದು ಎನ್ನುವುದು. ಜನರು ಪ್ರೀತಿ ಎಂದರೆ ಘರ್ಷಣೆಯ ಅನುಪಸ್ಥಿತಿ ಎಂದು ತಿಳಿಯುತ್ತಾರೆ. ಇದು ತಪ್ಪು, ಕಲ್ಪನೆ. ಗುತ್ತಿ–ತಿಮ್ಮಿಯನ್ನು ಕುರಿತು ಶನಿಮುಂಡೆ ನಿನ್ನ ದೆಸೆಯಿಂದ ನನ್ನ ಹುಲಿಯ ಹಿಂಗಾಯ್ತು ಎನ್ನುವಲ್ಲಿ; ಹಾಗೆಯೇ ಐತ–ಪೀಂಚಲುವಿನ ಶೀಲದ ಬಗ್ಗೆ ಅನುಮಾನಿಸಿದ ಸನ್ನಿವೇಶ ಘರ್ಷಣೆಯ ನಿದರ್ಶನಗಳು. ಅಂದರೆ ಹೊಂದಾಣಿಕೆಯ

ಸಮಸ್ಯೆ ಬಂದಾಗ ಘರ್ಷಣೆ ಸರ್ವೇಸಾಮಾನ್ಯ. ಆತ್ಮೀಯತೆಯಲ್ಲಿ ಇಬ್ಬರು ವ್ಯಕ್ತಿಗಳು ನಿಕಟರಾಗುವ ಸನ್ನಿವೇಶ; ಇಲ್ಲಿ ವೈಯಕ್ತಿಕ ಮಹತ್ವವುಳ್ಳ ಎಲ್ಲಾ ಗುಣಾಂಶಗಳಿಗೂ ಬೆಲೆ ಸಿಗುತ್ತದೆ. ಅಂದರೆ ವ್ಯಕ್ತಿ ತನ್ನೆಲ್ಲ ವಿಶಿಷ್ಟತೆಗಳನ್ನು ಉಳಿಸಿಕೊಡುತ್ತಾನೆ. ಇದು ಸಾಧ್ಯವಾಗಬೇಕಾದರೆ ವ್ಯಕ್ತಿಗಳ ನಡುವೆ ಪರಸ್ಪರರನ್ನು ಅರ್ಥ ಮಾಡಿಕೊಳ್ಳಬಲ್ಲ ಸಹಯೋಗವಿರಬೇಕು. ಈ ಸಹಯೋಗ ಗುತ್ತಿ-ತಿಮ್ಮಿಯರಲ್ಲಿ ಪೂರ್ಣ ಪ್ರಮಾಣವಾಗಿ ಆವರಿಸಿದೆ. ಈ ಮದುಮಕ್ಕಳಿಬ್ಬರ ಜೀವನದಲ್ಲಿ ಸಂಭವಿಸುವ ಕಲ್ಲಯ್ಯ ಗೌಡರ ಆಜ್ಞೆ, ಗುತ್ತಿಗೆ ಪೊಲೀಸರಿಂದ ಉಂಟಾಗುವ ತೊಂದರೆ ಇವರನ್ನು ಮತ್ತಷ್ಟು ನಿಕಟರಾಗುವಂತೆ ಮಾಡುತ್ತದೆ. ನಂಬಿಕೆ ಮತ್ತು ಧೈರ್ಯದ ಆಚರಣೆಯನ್ನು ಗುತ್ತಿ-ತಿಮ್ಮಿಯರ ನಿತ್ಯ ಜೀವನದ ಸಣ್ಣ ಸಣ್ಣ ಕಾರ್ಯಗಳಲ್ಲೂ ನಾವು ಕಾಣಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಪ್ರೀತಿಯು ನಂಬಿಕೆಯಿಂದ ಆವರಿಸಲ್ಪಟ್ಟ ಒಂದು ವಿಶಿಷ್ಟ ಕ್ರಿಯೆಯಾಗಿ ಎರಡೂ ಮದುಮಕ್ಕಳ ಸಂಬಂಧದಲ್ಲಿರುವುದನ್ನು ಕಾಣಬಹುದು.

ಪಾಶ್ಚಾತ್ಯ ಹಾಗೂ ಭಾರತೀಯ ಸಂಸ್ಕೃತಿಯಲ್ಲಿನ ಸ್ತ್ರೀ-ಪುರುಷ ಸಂಬಂಧಗಳಲ್ಲಿ ಆವಿಷ್ಕಾರಗೊಳ್ಳುವ ಪ್ರಣಯವು ಪ್ರತ್ಯೇಕ ಹಾಗೂ ವಿಶಿಷ್ಟವೂ ಆದ ವಿನ್ಯಾಸ ಹೊಂದಿರುವುದು ತಿಳಿದಿರುವ ವಿಷಯವೇ. ಕುಟುಂಬ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ತಾಯಿಯ ಪ್ರೀತಿ, ಸಹೋದರ ಪ್ರೀತಿ, ಲೈಂಗಿಕ ಪ್ರೀತಿ ಎಲ್ಲವೂ ವ್ಯಾಪಕಾರ್ಥದಲ್ಲಿ ಪ್ರಣಯ ವಸ್ತುವಿಗೆ ಸಂಬಂಧಿತವಾಗಿವೆ. ನಿಜವಾದ ಪ್ರೀತಿಯ ಬದಲಾಗಿ ಹುಸಿ ಪ್ರೀತಿಯ ಬೇರೆ ಬೇರೆ ಮಾದರಿಗಳು ಈ ಕುಟುಂಬದ ವ್ಯಾಪ್ತಿಯಲ್ಲಿವೆ. ಈ ಹುಸಿ ಪ್ರೀತಿಗೆ ಎರಡು ಮುಖ್ಯ ನಿದರ್ಶನಗಳನ್ನು ಕೊಡಬಹುದು. ಒಂದು ಚೀಂಕ್ರ ಸೆರೆಗಾರನ ಅಕ್ಕಣಿ ಮೇಲಿನ ಕಾಮುಕ ಮೋಹ, ಎರಡನೆಯದು ವೆಂಕಟಣ್ಣ ನಾಗಕ್ಕನನ್ನ ಅಪ್ರಜ್ಞಾವಸ್ಥೆಯಲ್ಲಿ ಕೂಡುವ ಸನ್ನಿವೇಶ ಇಲ್ಲಿ ಮಾನವ ಸಂಬಂಧಗಳ ವಿಘಟನೆ ಮತ್ತು ಬೆಸೆಯುವಿಕೆ ಎರಡೂ ನಡೆಯುತ್ತವೆ. ಪ್ರೀತಿ ಪ್ರಣಯ ಇವುಗಳ ನಡುವಿನ ಸಂಬಂಧಗಳು ಸಡಿಲಗೊಳ್ಳುತ್ತಿರುವ ಸಂದರ್ಭದಲ್ಲಿ ಈ ಕುರಿತ ಅಧ್ಯಯನ ಮಾನವನ ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಅಗತ್ಯವಾಗಿದೆ. ಉದಾತ್ತ ಹಾಗೂ ಕೃತ್ರಿಮ ಪ್ರಣಯ ಸಂಬಂಧಗಳ ತೌಲನಿಕ ವಿಶ್ಲೇಷಣೆ ಈ ಅಧ್ಯಾಯದ ಪ್ರಸ್ತುತ ಉದ್ದೇಶವಾಗಿದೆ. ಕನ್ನಡದ ಮಹತ್ವದ ಕಾದಂಬರಿಕಾರರಾದ ಕುವೆಂಪು ಅವರು ಈ ಸಂಬಂಧವಾಗಿ ಕಟ್ಟಿಕೊಡುವ ದರ್ಶನವನ್ನು ಗ್ರಹಿಸಲು ನನ್ನ ಬರವಣಿಗೆ ಯತ್ನಿಸಿದೆ.

ಸೋದರ ಪ್ರೀತಿ, ತಾಯಿ ಪ್ರೀತಿಗಿಂತ ಪೂರ್ಣ ಭಿನ್ನವಾದುದು, ಕಾಮ ಪ್ರೀತಿ; ಒಬ್ಬ ವ್ಯಕ್ತಿಯೊಡನೆ ಮಾತ್ರ ಒಂದಾಗಲು ಪೂರ್ಣವಾಗಿ ಬೆರೆತು ಹೋಗಲು ಇರುವ ಅಪೇಕ್ಷೆಯದು.

ಸ್ವಭಾವ ಸಹಜವಾಗಿ ಅದು ಉಳಿದವರನ್ನು ಹೊರಗಿಡುವ, ಸಾರ್ವತ್ರಿಕವಲ್ಲದ ಪ್ರೀತಿ, ಹಾಗೆಯೇ ಪ್ರಾಯಶಃ ಎಲ್ಲಾ ಬಗೆಯ ಪ್ರೀತಿಗಳಲ್ಲೂ ಹೆಚ್ಚು ಸಂಕೀರ್ಣವಾದದ್ದು ಕೂಡ. ಪ್ರೀತಿಯೆಂಬುದು ಅನೈಚ್ಛಿಕವಾಗಿ ಉಕ್ಕುವ ಭಾವನಾತ್ಮಕ ಪ್ರತಿಕ್ರಿಯೆಯ ಅದಮ್ಯ ಅನಿಸಿಯೊಂದಕ್ಕೆ ಸಿಲುಕಿದುದರ ಪರಿಣಾಮ ಎಂದು ತಿಳಿಯಲಾಗಿದೆ. ಅದರಲ್ಲಿ ಕಾಮ ಪ್ರೀತಿ ಎಂಬುದು ವೈಯಕ್ತಿಕ ಆಕರ್ಷಣೆ, ಇಬ್ಬರು ನಿಗಧಿತ ವ್ಯಕ್ತಿಗಳ ನಡುವಿನ ಅತ್ಯಂತ ವಿಶಿಷ್ಟ ಸಂಬಂಧ.

ಮಾನವರ ಲೈಂಗಿಕ ಕಾಮನೆಗಳು ಒಂದಾಗಲು ತುಡಿಯುತ್ತವೆ. ಇದು ಕೇವಲ ದೇಹದ ಹಸಿವಿನ ತಾಪದಾಯಕ ಒತ್ತಡದಿಂದ ಬಿಡುಗಡೆ ಮಾತ್ರವಲ್ಲ. ಏಕಾಂಗಿಕತನದ ಉದ್ವಿಗ್ನತೆಯಿಂದ ಲೈಂಗಿಕ ಕಾಮನೆಗಳು ಉದ್ದೀಪನೆಗೊಳ್ಳಬಹುದು. ಈ ಏಕಾಂಗಿತನದ ಉದ್ವಿಗ್ನತೆಯ ಕಾರಣದಿಂದಲೇ ಚಿನ್ನಮ್ಮ ಮುಕುಂದಯ್ಯ ವಿವಾಹಪೂರ್ವದಲ್ಲಿ ಲೈಂಗಿಕ ಸಂಬಂಧ ಹೊಂದುವುದು. ಲೈಂಗಿಕ ಕಾಮನೆಯೇ ಪ್ರೀತಿಯೆಂಬ ಅನಿಸಿಕೆ ಎಷ್ಟೋ ಜನರಲ್ಲಿ ಬಲವಾಗಿರುವುದರಿಂದ ಪರಸ್ಪರರು ದೈಹಿಕವಾಗಿ ಬೇಕೆನಿಸಿದಾಗ ಅದು ತಮ್ಮಿಬ್ಬರ ನಡುವಣ ಪ್ರೀತಿಯೆಂದು ತಿಳಿಯುವ ತಪ್ಪು ಕಲ್ಪನೆಯನ್ನು ಅವರು ಸುಲಭವಾಗಿ ಮುಟ್ಟಿ ಬಿಡಬಹುದು. ಆದರೆ ಈ ತೆರನಾದ ಲೈಂಗಿಕ ಆಕರ್ಷಣೆ. ಆ ಕ್ಷಣದ ಮಟ್ಟಿಗೆ ಒಂದಾಗಿ ಬಿಟ್ಟೆವೆಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಆದರೆ ಪ್ರೀತಿಯು ಜೊತೆಗೂಡದಿದ್ದರೆ ಈ ಸಂಯೋಗ ಅಪರಿಚಿತರನ್ನು ಮೊದಲಿನಷ್ಟೇ ದೂರ ಇರಿಸುತ್ತದೆ. ಒತ್ತಡಕ್ಕೆ ಮಣಿದು ತಪ್ಪುಮಾಡಿದ ಅಕ್ಕಣಿಯ ವ್ಯಕ್ತಿತ್ವದಲ್ಲಿ ಈ ದೂರವನ್ನು ಕಾಣಬಹುದು. ಕೆಲವೊಮ್ಮೆ ಭ್ರಮೆ ಹರಿದ ಮೇಲೆ ತಮ್ಮಿಬ್ಬರ ನಡುವಣ ಅಂತರ ಮೊದಲಿಗಿಂತಲೂ ಹೆಚ್ಚಾದಂತೆನಿಸಿ ಒಬ್ಬರನೊಬ್ಬರು ಕಂಡಾಗ ಅಸಹ್ಯ ಪಟ್ಟುಕೊಳ್ಳಬಹುದಾದಷ್ಟು ಸಂಕೀರ್ಣವಾದದ್ದು ಈ ಪ್ರಣಯ ಸನ್ನಿವೇಶ.

ಪ್ರಕೃತಿಯ ಸಮಸ್ತ ಜೀವಸಂಕುಲಕ್ಕೂ ಸಹಜವೆಂಬಂತಿರುವ ಲೈಂಗಿಕ ಸಂಗಮ ಸಂತಾನೋತ್ಪತ್ತಿಯಲ್ಲಿ, ಮಾನವ ಪ್ರಾಣಿ ಪಕ್ಷಿ ಸಂಕುಲಕ್ಕಿಂತ ಭಿನ್ನವಾಗಿ ನಿಂತಿದ್ದಾನೆ. ಅದು ಆತನ ಬುದ್ಧಿಶಕ್ತಿ, ಆಲೋಚನಾಶಕ್ತಿ ಹಾಗೂ ಭಾಷಾ ಬಳಕೆಯಿಂದಲೇ ಎಂಬುದು ಸ್ಪಷ್ಟ. ಪ್ರಾಣಿಲೋಕದಲ್ಲಿ ಅತ್ಯಂತ ಶ್ರೇಷ್ಠವಾದ ಮಾನವನ ವ್ಯಕ್ತಿತ್ವದ ಒಂದು ಪಾರ್ಶ್ವ ಮುಖವಾದ ಪ್ರಣಯದ ಪರಿಕಲ್ಪನೆ ಕುರಿತು ಅಧ್ಯಯನ ಮಾಡುವುದರ ಮೂಲಕ, ಆತನಲ್ಲಿರಬಹುದಾದ ಪ್ರಣಯಭಾವದ ಉದಾತ್ತ ಹಾಗೂ ವಿಲಕ್ಷಣ ಬಗೆಯ ಜೀವನದರ್ಶನವನ್ನು ಕೃತಿಯಲ್ಲಿ ದೊರೆಯುವ ನಿದರ್ಶನಗಳ ಮೂಲಕ ವಿಸ್ತಾವಾಗಿ ಇನ್ನು ಮುಂದೆ ನೋಡಬಹುದು.

ಮಾನವ ಜಗತ್ತಿನಲ್ಲಿ ಸಾಮಾಜಿಕವಾಗಿ ಕೇಂದ್ರಸ್ಥಾನ ಪಡೆದದ್ದು ಕುಟುಂಬ ವ್ಯವಸ್ಥೆ. ಭಾರತೀಯರ ಜೀವನ ನಡೆಯುವುದೇ ವಿಧೇಯತ ತತ್ವವನ್ನಾಧರಿಸಿದ ನೀತಿ-ನಿಯಮಗಳ ಒಪ್ಪಂದಗಳಿಂದಾಗಿ ಈ ಸಾಂಸ್ಕೃತಿಕ ಚೌಕಟ್ಟಿನಲ್ಲಿ 'ವಿವಾಹ' ಕೇಂದ್ರ ಸ್ಥಾನವನ್ನು ಪಡೆದಿದೆ. ಬದುಕಿನ ಪ್ರತಿಯೊಂದು ಕ್ಷಣವನ್ನೂ ಸಂಘ ಸಮುದಾಯಗಳ ನಡುವೆ ಸಾಗಿಸಬೇಕಾಗಿರುವುದು ಅನಿವಾರ್ಯ. ಇದು ಸಮಾಜ ವಿಜ್ಞಾನಿಗಳಿಂದ ಕೂಡ ಮನ್ನಣೆ ಪಡೆದಿದೆ. ಜೀವಿಗಳ ವಿಕಾಸದ ಹಂತದಲ್ಲಿ ಇತರ ಪ್ರಾಣಿಗಳಿಗಿಂತ ಮಾನವ ಭಿನ್ನವಾಗಿ ಗುರುತಿಸಿಕೊಳ್ಳಲು ಆತನು ಕಂಡುಕೊಂಡ ಸಾಂಸ್ಕೃತಿಕ ಚಟುವಟಿಕೆಗಳಾದ ಕುಟುಂಬ, ವಿವಾಹ, ಸಂತಾನ, ಸಂವೇದನೆಗಳು ಸಹಾಯಕವಾದವು. ವಿವಾಹದ ಸಂಬಂಧವಾಗಿ ಗುತ್ತಿ-ತಿಮ್ಮಿ, ಚಿನ್ನಮ್ಮ-ಮುಕುಂದಯ್ಯರ ಪಾತ್ರಗಳು ಕೇಂದ್ರಪಾತ್ರ ವಹಿಸುವಂತೆ, ಸಂತಾನೋತ್ಪತ್ತಿ ಸಂಬಂಧವಾಗಿ ಐತ-ಪೀಂಚಲು ಪಾತ್ರಗಳು ಕಾದಂಬರಿಯಲ್ಲಿ ಮುಖ್ಯಪಾತ್ರ ವಹಿಸುತ್ತವೆ. ಇನ್ನು ಕುಟುಂಬ, ಮಗುವಿನ ಲಾಲನೆ ಘೋಷಣೆಗೆ ಪೂರಕವಾಗಿ ದೇವಮ್ಮನ ಪಾತ್ರ ಸ್ಮರಣೀಯವಾದುದು.

ಪ್ರಾಕೃತಿಕ ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಪ್ರಣಯ ಸಹ ಒಂದು. ಪ್ರಣಯ ಜೀವನವಷ್ಟೇ ಮಾನವನ ಬದುಕಿನ ಗುರಿಯಲ್ಲ. ಆದರೂ ಇದು ಜೀವನದ ಮೂಲಭೂತ ಅಂಶ. ಕಾದಂಬರಿಯಲ್ಲಿನ ಬಹುತೇಕ ಪಾತ್ರಗಳು ಬಾಹ್ಯ ಚೆಲುವಿಗೆ ಆಕರ್ಷಣೆಗೊಂಡು ಕ್ಷಣಿಕ ದೈಹಿಕ ಸುಖಕ್ಕಾಗಿ ಕಾತರಿಸುವ ಕೀಳು ಅಭಿರುಚಿಯುಳ್ಳವಲ್ಲ, ಪ್ರಾಕೃತಿಕ ಲಕ್ಷಣಗಳನ್ನು ಮೈದಾಳಿ ವಯೋಮಾನಕ್ಕೆ ಸಹಜವಾಗಿ ಜೀವನ ಸಂಗಾತಿಯಾಗಿ ಪಡೆಯುವ, ತನ್ನ ಒಂಟಿತನವನ್ನು ದೂರಮಾಡುವ ಅಂತೆಯೇ ಪ್ರಕೃತಿಯ ನಿರಂತರತೆಗೆ (ಸಂತಾನೋತ್ಪತ್ತಿ) ಕಾರಣವಾಗುವ ಬಯಕೆಗಳೊಟ್ಟಿಗೆ ಕಾಣಿಸಿಕೊಳ್ಳುತ್ತಾರೆ. ಇದರಿಂದಾಚೆಗೆ ಪೂರ್ವಜನ್ಮದ ದಾಂಪತ್ಯ ಸಂಬಂಧವನ್ನು ಚಿನ್ನಮ್ಮ ಮುಕುಂದಯ್ಯನ ಪಾತ್ರಗಳು ಹೊಂದುವ ಹಿನ್ನೆಲೆಯಲ್ಲಿ ಪ್ರಣಯ ಸಂಬಂಧವು ಅತಿವ್ಯಾಪ್ತಿಯನ್ನು ಪಡೆಯುತ್ತದೆ. ಇದಕ್ಕೆ ವಿರುದ್ಧವಾದ ಕೇವಲ ಕಾಯದ ನೆಲೆಯಲ್ಲಿಯೇ ಉಳಿಯುವ ಪಾತ್ರಗಳಿಗೂ ಕೊರತೆ ಇಲ್ಲ. ಕಾವೇರಿಯನ್ನು ಅತ್ಯಾಚಾರ ಮಾಡುವ ಮುಸ್ಲಿಂ ಬಳಗವಾಗಬಹುದು, ನಾಗಕ್ಕನನ್ನು ಅಪ್ರಜ್ಞಾವಸ್ಥೆಯಲ್ಲಿ ಕೂಡುವ ಚಿನ್ನಮ್ಮನ ತಂದೆ ಮುಂತಾದವರು ನಿದರ್ಶನರಾಗಬಲ್ಲರು.

ಪ್ರೀತಿ-ಪ್ರೇಮ ಹುಟ್ಟುವುದು ಒಂದು ಆತ್ಮೀಯತೆಯ ಮನೋಭಾವದಿಂದ ಎಷ್ಟೋ ವೇಳೆ ಪ್ರೀತಿಯನ್ನು ನೇರವಾಗಿ ಅಭಿವ್ಯಕ್ತಿಸಲಾಗದಾಗ ಕನಸೆಂಬ ನಾವೆಯಲ್ಲಿ ವಿಹರಿಸಬೇಕಾಗಿ ಬರಹುದು. ವಾಸ್ತವ ಬದುಕು ಪ್ರೀತಿಯ ಬಗ್ಗೆ ಕನಸಿನಲ್ಲಿ ಕಂಡ ಲೋಕಕ್ಕಿಂತ ಭಿನ್ನವಾಗಿರುತ್ತದೆ

ಎಂಬುದರಲ್ಲಿ ಸಂದೇಹವಿಲ್ಲ. ಇಂತಹ ಕನಸಿನ ಪ್ರೀತಿಯ ಶಿಖರ ಪ್ರಾಯವಾದ ದೃಶ್ಯ ಕಾಳಿದಾಸನ ಮೇಘದೂತ ಕಾವ್ಯದಲ್ಲಿ ರಮ್ಯವಾಗಿ ಚಿತ್ರಣಗೊಂಡಿದೆ.

ಚಿನ್ನಮ್ಮ ಮುಕುಂದಯ್ಯನ ಪ್ರೇಮ ತಮ್ಮ ಸುತ್ತಮುತ್ತಲೂ ಇರುವ ಸಾವಿರಾರು ಬಂಧನಗಳಿಂದ ಮುಕ್ತಗೊಳ್ಳುತ್ತದೆ. ಸಂಸಾರದಲ್ಲಿ ನಿರಂತರವಾಗಿ ಪಾಲಿತವಾಗಿ ಬಂದಿರುವ ಸಿದ್ಧ ಕೌಟುಂಬಿಕ ನಿಯಮವನ್ನು ಮುರಿದು ಬರುವುದು ಜೊತೆಗೆ ತಮ್ಮ ಪ್ರೇಮದ ಬಲದಿಂದ ತಮ್ಮಿಂದಲೇ ತಾವು ಸಂಪೂರ್ಣರು ಎಂದು ಭಾವಿಸುತ್ತಾರೆ. ಈ ಜಗತ್ತೆಲ್ಲವೂ ವಿಮುಖವಾದರೂ ತಮಗೆ ಯಾವ ಭಯವೂ ಇಲ್ಲ ಎಂಬ ಧೈರ್ಯ ಅವರದು. ಇಂತಹ ನಿರ್ಬಂಧಗಳಿಂದ ಸ್ವಾತಂತ್ರ್ಯರಾಗಿ ಗಾಢವಾಗುವ ಚಿನ್ನಮ್ಮ–ಮುಕುಂದಯ್ಯರ ಪ್ರೇಮವೇ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮುಖ್ಯ ವಸ್ತುವಿನಂತಿದೆ.

"'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪಾತ್ರಗಳು ಪ್ರಕೃತಿಗೆ ಸಮೀಪವಾಗಿರುವುದಷ್ಟೇ ಅಲ್ಲ. ಪ್ರಕೃತಿಯ ಒಂದು ಅಂಶವೆಂಬಂತೆಯೇ ನಿರ್ವಹಣೆಗೆ ಒಳಗಾಗಿರುವುದು ಒಂದು ವಿಶೇಷ".[೧] ಮಾನವ ಬದುಕಿನ ಮೂಲ ಸೆಲೆಯಾದ ಪ್ರಕೃತಿಯೊಂದಿಗಿನ ಸಹಜ ಸಂಬಂಧ; ಪ್ರಾಕೃತಿಕತೆಯನ್ನು ಮೀರಿ ವೈಯಕ್ತಿಕ ನೆಲೆಯಲ್ಲಿ ಚಿಂತಿಸುವ ಕ್ರಮ; ಇದರಿಂದ ಸಾಂಸ್ಕೃತಿಕವಾಗಿ ಮೌಲ್ಯಗಳು ವ್ಯತ್ಯಾಸಗೊಳ್ಳುವ ಹಿನ್ನೆಲೆಯಲ್ಲಿ ಕಾದಂಬರಿಯ ಪಾತ್ರಗಳನ್ನು ಗಮನಿಸಬೇಕಾಗಿದೆ. ಲೌಕಿಕ ಸ್ಥರ ಇಂದ್ರಿಯ ಗಮ್ಯ ಬಯಕೆಗಳಲ್ಲಿ ಒಂದಾದ ಪ್ರಣಯವನ್ನು ಕುರಿತು ಚರ್ಚೆಗೆ ಮುಂದಾಗುವ ಮುನ್ನ ಆ ಕಾಲದ ಸಾಂಸ್ಕೃತಿಕ ಬದುಕಿನ ಸಂಪ್ರದಾಯ ಹಾಗೂ ಹೊಸತನಗಳನ್ನು ಗಮನಿಸಬೇಕಾದದ್ದು ಅವಶ್ಯಕ. ಇಲ್ಲದಿದ್ದರೆ ಅಧ್ಯಯನದ ದಿಕ್ಕು ಹಾಗೂ ಆಲೋಚನೆಗಳು ಚೆದುರಿ ಹೋಗುತ್ತವೆ.

'ಮಲೆಗಳಲ್ಲಿ ಮದುಮಗಳು' ಎನ್ನುವ ಶೀರ್ಷಿಕೆ ಬಹಳ ಔಚಿತ್ಯಪೂರ್ಣವಾಗಿದೆ. ಅವಿಭಾಜ್ಯ ಹಾಗೂ ಅಗತ್ಯವಾದ ಕೌಟುಂಬಿಕ ಜೀವನದಲ್ಲಿ ವಿವಾಹ ವಹಿಸುವ ಪಾತ್ರವನ್ನು ಇದು ಪ್ರತಿನಿಧಿಸುತ್ತದೆ. ಕಾದಂಬರಿ ಆರಂಭವೇ ನಾಯಿಗುತ್ತಿಯ ಬಹುದಿನದ ಪ್ರೇಮ ಪ್ರಕರಣದ ಸಫಲತೆಗೆ ಮಾಡಿಕೊಳ್ಳುತ್ತಿರುವ ಸಿದ್ಧತೆಯನ್ನು ತೋರಿಸುತ್ತದೆ. 'ಈ ಸಾರಿ ಅವಳನ್ನು ಹಾರಿಸಿಕೊಂಡು ಬರದಿದ್ದರೆ ನನ್ನ ಅಪ್ಪನಿಗೆ ಹುಟ್ಟಿದ ಮಗನೇ' ಅನ್ನುವ ಗುತ್ತಿಯ ಸ್ವಗತದಲ್ಲಿ ತಾನು ಪ್ರೀತಿಸುವ ತಿಮ್ಮಿಯನ್ನು ಪಡೆದೇ ತೀರುತ್ತೇನೆ ಎಂಬ ಅಚಲವಾದ ಶ್ರದ್ಧೆಯ ಜೊತೆಗೆ ಭಯ ಹಾಗೂ ಹೋರಾಟದ ಮನೋಭಾವ ಆತನಲ್ಲಿ ಪುಟಿದೆದ್ದಿದೆ.

---

೧. ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು – ಟಿ.ಪಿ.ಅಶೋಕ:ಪು.ಸಂ:೪೨.

"ಈ ಕಾದಂಬರಿಯ ಬಂಧ, ಒಂದು ಬಗೆಯ ನೈತಿಕ ವಿಕಾಸದೊಂದಿಗೆ ಸಂಬಂಧ ಹೊಂದಿದೆ"[೧] ಎನ್ನುವ ಮಾತು ಅರ್ಥಪೂರ್ಣವಾಗಿದ್ದರೂ ಚರ್ಚೆಗೆ ಗುರಿಯಾಗುವ ಹಲವು ಸಾಧ್ಯತೆಗಳಿವೆ. ಈ ಕಾದಂಬರಿಯಲ್ಲಿ ಬರುವ ಮೂರು ಜೋಡಿಗಳ ಹಿನ್ನೆಲೆಯಲ್ಲಿ ನೋಡುವುದಾದರೆ, ಗುತ್ತಿ-ತಿಮ್ಮಿಯರ ಸಂಬಂಧಗಳು ಆರಂಭಕಾಲದ ನೈತಿಕ ವಿಕಾಸವನ್ನು ಹೇಳಿದರೆ, ಐತ-ಪೀಂಚಲುವಿನ ಸಂಬಂಧಗಳು ಹಿಂದಿನದಕ್ಕಿಂತ ಉತ್ತಮವಾದ ರೀತಿಯ ವಿಕಾಸದ ಕುರುಹುಗಳನ್ನು ಹೇಳುತ್ತದೆ. ಚಿನ್ನಮ್ಮ ಮತ್ತು ಮುಕುಂದಯ್ಯರ ಸಂಬಂಧ ಶುದ್ಧ ನೈತಿಕ ನೆಲೆಯ ವಿಕಾಸದಂತೆಯೇ ತೋರಿದೆ. ಈ ನೈತಿಕ ವಿಕಾಸ ಜನರ ಸಾಮಾಜಿಕ ಸ್ತರದಿಂದ ನಿರ್ಣಯಿಸಲ್ಪಡುವುದಿಲ್ಲ. ಈ ವಿಕಾಸ ಆಯಾ ಮನಸ್ಸುಗಳಿಗೆ ಸಂಬಂಧಿಸಿದ ವಿಚಾರ. ಮೇಲ್ವರ್ಗದ ತಿಮ್ಮಪ್ಪ ಹೆಗ್ಗಡೆ, ರಂಗಪ್ಪಗೌಡ ಹಾಗೂ ವೆಂಕಟಣ ಈ ಮೂವರ ಮನಸ್ಸುಗಳು ಮುಕುಂದಯ್ಯನಂತಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಹಾಗೆ ನೋಡುವುದಾದರೆ ಪ್ರಕೃತಿ ಮತ್ತು ಸಂಸ್ಕೃತಿಗಳಲ್ಲಿನ ಹೊಂದಾಣಿಕೆಯೇ ಈ ನೈತಿಕ ನಿಲುವಿನಲ್ಲಿ ಭಿನ್ನತೆಗಳನ್ನು ಗುರುತಿಸಲು ಸಾಧ್ಯವಾಗಿರುವುದು. ಗುತ್ತಿಯದು ತೀರ ನೆಲ ಮಟ್ಟದ ಆಲೋಚನೆಗಳು, ಆತ ತಿಮ್ಮಿಯನ್ನು ಅಪಹರಿಸಿಕೊಂಡು ಬರುವ ಯೋಜನೆಗಳನ್ನು ಮಾಡುತ್ತಾನೆಯೇ ವಿನಹ ಇದೊಂದು ಅನೈತಿಕ ಕಾರ್ಯ ಎಂದು ತಿಳಿಯದವನು. ಈ ಕಾರಣಕ್ಕಾಗಿಯೇ ಈ ಪಾತ್ರಗಳು ಪ್ರಕೃತಿಗೆ ಹತ್ತಿರವಾದ ಸಾಂಸ್ಕೃತಿಕ ಜಗತ್ತಿನ ನೀತಿ ನಿಯಮಗಳಿಗೆ ಇನ್ನೂ ಒಗ್ಗಿಕೊಳ್ಳದೆ ಪರಿಸ್ಥಿತಿಯಲ್ಲಿವೆ.

"ಗುತ್ತಿ ತಿಮ್ಮಿಯರು ಜೀವನವನ್ನು ಅದು ಇದ್ದ ಹಾಗೆಯೇ ಸ್ವೀಕರಿಸಿದವರು".[೨] ತಿಮ್ಮಿಯನ್ನು ಪಡೆಯುವ ತವಕದಲ್ಲಿ ಹೊರಡುವ ಗುತ್ತಿ, ದೇಹ ವಸ್ತ್ರಗಳೆರಡರಲ್ಲೂ ಕೊಳೆಯನ್ನು ತುಂಬಿರುತ್ತಾನೆ. ಆದರೆ ಆತನಿಗೆ ಕಳೆತಂದುಕೊಡುವುದು ಮನದಾಳದಲ್ಲಿದ್ದ ಪ್ರೇಮಮಯವಾದ ಚಿಲುಮೆಯೆ ಆಗಿದೆ. ತಲೆಗೆ ಸುತ್ತಿದ್ದ ಪೇಟ ಕೂಡ ಈ ಹಿನ್ನೆಲೆಯಲ್ಲಿ ಒಂದು ಸೊಗಸನ್ನು ನೋಡುಗರಿಗೆ ತಂದು ಕೊಡುತ್ತದೆ. ಈ ಹುಮ್ಮಸ್ಸಿನ ಕಾರಣವೇ ಮರಾಠಿ ಮಂಜನ ಪ್ರಶ್ನೆಗೆ ಕಾರಣವಾಗುವುದು. ಆದರೆ ಈ ಸಂದರ್ಭದಲ್ಲಿ ಗುತ್ತಿಯ ಭಾವಕ್ಕಿಂತ ಪ್ರಜ್ಞೆಯೇ ಕಾರ್ಯನಿರ್ವಹಿಸಿ ತಾನು ಲಕ್ಕುಂದಕ್ಕೆ ಹೋಗುತ್ತಿರುವುದಾಗಿ ಹೇಳಿ ಸುಮ್ಮನಾಗುತ್ತಾನೆ. ತನ್ನ ಮನದಾಸೆಯನ್ನು ಬಹಿರಂಗಪಡಿಸಿ ಕೃತಿಗೆ ಮೊದಲು ಮಾತನಾಡುವ ವ್ಯಕ್ತಿಯಂತೆ ಗುತ್ತಿ ಕಾಣುವುದಿಲ್ಲ. ಇದಕ್ಕಿಂತ ಮುಖ್ಯವಾಗಿ ತನ್ನ ಕಾರ್ಯ ಸಾಧನೆಯ ಗೌಪ್ಯತೆಯನ್ನು

---

೧. ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು: ಮಲೆಗಳಲ್ಲಿ ಮದುಮಗಳು-ಎನ್.ಬೋರಲಿಂಗಯ್ಯ:ಪು.ಸಂ.೩೧೭.

೨. ಷಷ್ಠಿ ಸಂಪದ : ಕುವೆಂಪು ಅವರ ಮಲೆಗಳಲ್ಲಿ ಮದುಮಗಳು – ರಾಗೌ:ಪು.ಸಂ.೧೦೭

ಕಾಯ್ದುಕೊಳ್ಳುವುದೇ ಮುಖ್ಯ ಧ್ಯೇಯವಾಗಿದ್ದಂತೆ ತೋರುತ್ತದೆ. ಪ್ರಕೃತಿಯ ಆಪ್ತನಾಗಿ ಬಿಟ್ಟಿದ್ದ ಗುತ್ತಿ ತಾನು ಪ್ರಯಾಣ ಮಾಡುವ ಮೊದಲು ಸಿದ್ಧವಾಗಿದ್ದ ಪರಿ, ಆತನ ಧೀರೋಧಾತ್ತತೆಗೆ ಹಿಡಿದ ಕೈಗನ್ನಡಿಯಾಗಿದೆ. "ಬಗಲಲ್ಲಿ ಇರುಕಿಕೊಂಡಿದ್ದ ಬಗನಿ ಮರದ ಕರಿಯ ದೊಣ್ಣೆ ಹೊಡೆದಾಟಕ್ಕೂ ಅವನು ಸಿದ್ಧನಾಗಿದ್ದಾನೆ ಎಂಬುದನ್ನು ಸೂಚಿಸುತ್ತಿದ್ದವು"[೧] ಎನ್ನುವ ಮಾತು ಗುತ್ತಿಯ ಭಾವೋದ್ವೇಗದ ಸ್ಥಿತಿಯ ಹೇಳುತ್ತದೆ. ಆತನು ಹಾಕಿದ್ದ ಕಿಸೆ ಅಂಗಿ, ಹಾಗೂ ಮುಖಕ್ಷೌರ ಮಾಡಿಕೊಂಡಿದ್ದ ರೀತಿ ಪ್ರಾಕೃತಿಕ ಸಹಜ ಬಯಕೆಯನ್ನು ಉತ್ತೇಜಿಸುವ ನಾಗರಿಕ ಸಮಾಜದ ವಿಷಯಗಳಾಗಿದ್ದವು. ಪ್ರಾಯಕ್ಕೆ ಬಂದ ಯುವಕನ ತೇಜಸ್ಸನ್ನು ಗುತ್ತಿಯ ವೇಷಭೂಷಣ ಹಾಗೂ ಲವಲವಿಕೆ ಉತ್ಸಾಹದಲ್ಲಿ ಕಾಣಬಹುದು.

ಪ್ರಯಾಣದ ಸಂದರ್ಭದಲ್ಲಿ ಬರುವ ಭಾರಿ ಮಳೆಯಿಂದ ಹೊಳೆಯಲ್ಲಿ ನೀರಿನ ಪ್ರಮಾಣ ಹೆಚ್ಚಾದದ್ದು; ಅದನ್ನು ಗ್ರಹಿಸಿದ ಗುತ್ತಿ ನೀರಿನ ರಭಸ ಇಳಿಯುವವರೆಗೂ ಕಾಯುವುದು ಅವನಲ್ಲಿರುವ ಸಂಯಮವನ್ನು ಸಂಕೇತಿಸುತ್ತದೆ. ವಿವಾಹ ಪೂರ್ವದ ದೈಹಿಕ ಸಂಬಂಧವನ್ನು ಈ ಇಬ್ಬರು ಈಗಾಗಲೇ ಪಡೆದಿರುವುದು ಇವರ ಪ್ರಜ್ಞೆಯ ನೆಲೆಯಲ್ಲಿ ಪಾಪ ಭಾವವನ್ನಾಗಲಿ, ಅನೈತಿಕ ಕಾರ್ಯವೆಂಬ ಭಾವವನ್ನಾಗಲಿ ಕೆರಳಿಸುವುದಿಲ್ಲ. ಈ ಪಾತ್ರಗಳ ಸಂಸ್ಕಾರ ಆ ತೆರನಾದದ್ದು, ಆದ್ದರಿಂದಲೇ ಇವರ ಈ ಪ್ರವೃತ್ತಿಯನ್ನು ಸಹಜ ಪ್ರಾಕೃತಿಕ ನೆಲೆಯಿಂದ ನೋಡಬೇಕೆನ್ನುವುದು.

ಗುತ್ತಿ–ತಿಮ್ಮಿಯರ ಸಂಬಂಧದ ವಿಶೇಷತೆ ಇರುವುದು ಅವರು ಜೀವಿಸಿದ್ದ ಸಾಮಾಜಿಕ ನಿರ್ಬಂಧಗಳುಳ್ಳ ವ್ಯವಸ್ಥೆಯಿಂದ ಅವರು ಪಾರಾದ ರೀತಿಯಲ್ಲಿ. ಕಲ್ಲಯ್ಯ ಗೌಡರು ತಮ್ಮ ಕೇರಿಯ ಒಂದು ಆಳಿನ ನಷ್ಟವನ್ನು ಪರಿಹರಿಸಲು ವಿವಾಹದ ಸ್ವಾತಂತ್ರ್ಯವನ್ನೇ ಕಿತ್ತುಕೊಂಡಿರುತ್ತಾರೆ. ಈ ಕಾರಣಕ್ಕಾಗಿಯೇ ತಿಮ್ಮಿ ಬಚ್ಚನೊಂದಿಗೆ ವಿವಾಹವಾಗುವ ಪ್ರಸ್ತಾಪ ಸಹ ಬರುವುದು. ಈ ನಿರ್ಬಂಧದ ನಡುವೆ ತಿಮ್ಮಿ ಗುತ್ತಿಯೊಟ್ಟಿಗೆ ತೆರಳುವುದು ಬಂಡಾಯದ ಎಳೆಗಳನ್ನು ಒಳಗೊಂಡಿರುವುದೇ ಆಗಿದೆ. ಈ ಪ್ರಕರಣದಿಂದ ತಿಮ್ಮಿಯ ಅಣ್ಣ ಸಣ್ಣಬೀರನಿಗೆ ಶಿಕ್ಷೆಯಾಗುತ್ತದೆ. ಇದು ಅಂದಿನ ಮಲೆನಾಡ ಒಕ್ಕಲಿಗ ಯಜಮಾನರ ದಬ್ಬಾಳಿಕೆಯನ್ನು ಪ್ರತಿನಿಧಿಸುತ್ತದೆ. ಇದು ಇನ್ನೊಂದು ನೆಲೆ. ಪ್ರಸ್ತುತ ಸಂದರ್ಭಕ್ಕೆ ಇದರ ಉಲ್ಲೇಖ ಅವಶ್ಯಕವಾಗಿದ್ದರಿಂದ ಹೇಳಬೇಕಾಯಿತಷ್ಟೇ.

---

[೧] .ಮಲೆಗಳಲ್ಲಿ ಮದುಮಗಳು – ಕುವೆಂಪು:ಪು.ಸಂ.೨–೩.

ಈ ತರುಣ ಜೋಡಿಗೆ ಆಶ್ರಯದಾಣವಾಗುವುದು ಹುಲಿಕಲ್ಲಿನ ನೆತ್ತಿ. ಈ ಇಬ್ಬರು ಇಲ್ಲಿ ಕಳೆಯುವ ಒಂದು ರಾತ್ರಿಯಲ್ಲಿ ಇವರಿಬ್ಬರು ಒಂದಾಗುವಲ್ಲಿ ಅಡ್ಡಿಯಾದದ್ದು 'ಹುಲಿ'ಯ ಮಾತ್ರ ಅಂದರೆ ಇವರ ಪ್ರಜ್ಞೆಯ ವಿಸ್ತಾರವನ್ನು ಈ ಸನ್ನಿವೇಶ ಸೂಚಿಸಿಬಿಡುತ್ತದೆ. ಸೂರ್ಯೋದಯದ ದೃಶ್ಯಕಂಡ ತಿಮ್ಮಿಯಲ್ಲಿ ಪ್ರಕೃತಿಯ ಸೌಂದರ್ಯವನ್ನು ನೋಡಿ ಆಶ್ಚರ್ಯಪಡುವ ಅದರಿಂದ ಆನಂದ ಹೊಂದುವ ಭಾವ ಹೊಮ್ಮುತ್ತದೆ. ಇದೇ ಸ್ತರದಲ್ಲಿ ಬರುವ ಕೋಣೂರಿನ ರಂಗಪ್ಪಗೌಡರ ತೋಟದಲ್ಲಿ ದುಡಿಯುವ ಕೆಲಸಗಾರರಿಗೆ ಈ ಬಗೆಯ ಯಾವುದೇ ಪ್ರಾಕೃತಿಕ ಸೌಂದರ್ಯವನ್ನು ಅನುಭವಿಸುವ ಭಾವ ಬರುವುದಿಲ್ಲ. ಇದಕ್ಕೆ ಮೂಲಕಾರಣ ಆಯಾ ವ್ಯಕ್ತಿಗಳ ಭಾವಕೋಶಗಳು, ಮೇಲ್ವರ್ಗದವರ ಊಳಿಗಪದ್ಧತಿಯ ವಾತಾವರಣದಲ್ಲೇ ಬೆಳೆದು ಭಿನ್ನವಾಗಿ ನಿಂತು ಜೀವನದಲ್ಲಿ ಉತ್ಸಾಹ ತಾಳುವ ವ್ಯಕ್ತಿಗಳು; ಜಡವಾಗಿ ದುಡಿಯುವ ವ್ಯಕ್ತಿಗಳು ಇಬ್ಬರನ್ನು ಇಲ್ಲಿ ಕಾಣಬಹುದು. ಜೀವನದ ಬಗೆಗಿನ ಅತಿಯಾದ ಪ್ರೀತಿಯೇ ಪ್ರಕೃತಿಯ ಸೌಂದಾರ್ಯಾರಾಧನೆಗೆ ಮೂಲ ಪ್ರೇರಣೆ ಎಂಬಂತೆ ಗುತ್ತಿ–ತಿಮ್ಮಿಯರಲ್ಲಿ ಕಂಗೊಳಿಸುತ್ತದೆ. ಈ ಎರಡು ಪಾತ್ರಗಳ ಶ್ರೇಷ್ಠತೆ ಕಾಣುವುದು ವಿವಾಹದ ತರುವಾಯ ಯಾವುದೇ ಅನ್ಯವ್ಯಕ್ತಿಗಳೊಂದಿಗೆ ದೈಹಿಕ ಮಟ್ಟದಲ್ಲಿ ವ್ಯವಹರಿಸದೇ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವಲ್ಲಿ. ಆದರೆ ಮೇಲ್ವರ್ಗದ ಪುರುಷರ ಒತ್ತಡಗಳಿಂದಲೇ ಜೀವನ ಸಾಗಿಸಬೇಕಾದ, ಯಾವ ಸಮಯದಲ್ಲಿ ಏನು ಆಗಬಹುದೊ ಎಂಬ ಅಭದ್ರತೆ ಕೆಳವರ್ಗದ ಸ್ತ್ರೀಯರನ್ನು ಕಾಡದೆ ಇಲ್ಲ, ಇಜಾರದ ಸಾಬಿಯನ್ನು ಹಲ್ಲೆ ಮಾಡಿದ್ದರಿಂದ ಪೊಲೀಸರ ಕೈವಶವಾದ ಗುತ್ತಿ ತಿಮ್ಮಿಯ ಅಗಲಿಕೆಯಿಂದ ಹೊಂದುವ ನೋವು ಸಂಕಟಗಳು ಆಕೆಯ ಬಗೆಗಿನ ಅದಮ್ಯ ಪ್ರೀತಿಯನ್ನು ತಿಳಿಯಪಡಿಸುತ್ತದೆ. "ತಿಮ್ಮಿಯ ಯೋಚನೆ ಬಂದೊಡನೆ ಮೈನರಗಳೆಲ್ಲ ಸಡಿಲವಾಗಿ ಸೋತು ನಿದ್ದೆ ಮಾಡುತ್ತಿವೆಯೋ ಎಂಬ ಹಾಗಾಯಿತು ಗುತ್ತಿಗೆ ಅವನ ಕ್ರಿಯಾಪಟುತ್ವಕ್ಕೆ ಲಕ್ವ ಬಡಿದ ಹಾಗಾಯಿತು".[೧] ಎಂಬಲ್ಲಿ ಮೇಲಿನ ಅಭಿಪ್ರಾಯ ಸ್ಪಷ್ಟ

ತಾನು ಒಲಿದಾತನನ್ನು ಸೇರುವ ತಿಮ್ಮಿಯ ನಿರ್ಧಾರ; ತಾಯಿಯಾದ ಸೇಸಿಯ ಸಹಕಾರ; ಗುತ್ತಿಯ ಶ್ರಮದಾಯಕ ಸಾಹಸ ಇವೆಲ್ಲ ವ್ಯವಸ್ಥೆಯ ವಿರುದ್ಧದ ಬಂಡಾಯಗಳೇ ಆಗಿವೆ. ಸಂಪ್ರದಾಯವಾದಿಗಳಿಗೆ ಈ ರೀತಿ ಓಡಿಹೋಗಿ ವಿವಾಹವಾಗುವುದು ತಪ್ಪೇ ಇರುವಂತೆ ಕಾಣಬಹುದು. ಆದರೆ ಆ ಪಾತ್ರಗಳು ಪ್ರಕ್ಷುಬ್ಧ ವಾತಾವರಣದಲ್ಲಿ ತೋರುವ ಹೋರಾಟದ ಮನೋಭಾವ ಅನನ್ಯ. ತನ್ನನ್ನು ಒಲಿದು ಬಂದಾಕೆಯನ್ನು ಯಾವ ಕಾರಣವೆದುರಾದರೂ ಬಿಡದೆ

[೧] .ಮಲೆಗಳಲ್ಲಿ ಮದುಮಗಳು –ಕುವೆಂಪು:ಪು.ಸಂ.೪೭೨.

ರಕ್ಷಿಸುವ ರೀತಿ ಮಹತ್ವದ್ದಾಗಿದೆ. ತಾನು ಬದುಕಿದ ಪ್ರದೇಶ, ತನ್ನವರನ್ನೆಲ್ಲಾ ಬಿಟ್ಟು ದೂರ ಹೋಗುವ ನಿರ್ಧಾರ ಸಹ ಕೈಹಿಡಿದಾಕೆಯನ್ನು ರಕ್ಷಿಸುವ ಜೊತೆಗೆ, ಪೊಲೀಸರಿಂದ ತಪ್ಪಿಸಿಕೊಳ್ಳುವುದೇ ಆಗಿತ್ತು. ರತಿ ಹಾಗೂ ಧೀರ ಭಾವಗಳು ಹುಲಿಯನ ಅಂತ್ಯದೊಂದಿಗೆ ದೂರವಾಗುವ ಸಾಂಕೇತಿಕ ದೃಶ್ಯವನ್ನು ಕಾದಂಬರಿಯಲ್ಲಿ ಕಾಣಬಹುದು. ಕಾದಂಬರಿಯ ಆರಂಭದಲ್ಲಿ ಬರುವ ಹುಲಿಯನ ಹಾಗೂ ಗುತ್ತಿಯ ಸಹಚರ್ಯ; ಅಂತಿಮವಾಗಿ ಹುಲಿಯ ನದಿಪಾಲಾಗುವುದು – ರತಿಭಾವದ ಪರಾಕಾಷ್ಠೆ ಮುಗಿದು ಇಳಿಮುಖವಾಗುವ, ಹಾಗೆಯೇ ಗುತ್ತಿ ತನ್ನ ವ್ಯಕ್ತಿತ್ವವನ್ನು ಮರೆತು, ತನ್ನ ಹೆಸರನ್ನು ಬದಲಾಯಿಸಿಕೊಳ್ಳುವ ಮೂಲಕ ಧೀರವಾದ ಹೋರಾಟ ಕೂಡ ಅಂತ್ಯವಾಗಿ, ಪೊಲೀಸರಿಂದ ಪಾರಾಗಿ ನೆಮ್ಮದಿಯ ಜೀವನ ನಡೆಸಿದರೆ ಸಾಕು ಎನ್ನುವ ನಿಲುವನ್ನು ತಲುಪಿದಂತಿದೆ. ಗುತ್ತಿ–ತಿಮ್ಮಿಯರನ್ನು ಒಳಗೊಂಡಂತೆ "ಇಲ್ಲಿ ಹಲವು ಪ್ರಿಯ ಪ್ರೇಯಸಿಯರ ಜೊತೆಗಳಿವೆ. ಸ್ತ್ರೀಪುರುಷರ ಸಂಬಂಧ ಇವರ ಬಾಂಧವ್ಯಗಳಲ್ಲಿ ಪ್ರಕಟವಾಗುತ್ತದೆ. ನಿಸರ್ಗ–ನಾಗರೀಕತೆ ಅಥವಾ ಸಂಸ್ಕೃತೀಕರಣಗಳ ನಡುವೆ ಬೇರೆ ಬೇರೆ ಸ್ತರಗಳಲ್ಲಿರುವ ಇವರ ಕಾಡು ಜೀವನ ಬೇರೆ ಬೇರೆ ಘಟ್ಟಗಳಲ್ಲಿ ನಡೆಯುತ್ತದೆ".[೧] ಮಲೆನಾಡಿನ ಮತ್ತೊಂದು ಜೋಡಿ 'ಐತ–ಪೀಂಚಲು' ಗಟ್ಟದ ಕೆಳಗಿನಿಂದ ಹೊಟ್ಟೆ ಪಾಡಿಗೆ ಬಂದವರು ಇವರು. ಗುತ್ತಿ–ತಿಮ್ಮಿಯರ ಸಾಹಸಗಳು ವಿವಾಹವಾಗುವುದರಲ್ಲಿ ಗೋಚರಿಸಿದರೆ; ಈ ಜೋಡಿಯ ಸಾಹಸವೇನಿದ್ದರೂ ಮುಕುಂದಯ್ಯ–ಚಿನ್ನಮ್ಮರನ್ನು ಒಂದು ಮಾಡುವ ಮಹತ್ವಾಕಾಂಕ್ಷೆಯದು. ಕಾದಂಬರಿಯುದ್ದಕ್ಕೂ ಐತ–ಪೀಂಚಲುವಿನ ದಾಂಪತ್ಯ ಜೀವನ ಆದರ್ಶಮಯವಾಗಿ ಚಿತ್ರಿತವಾಗಿದೆ. ಈ ಆದರ್ಶ ಹಾಗೂ ಸಾಮರಸ್ಯದ ಇವರ ಬದುಕಿನ ನೆಲೆಯೆ ಮುಕುಂದಯ್ಯನ ದೃಷ್ಟಿಗೆ ಇವರಿಬ್ಬರು ಶಿವಶಿವಾಣಿಯರಂತೆ ಕಾಣಲು ಸಾಧ್ಯವಾಗುವುದು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೂ ಸ್ಥಾನಮಾನ ಕೌಟುಂಬಿಕ ಹಿನ್ನಲೆಯಲ್ಲಿ ದೊರೆತಿರುವುದು ಶಿವನ ಅರ್ಧನಾರೀಶ್ವರ ಕಲ್ಪನೆಯಂತೆಯೇ ಇದೆ. ಆದರೆ ಇದಕ್ಕೆ ಅಪವಾದವಾಗಿ ಪ್ರಬಲ ವರ್ಗದ ಕಾಮುಕ ಪುರುಷರ ಹಾವಳಿ ಇದೆ. ಇದು ಹೆಣ್ಣಿನ ಇನ್ನೊಂದು ಬಗೆಯ ಅಭದ್ರ ಸ್ಥಿತಿಯ ಅನಾವರಣ.

ಮಾನಸಿಕವಾಗಿಯೇ ಆಗಲಿ, ದೈಹಿಕವಾಗಿಯೇ ಆಗಲಿ ಐತ–ಪೀಂಚಲಿನ ನಡೆ–ನುಡಿಗಳು ದಾಂಪತ್ಯ ಜೀವನದ ಒಳಗನ್ನು ತೆರೆದಿಡುತ್ತವೆ. ದಿನನಿತ್ಯ ದುಡಿಮೆ ಹೇಗೆ ಅನಿವಾರ್ಯವೋ ಬದುಕಿನಲ್ಲಿನ ಉತ್ಸಾಹಕ್ಕೆ ಅವರ ಪ್ರಣಯದ ಭಾವ ಅವಶ್ಯಕವಾಗಿರುವಂತೆ ಕಾದಂಬರಿಯಲ್ಲಿ

---

[೧] .ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಲ್.ಎಸ್.ಶೇಷಗಿರಿರಾವ್:ಪು.ಸಂ.೧೪೬.

ಗೋಚರಿಸುತ್ತದೆ. ಇವರಿಬ್ಬರ ದೇಹಸಂಬಂಧದಲ್ಲಿ ವಸ್ತ್ರಗಳು ಸಂಪೂರ್ಣ ತೆಗೆಯಲ್ಪಡುವುದು, ಸಹಜ ಪ್ರಾಕೃತಿಕ ನೆಲೆಯಲ್ಲಿ ಮಾನವನ ವರ್ತನೆಯನ್ನು ತೆರೆದಿಡುವ ಸಂಗತಿಯಾಗಿ ನಿಲ್ಲುತ್ತದೆ. ಅಂತೆಯೇ ಕಾದಂಬರಿಯಲ್ಲಿ ಬರುವ ದೇಹಗಳ ಸಮಾಗಮದ ಚಿತ್ರ ಕೂಡ ಪ್ರಣಯದ ಉತ್ಕರ್ಷಾವಸ್ಥೆಯನ್ನು ಪರಿಣಾಮಕಾರಿಯಾಗಿ ಹೇಳುತ್ತದೆ. ದೇಹ ಸಂಬಂಧಗಳನ್ನು ಕುರಿತಾಗಿ ನಿರೂಪಿಸುವ ಕಾದಂಬರಿಗಳಲ್ಲೆಲ್ಲ ಅಶ್ಲೀಲತೆಯ ಲವಲೇಶವೂ ಇಲ್ಲದಂತೆ, ರಾಗ–ಭಾವ ದ್ವೇಷಗಳು ಉಲ್ಬಣವಾಗದಂತೆ ನಿರ್ಲಿಪ್ತವಾಗಿ ಚಿತ್ರಿಸಿಕೊಡಬಲ್ಲ ಶಕ್ತಿಯನ್ನು ಕುವೆಂಪು ಹೊಂದಿದ್ದಾರೆ ಎನ್ನುವುದು ಈ ಸಂದರ್ಭದಲ್ಲಿ ಅತಿಶಯೋಕ್ತಿಯಾಗಲಾರದು.

ಎಲ್ಲರ ಬದುಕಿನಲ್ಲಿ ಸರ್ವೇಸಾಮಾನ್ಯನಾಗಿ ಘಟಿಸಬಹುದಾದ ದಾಂಪತ್ಯ ನಿಷ್ಠೆಯ ಬಗೆಗಿನ ಅನುಮಾನ ಐತನಲ್ಲಿ ಉಂಟಾಗುತ್ತದೆ. ಆದರೆ ಇದಕ್ಕೆ ಪೂರಕವಾಗಿ ಅವರ ಸಾಮಾಜಿಕಸ್ತರ ಐತನ ಆಲೋಚನೆಯನ್ನು ಕ್ಷಣಾರ್ಧದಲ್ಲಿ ಇಲ್ಲವಾಗಿಸುತ್ತದೆ. "ಮುಕುಂದಯ್ಯನನ್ನು ಚೆನ್ನಾಗಿ ಅರಿತಿದ್ದ ಅವನಿಗೆ, ಅವನಲ್ಲಿ ಅಚಲವಾದ ನಂಬುಗೆಯಿತ್ತು, ಅದಕ್ಕೆ ಬೆಂಬಲವಾಗಿ ಕೀಳು ಜಾತಿಯವರಾಗಿದ್ದ ತಾವು ಪ್ರತ್ಯೇಕ ಪ್ರಾಣಿ ವರ್ಗಕ್ಕೆ ಸೇರಿದವರೋ ಎಂಬಂತೆ ಮೇಲುಜಾತಿಯ ಮನುಷ್ಯ ವರ್ಗಕ್ಕೆ ಸೇರಿದ ಮುಕುಂದಯ್ಯನ ಮೋಹಕ್ಕೆ ಪಕ್ಕಾಗುವುದೂ ಸಾಧ್ಯವಿರಲಿಲ್ಲ ಎಂಬುದೂ ಅವನ ರಕ್ತಗತ ಬುದ್ಧಿಯಾಗಿತ್ತು. ಜಿಂಕೆ ನಾಯಿಯ ಮೇಲೆ ಮೋಹಗೊಳ್ಳುವುದು ಹೇಗೆ ಅಸಂಭವವೋ ಹಾಗೆ".[೧]

ಕಾಲದ ದೃಷ್ಟಿಯಿಂದ ಹಾಗೂ ಪ್ರಾದೇಶಿಕ ದೃಷ್ಟಿಯಿಂದ ಮೌಲ್ಯಗಳ ವಿಕಸನ ಹಾಗೂ ನಿರಸನಗಳ ನಡುವೆ ನಡೆಯುವ ಸಂಘರ್ಷಾತ್ಮಕತೆಯಂತೆ ಇಲ್ಲಿನ ಪ್ರಣಯ ವ್ಯಾಪಾರ ಗೋಚರಿಸುತ್ತದೆ. ಮೌಲ್ಯಗಳ ವಿಕಸನದ ದೃಷ್ಟಿಯಲ್ಲಿ ನೋಡುವುದಾದರೆ ಮುಕುಂದಯ್ಯ ಹಾಗೂ ಪೀಂಚಲು ಏಕಾಂತದಲ್ಲಿ ಸ್ನೇಹದಿಂದಿರಲು ಮಾತ್ರ ಸಾಧ್ಯ. ಶುದ್ಧ ಪ್ರಾಕೃತಿಕ ನೆಲೆಯಲ್ಲಿ ಹೇಳಬೇಕೆಂದರೆ ಇವರಿಬ್ಬರ ಸಮಾಗಮ ಆಗಬೇಕಿತ್ತು. ಆದರೆ ಪೀಂಚಲುವಿನ ಮನಸ್ಸಿನಲ್ಲಿ ಪ್ರಣಯಭಾವ ಮೂಡಿ, ಅರ್ಪಣೆ ಮಾಡಿಕೊಳ್ಳುವುದರಲ್ಲಿ ಸಿದ್ಧವಾಗಿದ್ದನ್ನು ಗುರುತಿಸಬಹುದು.

"ತನ್ನ ಗಂಡನ ಸಂಬಂಧವಾದ ಅವಳ ನಡೆಯನ್ನು 'ಪಾತಿವ್ರತ್ಯ' ಎಂದು ಕರೆಯುವಂತಿರಲಿಲ್ಲ. ಏಕೆಂದರೆ ಅದಕ್ಕೆ ಸಮಾಜದ ನೀತಿಯ ಭೀತಿಯಾಗಲಿ ಪಾಪ ನರಕಾದಿ ಧರ್ಮ ಭಯದ ಭೀತಿಯಾಗಲಿ, ಆದರ್ಶ ಸಾಧನೆಯ ಸಾಣೆಯಾಗಲಿ ಇರಲಿಲ್ಲ. ಅದು ತೀರ

---

[೧] .ಮಲೆಗಳಲ್ಲಿ ಮದುಮಗಳು – ಕುವೆಂಪು:ಪು.ಸಂ.೧೪೪.

ನೈಸರ್ಗಿಕವಾಗಿತ್ತು. ಐತ ಅಪೇಕ್ಷಿಸಿದ್ದನ್ನು ಮುಕುಂದಯ್ಯ ಅಪೇಕ್ಷಿಸಿದ್ದರೆ ಅವಳು 'ಇಲ್ಲ' ಎನ್ನುವ ಸ್ಥಿತಿಯಲ್ಲಿರಲಿಲ್ಲ. ಒಲ್ಲೆ ಎನ್ನುತ್ತಿರಲಿಲ್ಲ..."[೧]

ಜೀವನ ಶ್ರದ್ಧೆ ಐತ-ಪೀಂಚಲುವಿನಲ್ಲಿ ಅದಮ್ಯವಾಗಿದ್ದರು 'ಪಾಪ-ಪುಣ್ಯ'ಗಳ ಸಂಸ್ಕೃತಿಯ ನೆಲೆಗೆ ಈ ಪಾತ್ರಗಳು ಚಲಿಸದೆ, ಶುದ್ಧವಾದ ಪ್ರಾಕೃತಿಕ ಜಗತ್ತಿನ ಮಾದರಿಯಂತಿವೆ. ಮುಕುಂದಯ್ಯ-ಚಿನ್ನಮ್ಮರಿಗೆ ಪೀಂಚಲು ಸಹಾಯ ಮಾಡುವ ಸಂದರ್ಭದಲ್ಲಿ ಐತನು ಪಡುವ ಸಂಶಯ ಮಾನವ ಸಹಜವಾದದ್ದು. ತನ್ನ ಆತ್ಮೀಯ ಪತ್ನಿ ಬೇರೆಯವರ ಸ್ವತ್ತಾಗಬಾರದು ಎನ್ನುವ ಅಧಿಕಾರ ಮೂಲ ನೈತಿಕ ಪ್ರಜ್ಞೆ ಪೀಂಚಲುವಿನ ಬಗ್ಗೆ ಸಂಶಯ ಬರುವಂತೆ ಮಾಡಿರುವುದು ತಪ್ಪೇನಲ್ಲ. ಗುತ್ತಿಯಾಗಲಿ ಐತನಾಗಲಿ ಎಷ್ಟೇ ಪ್ರಾಕೃತಿಕ ನೆಲೆಯಲ್ಲಿ ತಮ್ಮ ಬದುಕನ್ನು ನಿರ್ವಹಿಸಿದ್ದರೂ; ಅನಿವಾರ್ಯದ ಸಂದರ್ಭದಲ್ಲೂ ಕೂಡ ತಮ್ಮ ಜೀವನದ ಸಂಗಾತಿಗಳನ್ನು ದೂರ ಮಾಡುವುದಾಗಲಿ, ಬೇರೆಯವರ ಹಿಡಿತಕ್ಕೆ ಸಿಲುಕಿಸುವುದಾಗಲಿ ಮಾಡಿಲ್ಲ. ಕಾದಂಬರಿಯಲ್ಲಿನ ಪಾತ್ರಗಳು ಜೀವನದಲ್ಲಿ ಪಡೆದ ಅನುಭವಗಳಿಂದಲೇ ಪಕ್ವಗೊಂಡು ನೈತಿಕ ವಿಕಾಸದೆಡೆಗೆ ನಡೆಯುತ್ತಿವೆ, ಅಂದರೆ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ದುರ್ಬಲವಾಗಿದ್ದಾಗಿಯೂ ದಾಂಪತ್ಯದ ತರುವಾಯ ಶುದ್ಧತೆಯ ಜೀವನ ನಡೆಸುತ್ತಾರೆ. ಪ್ರಣಯ ಕೇವಲ ದೇಹದ ಭೋಗಮಾತ್ರವಲ್ಲ; ಅದು ಮಾನವೀಯ ಅಂಶ ಕೂಡ ಎಂಬುದು ಇಲ್ಲಿ ಸ್ಪಷ್ಟ. ಮನಸ್ಸಿನ ಒಪ್ಪಿಗೆಯಿಲ್ಲದೆ ಯಾವೊಂದು ಭೋಗವು ನಡೆಯುವಂತಿಲ್ಲ. ಈ ಹಿನ್ನಲೆಯಲ್ಲಿ ಜಿ.ಎಸ್. ಆಮೂರ ಎತ್ತುವ ಪ್ರಶ್ನೆ ಮೌಲ್ಯಯುತವಾದದ್ದು. "ಮಾನವೀಯ ಮೌಲ್ಯಗಳು ನೈಸರ್ಗಿಕವೋ, ಸಂಸ್ಕೃತಿಜನ್ಯವೋ ಎಂಬುದರ ಬಗ್ಗೆಯೂ ಕಾದಂಬರಿ ದ್ವಂದ್ವ ಧೋರಣೆ ತಾಳಿದಂತಿದೆ. ಉದಾಹರಣೆಗೆ ಪಾತಿವ್ರತ್ಯದಂಥ ಸಾಂಪ್ರದಾಯಿಕ ಮೌಲ್ಯ ಕಾದಂಬರಿಯಲ್ಲಿ ವಿವೇಚನೆಗೊಳಗಾದ ರೀತಿಯನ್ನೇ ನೊಡಬಹುದು" ಎಂದಿದ್ದಾರೆ.

"ಪ್ರಕೃತಿ-ಸಂಸ್ಕೃತಿ ಎಂಬ ಪರಿಕಲ್ಪನೆಗಳು ತತ್ವಶಾಸ್ತ್ರೀಯ ದ್ವಂದ್ವಮಾನತೆಗಳ ಸರಣಿಯಲ್ಲಿ ಮುಖ್ಯವಾದವು. ಕಾಲದೇಶ ಬದ್ಧ ವ್ಯಕ್ತಿಗತ ಸಾಮಾಜಿಕ ಅನುಭವಗಳಿಗೆ ಅನುಗುಣವಾಗಿ ಪ್ರಕೃತಿ-ಸಂಸ್ಕೃತಿ ಗ್ರಹಿಕೆಗಳು ಸಿದ್ಧಗೊಳ್ಳುತ್ತವೆ".[೨] ಎಂದು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಕುರಿತು ಹೇಳಿರುವ ಮಾತು ನಿಸ್ಸಂಶಯವಾಗಿ ಗುತ್ತಿ-ತಿಮ್ಮಿ ಐತ-ಪೀಂಚಲು ಚಿನ್ನಮ್ಮ-ಮುಕುಂದಯ್ಯ ಈ ಮೂರು ಜೋಡಿಗಳಿಗೆ ನೇರವಾಗಿ ಅನ್ವಯಿಸುತ್ತದೆ. ಮುಕುಂದಯ್ಯ ಹಾಗೂ ಚಿನ್ನಮ್ಮರ ಪ್ರಣಯ ವ್ಯಾಪಾರಗಳು ಉನ್ನತವಾದ ಸಾಮಾಜಿಕ ಅನುಭಗಳಿಂದ ಕಾದಂಬರಿಯಲ್ಲಿ

---

೧. ಮಲೆಗಳಲ್ಲಿ ಮದುಮಗಳು – ಕುವೆಂಪು:ಪು.ಸಂ.೧೪೦-೧೪೧.

೨. ಕುವೆಂಪು ಪುನರ್ಮನನ : ಕುವೆಂಪು ಕಾದಂಬರಿಗಳಲ್ಲಿ 'ಪ್ರಕೃತಿ- ಸಂಸ್ಕೃತಿ ಪರಿಕಲ್ಪನೆ' – ಪ್ರೀತಿ ಶುಭಚಂದ್ರಾ ಪು.ಸಂ:೫೪.

ಕಾಣಿಸಿಕೊಂಡಿವೆ. ಗುತ್ತಿ-ತಿಮ್ಮಿ ಐತ-ಪೀಂಚಲುವಿನ ಸಾಮಾಜಿಕ ಅನುಭವ ಉತ್ತಮವಾಗಿಲ್ಲ ಎನ್ನುವುದಕ್ಕಿಂತ ಅವು ಪ್ರಾಕೃತಿಕ ಅನುಭಗಳಿಂದ ಮುಕುಂದಯ್ಯ-ಚಿನ್ನಮ್ಮರ ಪೂರ್ಣ ಮಟ್ಟಿನ ಪ್ರತ್ಯೇಕತೆಯನ್ನು ಪಡೆದಿಲ್ಲ ಎನ್ನಬೇಕು.

ಪ್ರಾಕೃತಿಕ ಮಟ್ಟದ 'ಪ್ರಣಯ'ವನ್ನು ಹತ್ತಿಕ್ಕಿದಷ್ಟೂ ಉಲ್ಬಣವಾಗಿ ಅದು ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುವಂತೆ ಮುಕುಂದಯ್ಯ ಚಿನ್ನಮ್ಮರ ಪಾತ್ರಗಳು ಚಿತ್ರಣಗೊಂಡಿವೆ. ನವತರುಣ-ತರುಣಿಯ ಹಿಡಿದಿಡಲ್ಪಟ್ಟ ಭಾವಗಳು ಆಸ್ಫೋಟಿಸಿದಾಗ ಉಂಟಾಗುವ ಪರಿಣಾಮದ ಚಿತ್ರವನ್ನು ಕಾದಂಬರಿ ನೀಡಿದೆ. "ಮುಕುಂದಯ್ಯ-ಚಿನ್ನಮ್ಮರ ಚರಿತ್ರೆ ವರ್ತಮಾನದ ಆಯಾಮವನ್ನು ಮೀರಿ ಭೂತ ಭವಿಷ್ಯತ್ತುಗಳಿಗೂ ಚಾಚುತ್ತದೆ, ಮುಕುಂದಯ್ಯ ಹತ್ತು ವರುಷದವನಿದ್ದಾಗ ಹಾಗೂ ಚಿನ್ನಮ್ಮ ಆರು ವರ್ಷದವಳಿದ್ದಾಗ ನಡೆದ ಘಟನೆ ಜನ್ಮಾಂತರದ ಕಥೆಯಾದುದರಿಂದ ಅದನ್ನು ನೋಡುವ ದೃಷ್ಟಿ ಬೇರೆಯಾಗಬೇಕಾಗುತ್ತದೆ".[೧] ಎನ್ನುವ ಮಾತು ಗಮನಾರ್ಹವಾದದ್ದು.

ದಾನಮ್ಮ ಹೆಗ್ಗಡತಿ ಮುಕುಂದಯ್ಯನನ್ನು ತೋರಿಸಿ ಯಾರು ಎಂದು ಕೇಳಿದಾಗ 'ಅವರು' ಎಂದು ಚಿನ್ನಮ್ಮ ಹೇಳುವುದು ವಿಶೇಷವಾಗಿ ಕಾಣುತ್ತದೆ. ನಿರೂಪಕರು ಹೇಳುವಂತೆ ಇವರಿಬ್ಬರ ಸಂಬಂಧ ಜನ್ಮಾಂತರದ್ದು. ತಾನು ಮತ್ತು ಮುಕುಂದಯ್ಯ, ಹಿಂದಿನ ಜನ್ಮದಲ್ಲಿ ದಂಪತಿಗಳಾಗಿದ್ದ ಭಾವ ಮನದಲ್ಲಿ ಮೂಡಿ ಅದರ ಅನುಭವವನ್ನೆ ಆಕೆ ಅಲ್ಲಿ ಹೇಳಿದ್ದಳು. ಮುಕುಂದಯ್ಯ ಹೂವಯ್ಯನಂತೆ ವಿದ್ಯಾವಂತನಲ್ಲದಿರಬಹುದು, ಆದರೆ ಗುತ್ತಿ ಹಾಗೂ ಐತನಿಗಿಂತ ಭಿನ್ನ ಎನ್ನಬಹುದಾದ, ಸಂಸ್ಕಾರದ ನೆಲೆಯಲ್ಲಿ ನಿಲ್ಲುವ ವ್ಯಕ್ತಿ. ಮುಕುಂದಯ್ಯ ಒಡೆಯನಾಗಿ ಮಾತ್ರ ಇಲ್ಲಿ ಚಿತ್ರಿತವಾಗಿಲ್ಲ. ಸ್ನೇಹಿತನಂತೆ, ಸಹಜ ಮಾನವ ಯಾಚಿಸುವ ಸಹಾಯ-ಸಹಕಾರವನ್ನು ಈತನಲ್ಲಿ ಕಾಣಬಹುದು. ಭರಮೈ ಹೆಗ್ಗಡೆ ಚಿನ್ನಮ್ಮನನ್ನು ವಿವಾಹವಾಗಲು ನಿರ್ಧರಿಸಿ ಬರೆದ ಪತ್ರದಿಂದ ಮುಕುಂದಯ್ಯನ ಕಾರ್ಯಚರಣೆ ಚುರುಕುಗೊಳ್ಳುತ್ತದೆ. ಮುಕುಂದಯ್ಯ ಹಾಗೂ ಚಿನ್ನಮ್ಮರ ಸಂಪ್ರದಾಯದ ವಿರುದ್ಧದ ಬಂಡಾಯ ಹೊರಗಿನ ಪ್ರೇರಣೆಯಾಗದೆ, ಒಳಗಿನ ಪ್ರೇರಣೆಯಾಗಿದೆ. ಅಂತರಂಗದಲ್ಲಿ ಹುಟ್ಟಿದ ಸಂಕಲ್ಪ ಶಕ್ತಿಯಿಂದಲೇ ಇದು ಪ್ರಕಟಗೊಳ್ಳುತ್ತದೆ. ಈ ಸಂಕಲ್ಪ ಶಕ್ತಿಗೆ ಗುತ್ತಿ ಐತ-ಪೀಂಚಲು ನೆರವಾದದ್ದು ಮಾನವರ ಬದುಕಿನ ಹೊಸ ಸಾಧ್ಯತೆಗೆ ಸಾಕ್ಷಿಯಾಗಿದೆ.

---

[೧] .ಕನ್ನಡ ಕಥನಸಾಹಿತ್ಯ: ಕಾದಂಬರಿ – ಜಿ.ಎಸ್.ಅಮೂರ:ಪು.ಸಂ.೧೦೧.

"ಅನ್ನಮಯ, ಪ್ರಾಣಮಯ ಈ ಕೋಶಗಳಲ್ಲಿನ ಅನುಭವದಲ್ಲಿ ಕುವೆಂಪು ಪ್ರಕಾರ ಯಾವುದೇ ತಾರತಮ್ಯವಿಲ್ಲ. ಅನ್ನಮಯ ಕೋಶಾವಸ್ಥೆಯನ್ನು ಕೀಳೆಂದು ತಿರಸ್ಕರಿಸುವುದಿಲ್ಲ ಆಹಾರ ಮತ್ತು ಕಾಮದಂಥ ಮೂಲಭೂತ ಅವಶ್ಯಕತೆಗಳನ್ನು ದಕ್ಕಿಸಿಕೊಳ್ಳುವ ಹೋರಾಟದಲ್ಲಿ ತೊಡಗುವ ಮಾನವ ಪ್ರಯತ್ನವನ್ನು ಕುವೆಂಪು ಭವ್ಯತೆಯ ನೆಲೆಗೇರಿಸುತ್ತಾರೆ"[೧] ಎನ್ನುವ ಉಕ್ತಿಗೆ ಬರೆದ ವ್ಯಾಖ್ಯಾನದಂತಿದೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'.

ಮುಕುಂದಯ್ಯ ಚಿನ್ನಮ್ಮರ ಪ್ರೀತಿ ನೆನ್ನೆಮೊನ್ನೆಯದಲ್ಲ ಅದು ಬಾಲ್ಯದಿಂದಲೂ ಬೆಳೆದ; ತಳವೂರಿದ ಬೃಹತ್ ವೃಕ್ಷದ ಬೇರಿನಂತಿದೆ. ಜೀವನದಲ್ಲಿರುವ ಅದಮ್ಯ ಕಾಳಜಿಯೇ ತಾನು ಒಲಿದವರನ್ನು ಸೇರಲು ಕುಟುಂಬ, ಸಮಾಜ, ಎಲ್ಲವನ್ನು ತೊರೆದು ವಿವಾಹದ ದಿನವೇ ಚಿನ್ನಮ್ಮ ಪಲಾಯನ ಮಾಡುವಂತೆ ಮಾಡುತ್ತದೆ. ಈ ಪಲಾಯನ ನಿಜಕ್ಕೂ ಅರ್ಥ ಹೀನವಲ್ಲ. ಶ್ರೇಷ್ಠಮಟ್ಟದ ಪ್ರೀತಿ–ಪ್ರೇಮಕ್ಕೆ ನಿದರ್ಶನವಾಗಬಲ್ಲ ಪಾತ್ರಗಳ ವಿಶ್ವಾಸಪೂರ್ವಕವಾದ ನಿಲುವು. ಬೇಟದ ಬೇಟೆಗಾಗಿ ತಾನು ಪ್ರಾಣಿಗಳನ್ನು ಬೇಟೆಯಾಡುವ ತಂತ್ರಗಳನ್ನು ರೂಪಿಸಿದ್ದರಿಂದಲೇ ಮುಕುಂದಯ್ಯ ಇಲ್ಲಿ ವಿಜಯಿಯಾಗುವಂತಾದದ್ದು.

ಪರಂಪರೆಯ ಮೌಲ್ಯಗಳನ್ನು ಸಂಪ್ರದಾಯಗಳನ್ನು ಮುರಿದು ಕಟ್ಟಬೇಕೆನ್ನುವುದು ನಿಜವಾದರೂ ಚಿನ್ನಮ್ಮನ ಓಡಿಹೋಗುವಿಕೆಯನ್ನು ಸಮರ್ಥಿಸುವುದು ಕಷ್ಟಸಾಧ್ಯ. ಆಧುನಿಕ ಹಾಗೂ ಉದಾರ ದೃಷ್ಟಿಕೋನದ ಮನಸ್ಸಿನಿಂದ ನೋಡಿದಾಗ ಮಾತ್ರ ಈ ನಿರ್ಧಾರ ಸರಿ ಎನ್ನುವ ನಿಲುವಿಗೆ ಬರಲು ಸಾಧ್ಯ. ತನಗೆ ಅನುರೂಪನಲ್ಲದ, ತಂದೆಯ ವಯಸ್ಸಿನ ಭರಮೈ ಹೆಗ್ಗಡೆಗೆ ವಿವಾಹ ಮಾಡಿಕೊಡುವ ಹುನ್ನಾರವನ್ನು ಗಮನಿಸಿದರೆ ಚಿನ್ನಮ್ಮನ ನಿರ್ಧಾರ ದೃಢವಾದದ್ದು ಎನ್ನಿಸದಿರಲಾರದು. ಆರ್ಥಿಕ ಸಮಸ್ಯೆಯ ನಿವಾರಣೆಗೆ ವೆಂಕಟಣ್ಣ ತನ್ನ ಮಗಳನ್ನು ವಿವಾಹ ಮಾಡಿಕೊಡುವುದು ಸರ್ವಸಮ್ಮತವೇ? ಇಲ್ಲ ಸಮರ್ಥಿಸಲು ಬರುವಂತದ್ದೇ? ಎನ್ನುವ ಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ. "ಮದುವೆಯ ವಿಷಯದಲ್ಲಿ ಹೆಣ್ಣಿನ ಅಭಿಪ್ರಾಯವನ್ನು ಕೇಳುವುದು ಅನಗತ್ಯ; ಹಿರಿಯರ ಅಣತಿಯನ್ನು ಆ ಹೆಣ್ಣು ಒಪ್ಪದಿರುವುದು ಅನೈತಿಕ ಎಂದೇ ಆ ಸಮಾಜ ಭಾವಿಸಿತ್ತು"[೨] ಎನ್ನುವ ಮಾತು ಅಕ್ಷರಶಃ ಇವತ್ತಿಗೂ ನಿಜವಾಗಿಯೇ ಉಳಿದಿದೆ.

ವ್ಯಕ್ತಿ ಸ್ವಾತಂತ್ರ್ಯವಿಲ್ಲದ ಈ ಜಡಸಮಾಜಕ್ಕೆ ನಿಜವಾದ ಕೊಡಲಿ ಪೆಟ್ಟನ್ನು ಚಿನ್ನಮ್ಮ ಕೊಟ್ಟಳು ; ಆ ಮೂಲಕ ಯುವ ಪೀಳಿಗೆಗೆ ಪ್ರೇರಣೆಯಾಗಿ ನಿಲ್ಲಬಲ್ಲಳು ಎನ್ನುವುದರಲ್ಲಿ

---

[೧] .ಕುವೆಂಪು ಪುನರ್ಮನನ : ಕುವೆಂಪು ಕಾದಂಬರಿಗಳಲ್ಲಿ 'ಪ್ರಕೃತಿ– ಸಂಸ್ಕೃತಿ ಪರಿಕಲ್ಪನೆ' – ಪ್ರೀತಿ ಶುಭಚಂದ್ರಾ ಪು.ಸಂ:೬೦.

[೨] .ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು – ಟಿ.ಪಿ.ಅಶೋಕ:ಪು.ಸಂ.೫೨.

ಸಂಶಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಮನಸ್ಸಿರುವಂತೆ ಅದಕ್ಕೆ ತನ್ನದೇ ಆದ ಆಸೆ ಆಕಾಂಕ್ಷೆ ಆಯ್ಕೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಇರಬೇಕು. ಇಲ್ಲವಾದರೆ ಈ ರೀತಿಯ ಬಂಡಾಯಗಳು ಅನಿವಾರ್ಯ. ಸಮಾಜದ ದೃಷ್ಟಿಯಲ್ಲಿ ವಿವಾಹದ ವಿಚಾರವಾಗಿ ಚಿನ್ನಮ್ಮ ಓಡಿಹೋದದ್ದು ಅನೈತಿಕ ಕಾರ್ಯವಾದರೆ, ತನ್ನ ಒಪ್ಪಿಗೆಯೇ ಇಲ್ಲದೆ ನಡೆಸುವ ವಿವಾಹವೆಂಬ ಪವಿತ್ರಕಾರ್ಯ ಅನೈತಿಕ ಮಾತ್ರವಲ್ಲ ಕ್ರೌರ್ಯ ಹಾಗೂ ಹಿಂಸೆಗಳ ಪರಮಾವಧಿ ಚಿನ್ನಮ್ಮ ಮುಕುಂದಯ್ಯರು ಮಾಡಿದ ಕಾರ್ಯವನ್ನು ಸಮರ್ಥಿಸುವಾಗಲೂ ಕಾದಂಬರಿ ಕಟ್ಟಿಕೊಡುವ ವಿವರಗಳಿಂದಾಗಿ ಈ ಪಾತ್ರಗಳಲ್ಲೂ ಕೆಲವು ದೌರ್ಬಲ್ಯಗಳನ್ನು ಗುರುತಿಸುವುದು ಅನಿವಾರ್ಯ.

"ಲೈಂಗಿಕ ಸಂಬಂಧವನ್ನು ಸಹಜವೆನ್ನಿಸುವಂತೆಯೇ ಮುಕುಂದಯ್ಯ-ಚಿನ್ನಮ್ಮ ಒಪ್ಪಿಕೊಂಡಿರುತ್ತಾರೆ. ಪ್ರಕೃತಿ ಹಾಗೂ ಸಂಸ್ಕೃತಿಗಳ ಬೆಸುಗೆಯಿಂದಾಗಿ ಚಿನ್ನಮ್ಮ ಮುಕುಂದಯ್ಯ ನಿರೂಪಕನ ದೃಷ್ಟಿಯಲ್ಲಿ ಆದರ್ಶ ವ್ಯಕ್ತಿಗಳಾಗುತ್ತಾರೆ"[೧] ಎನ್ನುವ ಮಾತನ್ನು ಸುಲಭವಾಗಿ ಒಪ್ಪಲಾಗುವುದಿಲ್ಲ. ಕಾರಣ ಲೈಂಗಿಕ ಸಂಬಂಧವನ್ನು ಸಹಜ ಎನ್ನಿಸುವಂತೆ 'ಮುಕುಂದಯ್ಯ ಚಿನ್ನಮ್ಮ' ಒಪ್ಪಿಕೊಂಡಿರುವುದಿಲ್ಲ ಎಂಬುದೇ ನಮ್ಮ ವಾದ. ಹಾಗೆ ನಡೆದುಕೊಂಡಿದ್ದ ಪಕ್ಷದಲ್ಲಿ ಇವರು ಗುತ್ತಿ ತಿಮ್ಮಿ, ಐತ-ಪೀಂಚಲುಗಳಿಗಿಂತ ಭಿನ್ನವಾಗಿ ನಿಲ್ಲುತಿರಲಿಲ್ಲ. ಗುತ್ತಿ-ತಿಮ್ಮಿಯರ ಪ್ರಜ್ಞೆಯ ಸ್ತರಕ್ಕೆ ನಿಲುಕದ ರೀತಿಯಲ್ಲಿ ವಿವಾಹಪೂರ್ವ ಸಂಬಂಧವನ್ನವರು ಹೊಂದಿದ್ದಾರೆ. ಹಾಗೆಯೇ ಪೀಂಚಲು ತನ್ನನ್ನು ಅರ್ಪಿಸಿಕೊಳ್ಳುವುದರಲ್ಲಿದ್ದಳು. ಆದರೆ ಮುಕುಂದಯ್ಯ ಚಿನ್ನಮ್ಮರು ಅನ್ಯರೊಟ್ಟಿಗೆ ಈ ಬಗೆಯ ಸಂಬಂಧ ಹೊಂದಿಲ್ಲ ಎನ್ನುವುದು ಗಮನಾರ್ಹ. ಪೀಂಚಲುವನ್ನು ಏಕಾಂತದಲ್ಲಿಯು ಕೂಡ ಮುಕುಂದಯ್ಯ ಬಯಸಲಿಲ್ಲ ಎಂದು ಕಾದಂಬರಿ ನಿರೂಪಿಸುವುದನ್ನು ನೋಡಿದರೆ ಆತ ಲೈಂಗಿಕ ಸಂಬಂಧವನ್ನು ಸಹಜವೆನ್ನುವಂತೆ ಸ್ವೀಕರಿಸಲಿಲ್ಲ ಎನ್ನಬೇಕಾಗುತ್ತದೆ. ಹಾಗೊಮ್ಮೆ ಸ್ವೀಕರಿಸಿದ್ದ ಎನ್ನುವುದಾದರೆ ಆತ ಪೀಂಚಲುವನ್ನು ಬಯಸದಿದ್ದದ್ದು ಅವನ ಮನೋಮಯವನ್ನು ಚಿನ್ನಮ್ಮ ಆವರಿಸಿದ್ದರಿಂದ ಮಾತ್ರ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೆ ಮುಕುಂದಯ್ಯ ಸಾಂಸ್ಕೃತಿಕವಾಗಿ ಲೈಂಗಿಕ ಸಂಬಂಧದ ಬಗ್ಗೆ ಪವಿತ್ರ ಭಾವನೆಯನ್ನು ಹೊಂದಿದ್ದ ಎನ್ನುವುದಕ್ಕೆ ಬಲವಾದ ಸಾಕ್ಷ್ಯಗಳು ಇರುವಂತೆ ಮುಕ್ತವಾಗಿ ಸ್ವೀಕರಿಸಿದ್ದ ಎನ್ನುವುದಕ್ಕಿಲ್ಲ.

"ಮದುವೆಯ ಮೊದಲೇ ಕೈಕೊಳ್ಳುವ ನಿರ್ಣಯ ಸಾಮಾಜಿಕ ನೀತಿಗೆ ವಿರುದ್ಧವಾಗಿದ್ದರೂ ಮುಕುಂದಯ್ಯ ಅದನ್ನು ಲೆಕ್ಕಿಸುವುದಿಲ್ಲ. ಎಲ್ಲ ವಿಧದಲ್ಲಿಯೂ ಚಿನ್ನಮ್ಮ

[೧] .ಕನ್ನಡ ಕಥನ ಸಾಹಿತ್ಯ :ಕಾದಂಬರಿ – ಜಿ.ಎಸ್.ಅಮೂರ:ಪು.ಸಂ.೧೦೩.

ಅವನ ಹೆಂಡತಿಯೇ ಆಗಿರುತ್ತಾಳೆ"[೧] ಎನ್ನುವುದನ್ನು ಸಮರ್ಥಿಸಲಾಗದು. ಮದುವೆಗೆ ಮುನ್ನ ದೇಹಸಂಬಂಧವನ್ನು ನಮ್ಮ ಭಾರತೀಯ ಸಮಾಜ ಒಂದು ಪ್ರಬಲ ದೌರ್ಬಲ್ಯ; ದೋಷ ಎಂದೆ ಪರಿಗಣಿಸಿರುವುದು ಇದಕ್ಕೆ ಮುಖ್ಯ ಕಾರಣ. "ಮನಸ್ಸೆಂಬ ಕಾಡನ್ನು ಗೆಲ್ಲಬೇಕಾದ ಸಾಹಸ ಕಥನವೇ ಸಂಸ್ಕೃತಿಯ ಇತ್ಯಾತ್ಮಕ ನಿರ್ವಚನವಾಗುತ್ತದೆ"[೨] ಎಂಬ ವ್ಯಾಖ್ಯಾನಕ್ಕೆ ಮುಕುಂದಯ್ಯ ಪೂರಕವಾಗಿಲ್ಲ. ಈ ವಿಷಯದಲ್ಲಿ ಆತ ಸೋತಿದ್ದಾನೆ ಎನ್ನುವುದರಲ್ಲಿ ಅರ್ಥವಿದೆ. ಕೂಡ. ಈ ಸಂದರ್ಭದಲ್ಲಿ ಪ್ರಬಲ ಪ್ರಶ್ನೆಗಳು ಏಳಬಹುದು. ಚಿನ್ನಮ್ಮ-ಮುಕುಂದಯ್ಯರು ಸಾಮಾಜಿಕ ಹಾಗೂ ಸಾಂಪ್ರದಾಯಿಕ ಮೌಲ್ಯವನ್ನೇ ಧಿಕ್ಕರಿಸಿ, ಓಡಿಹೋದ ಪ್ರಕರಣವನ್ನು ಸಮರ್ಥಿಸುತ್ತ ; ದೇಹ ಸಂಬಂಧಗಳಲ್ಲಿ ಮಾತ್ರ ಪಾವಿತ್ರ್ಯ ಕಾಪಾಡಿಕೊಳ್ಳಬೇಕಾಗಿತ್ತೆನ್ನುವುದು ಬಹುತೇಕರಿಗೆ ಸರಿಯಲ್ಲವೆನಿಸಬಹುದು. ಆದರೆ ಓಡಿಹೋಗುವಿಕೆ ಪೂರ್ಣವಾಗಿ ದೇಹಸಂಬಂಧದ ಆಶಯವನ್ನು ಮರೆತು ಅದಕ್ಕಿಂತ ಮಿಗಿಲಾದ 'ಪ್ರೀತಿ-ಪ್ರೇಮ'ಗಳ ಸ್ತರದಲ್ಲಿ ನಡೆಯುವ ಕ್ರಿಯೆಯಾಗಿರುವುದರಿಂದ ತಾವು ಇಷ್ಟಪಟ್ಟವರೊಟ್ಟಿಗೆ ಫಲಾಯನ ಮಾಡುವುದು ಸರಿಯೆಂದಷ್ಟೇ ಹೇಳಲಾಗಿದೆ. ಇಂತಹ ಸಂದರ್ಭದಲ್ಲಿ ದೈಹಿಕ ಸಂಬಂಧವನ್ನು ಸಮರ್ಥಿಸುವುದೇ ಆದ ಪಕ್ಷದಲ್ಲಿ 'ವಿವಾಹ' ಎನ್ನುವ ಧಾರ್ಮಿಕ ಕ್ರಿಯೆ ಹಾಗೂ ಸಾಮಾಜಿಕ ಒಪ್ಪಂದಕ್ಕೆ ಅರ್ಥವಿರುವುದಿಲ್ಲ ಎಂಬುದಷ್ಟೆ ನಮ್ಮ ಕಾಳಜಿಯಾಗಿದೆ.

ಭಾರತೀಯ ಸಂಸ್ಕೃತಿಗೆ ಈ ಬಗೆಯ ವಿವಾಹಪೂರ್ವ ಲೈಂಗಿಕ ಸಂಬಂಧ ಎನ್ನುವುದು ಕಪ್ಪು ಚುಕ್ಕಿಯೇ ಸರಿ. ಲೈಂಗಿಕತೆ ಪ್ರಕೃತಿಯಲ್ಲಿ ಒಂದು ಸಹಜ ಕ್ರಿಯೆ. ಭೂಮಿ ಮೇಲಿರುವ ಪ್ರತಿ ಚರಾಚರವು ತನ್ನ ವಂಶಾಭಿವೃದ್ಧಿಗಾಗಿ ತನ್ನ ಪೀಳಿಗೆಯನ್ನು ಮುಂದುವರೆಸಿಕೊಂಡು ಹೋಗಲು ಸಂತಾನಾಭಿವೃದ್ಧಿ ಅವಶ್ಯವೆನಿಸಿದೆ. ಸಂತಾನಾಭಿವೃದ್ಧಿ ಜೀವಿಗಳ ಮುಖ್ಯ ಕ್ರಿಯೆಗಳಲ್ಲಿ ಒಂದು. ಲೈಂಗಿಕ ಕ್ರಿಯೆ ಸಜೀವಿಗಳ ಜೀವನದ ಪ್ರಮುಖ ಭಾಗ. ಭೂಮಿಯ ಮೇಲೆ ಹುಟ್ಟುವ ಪ್ರತಿ ಜೀವಿಗೂ ಸಾವಿದೆ. ಜೀವಸಂಕುಲ ಉಳಿಸಿ ಬೆಳೆಸಿಕೊಂಡು ಹೋಗಲು ಪ್ರಕೃತಿ ಕೊಟ್ಟ ವರವಾಗಿದೆ. ಲೈಂಗಿಕ ಕ್ರಿಯೆ ಇದನ್ನು ಸಮರ್ಪಕ ಹಾಗೂ ಮೌಲ್ಯ ವಿಧಾನದ ಮೂಲಕ ಬಳಸಿಕೊಳ್ಳಬೇಕಾಗಿರುವುದು ಮಾನವ ಜನಾಂಗದ ಕರ್ತವ್ಯ.

"ಪ್ರೀತಿಯೇ ಮಾನವನ ಅಸ್ತಿತ್ವದ ಸಮಸ್ಯೆಗೆ ಏಕೈಕ ತಾರ್ಕಿಕ ಉತ್ತರವೆಂದು ಖಚಿತವಾಗಿ ನಂಬಿರುವ ಜನರು, ಪ್ರೀತಿಯು ಸರ್ವವ್ಯಾಪಿಯಾದ ಸಾಮಾಜಿಕ ಸಂಗತಿಯಾಗಬೇಕಾದರೆ ನಮ್ಮ ಸಮಾಜ ರಚನೆಯಲ್ಲಿ ಅನೇಕ ಮಹತ್ವದ ಮತ್ತು ಮೂಲಭೂತ ಬದಲಾವಣೆಗಳು ಅವಶ್ಯಕವೆಂಬ

---

[೧] .ಕನ್ನಡ ಕಥನ ಸಾಹಿತ್ಯ: ಕಾದಂಬರಿ – ಜಿ.ಎಸ್.ಆಮೂರ:ಪು.ಸಂ.೧೦೩.
[೨] . ಕುವೆಂಪು ಪುನರ್ಮನನ : ಕುವೆಂಪು ಕಾದಂಬರಿಗಳಲ್ಲಿ 'ಪ್ರಕೃತಿ– ಸಂಸ್ಕೃತಿ ಪರಿಕಲ್ಪನೆ' – ಪ್ರೀತಿ ಶುಭಚಂದ್ರಾ ಪು.ಸಂ:೬೩.

ತೀರ್ಮಾನವನ್ನು ಒಪ್ಪಿಕೊಳ್ಳಬೇಕಾಗುತ್ತದೆ".[೧] ಶಿಲಾಯುಗದ ಅಲೆಮಾರಿ ಮಾನವನಿಗೆ ಇಂದಿನ ಈ ಬಗೆಯ ಯಾವುದೇ ಕಟ್ಟುಪಾಡುಗಳಿರಲಿಲ್ಲ. ವೈವಾಹಿಕ ಜೀವನ ಅವರ ತಿಳುವಳಿಕೆಗೆ ಮೀರಿದ್ದಾಗಿತ್ತು. ಇದರಿಂದ ಪ್ರಾಪ್ತ ವಯಸ್ಕ, ಸ್ತ್ರೀ-ಪುರುಷರು ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಿದ್ದರು. ಕ್ರಮೇಣ ಮಾನವ ಸಮಾಜವನ್ನು ಕಟ್ಟಿದ. ಇದರ ಬೆನ್ನಲ್ಲೇ ಎಲ್ಲರೂ ಒಪ್ಪುವ ತನ್ನ ತಿಳುವಳಿಕೆಗೆ ಸರಿಯೆನಿಸಿದ ಕೆಲವು ಕಟ್ಟುಪಾಡುಗಳನ್ನು ನಿರ್ಮಿಸಿಕೊಂಡ. ಆಗ ವಿವಾಹದ ಪರಿಕಲ್ಪನೆ ಜನ್ಮತಾಳಿತು. ಇದರಿಂದ ವಿವಾಹದ ಮೂಲಕ ಪರಸ್ಪರ ಬಂಧನದಲ್ಲಿ ಒಂದಾದ ದಂಪತಿಗಳಿಗೆ ಸೂಕ್ತ ಲೈಂಗಿಕತೆಗೆ ಅವಕಾಶ ದೊರಕಿಸಿಕೊಡಲಾಯಿತು.

ಅದರಂತೆ ವಿವಾಹವು ಈ ದಿಸೆಯಲ್ಲಿ ಒಂದು ಮಹತ್ವದ ಸ್ಥಾನ ಗಿಟ್ಟಿಸಿಕೊಂಡಿತು. ಲೈಂಗಿಕತೆಗೆ ಸಮಾಜದಲ್ಲಿ ತನ್ನದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ಚೌಕಟ್ಟನ್ನು ಒದಗಿಸಲಾಯಿತು. ವಿವಾಹದ ನಂತರದ ಲೈಂಗಿಕತೆ ಸಂಸ್ಕೃತಿಗೆ ಒಂದು ಮೆರಗು ನೀಡಿದುದಲ್ಲದೆ ಕುಟುಂಬ ವ್ಯವಸ್ಥೆಯ ಪರಸ್ಪರ ಸಹಕಾರ ಸಹಬಾಳ್ವೆಗೆ ನಾಂದಿ ಹಾಡಿತು. ಇದರಿಂದ ಸ್ತ್ರೀಗೆ ಪುರುಷನ ರಕ್ಷಣೆ ದೊರೆತು ಅವಳಿಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ವದ ಸ್ಥಾನ ದೊರೆಯಿತು. ಭಾರತೀಯ ಸಮಾಜದಲ್ಲಿ ಸ್ತ್ರೀ-ಪುರುಷರು ಪರಸ್ಪರರ ಪ್ರೀತಿ-ಪ್ರೇಮ ವಿಶ್ವಾಸಗಳಿಂದ ಸುಖ ದುಃಖದಲ್ಲಿ ಭಾಗಿಯಾಗುವೆವು ಎಂದು ಪ್ರಮಾಣ ಮಾಡುವ ಮೂಲಕ 'ಮದುವೆ' ಎಂಬ ಪವಿತ್ರ, ಪರಿಶುದ್ಧ ಬಂಧನಕ್ಕೆ ಪಾದಾರ್ಪಣೆ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿ ಪರಂಪರೆ ಇಡೀ ವಿಶ್ವಕ್ಕೆ ಮಾದರಿ ಎಂಬ ಸರ್ವೇ ಸಾಮಾನ್ಯ ತಿಳುವಳಿಕೆ ಇದೆ. ಕುಟುಂಬ ಹಾಗೂ ಸಮಾಜದಲ್ಲಿ ವಿವಾಹ ವಹಿಸಬಹುದಾದ ಪಾತ್ರವನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಕ್ಕೆ ಚಿನ್ನಮ್ಮ-ಮುಕುಂದಯ್ಯರ ಪಾತ್ರಗಳು ಪ್ರೇರಣೆಯಾಗಿವೆ.

ಯುವ ತರುಣ-ತರುಣಿಯರು ಒಂದಾಗುವಲ್ಲಿ ಎದುರಾಗುವ ಸಮಸ್ಯೆಗೆ ಸಾಮಾನ್ಯವಾಗಿ ಎರಡು ರೀತಿಯ ಪರಿಹಾರಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ. ಒಂದು ಜೀವನ ಮುಖವಾಗಿ ಬಂಡಾಯ ಏಳುವುದು; ಇಲ್ಲವೇ ಜೀವನಕ್ಕೆ ವಿರುದ್ಧವಾಗಿ ಬಂಡಾಯ ಏಳುವುದು. ಒಂದಾದ ಮನಸ್ಸುಗಳೆರಡು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕು ಇಲ್ಲವೆ ಪ್ರಾಣಾರ್ಪಣೆ ಮಾಡಬೇಕು. ಆದರೆ ಇಲ್ಲಿ ಮುಕುಂದಯ್ಯ ಒಬ್ಬ ಕಾಡಿನ ವೀರನಂತೆ ಸಾಹಸ ಕಾರ್ಯದಲ್ಲಿ ತೊಡಗಿ ಚಿನ್ನಮ್ಮನನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ. ಇದು ಬಂಡಾಯದ ಮೊದಲ ಹಂತವಾದರೆ; ಚಿನ್ನಮ್ಮನೊಟ್ಟಿಗೆ ವಿವಾಹ ಪೂರ್ವದಲ್ಲಿ ಹೊಂದುವ ಲೈಂಗಿಕ ಸಂಬಂಧ

---

೧. ಎರಿಕ್ ಫ್ರಾಂನ ಆರ್ಟ್ ಆಫ್ ಲಿವಿಂಗ್/ಪ್ರೀತಿಸುವುದೆಂದರೆಅ ...ಅನು:ಕೆ.ವಿ.ನಾರಾಯಣ, ಎಚ್.ಎಸ್.ರಾಘವೇಂದ್ರರಾವ್: ಪು.ಸಂ.೧೧೨.

ಮತ್ತೊಂದು ಬಗೆಯ ಬಂಡಾಯವಾಗಿಯೇ ನಿಲ್ಲುತ್ತದೆ. ಚಿನ್ನಮ್ಮನಿಗೆ ಬಾಲ್ಯದಲ್ಲಿ 'ಅವರು' ಎಂಬಂತೆ ಕಂಡಿದ್ದ ಭಕ್ತಿ-ಭಾವನೆ ಮರೆಯಾಗಿ 'ಅವನು' ಎಂಬ ಏಕವಚನದ ರೂಪ ಏಕಕಾಲಕ್ಕೆ ಅವರಿಬ್ಬರ ಆತ್ಮೀಯತೆ ಹಾಗೂ ಸಲುಗೆಗೆ ಸಾಕ್ಷಿಯಾಗಿದೆ. ಈ ವಿಷಯವಾಗಿ ನಿರಾಕರಣೆ ಹಾಗೂ ಸಮರ್ಥನೆಗೆ ಆತನಿಗೆ ಎದುರಾದ ಸಾಮಾಜಿಕ ಸಮಸ್ಯೆಗಳ ಹಿನ್ನೆಲೆಯಲ್ಲೇ ಪರಿಹಾರ ಕಂಡುಕೊಳ್ಳುವುದು ಉಚಿತ. ಒಟ್ಟಾರೆ ಮುಕುಂದಯ್ಯನಲ್ಲಿ ಸಂಸ್ಕೃತಿಯ ಆದರ್ಶಕ್ಕಿಂತ ಮುಖ್ಯವಾಗಿ ಪ್ರಾಕೃತಿಕ ಬಯಕೆಗಳೇ ಮುಖ್ಯವಾಗಿ ಕಾಣಿಸುತ್ತವೆ. ಹೆಣ್ಣು ಅಧೀನತೆಯಿಂದ ಬಿಡಿಸಿಕೊಂಡು ಸ್ವತಂತ್ರ ನಿರ್ಧಾರವನ್ನು ಕೈಗೊಳ್ಳುವ ಪ್ರಕ್ರಿಯೆಯನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ತಾವು ಬಯಸಿದವರನ್ನೇ ಪಡೆದವೆನ್ನುವ ಆತ್ಮತೃಪ್ತಿ, ಗುತ್ತಿ-ತಿಮ್ಮಿ ಹಾಗೂ ಚಿನ್ನಮ್ಮ-ಮುಕುಂದಯ್ಯರಲ್ಲಿರುವ ವಿಶ್ವಾಸ ಮುಂದಿನ ಬದುಕಿಗೆ ತಳಪಾಯದಂತಿದೆ. "ಈ ಕಾದಂಬರಿಯ ಪ್ರಣಯದ ಸಮಗ್ರತೆಯ ಅರಿವಾಗಬೇಕಾದರೆ ಭರಮೈ ಹೆಗ್ಗಡೆ, ಚೀಂಕ್ರ ಸೇರೆಗಾರ ಪಿಜಿಣ, ಅಕ್ಕಣಿ, ದೇಯಿ, ಕಾವೇರಿ ಮೊದಲಾದವರ ವಿಕೃತ ಕಾಮದ ಅಸಫಲ ಪ್ರಣಯದ ಅನುಭವ ಕೂಡ ಅಗತ್ಯವಾಗಿದೆ."[೧]

ಬಡತನ ಹಾಗೂ ಅಭದ್ರತೆ ವ್ಯಕ್ತಿಯ ವ್ಯಕ್ತಿತ್ವವನ್ನೇ ಬದಲಾಯಿಸಬಲ್ಲದೆಂಬುದಕ್ಕೆ, ಅಕ್ಕಣಿ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ್ದು ಒಂದು ಉತ್ತಮ ಉದಾಹರಣೆ. ಪಿಜಿಣನ ಮೇಲಿನ ಪ್ರೇಮ ಹಾಗೂ ಸೆರೆಗಾರ ಚೀಂಕ್ರನ ಕಾಮಗಳ, ಮನಶಾಸ್ತ್ರೀಯ ತೊಯ್ದಾಟಗಳಿಗೂ ಅಕ್ಕಣಿ ಎದುರು ಬದುರಾಗಿ ನಿಲ್ಲುತ್ತಾಳೆ. ಪಿಜಿಣನ ಸಾವು ಬದುಕಿನ ನಡುವೆ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಗ ಚೀಂಕ್ರನೊಟ್ಟಿಗೆ ಸೇರುವುದು ಈ ಪಾತ್ರದ ಸಂಕೀರ್ಣತೆಯನ್ನು ಹೇಳುತ್ತದೆ. ಪಿಜಿಣವನ್ನು ಗಾಢವಾಗಿ ಪ್ರೀತಿಸಿದರು ಆತನಿಂದ ದೊರೆಯದ ಸುಖವನ್ನು ಚೀಂಕ್ರನಿಂದ ಪಡೆಯುತ್ತಾಳೆ. ಚೀಂಕ್ರನಿಂದ ತನ್ನ ಪತಿಗೆ ದೊರೆಯುತ್ತಿದ್ದ ಔಷಧಕೂಡ ಈ ಬಗೆಯ ಕೃತ್ಯಕ್ಕೆ ಅಕ್ಕಣಿಯನ್ನು ತಳ್ಳಿದೆ. ಪಿಜಿಣನ ಆತ್ಮಹತ್ಯೆ ದೇಹಬಾಧೆಯನ್ನು ತಾಳಲಾರದೆ ಮಾಡಿಕೊಂಡಿದ್ದೆ ಅಥವಾ ತಾನು ಬದುಕಿರುವಾಗಲೇ ತನ್ನ ಪತ್ನಿ ಬೇರೊಬ್ಬರ ಸ್ವತ್ತಾದಳಲ್ಲ ಎನ್ನುವ ಕಾರಣಕ್ಕೆ ಎಂಬುದು ಪ್ರಶ್ನೆಯಾಗಿದೆ. ಕಾದಂಬರಿ ಪಿಜಿಣನ ಕೃತ್ಯಕ್ಕೆ ನೇರವಾದ ಕಾರಣವೇನನ್ನು ಹೇಳದೆ ಮೌನವಹಿಸಿದೆ.

ಪಿಜಿಣನ ಸಾವು ನಿಜಕ್ಕೂ ಅಕ್ಕಣಿಯಲ್ಲಿ ಜಾಗೃತ ಪ್ರಜ್ಞೆಯನ್ನು ತರುತ್ತದೆ. ಚೀಂಕ್ರನನ್ನು ತಿರಸ್ಕರಿಸುವುದರ ಮೂಲಕ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಾಳೆ. ಆದರೆ ಮೇಲ್ವರ್ಗದ

[೧] .ವಿಮರ್ಶೆಯ ವಿನಯ: ಕಾದಂಬರಿ: ಕುವೆಂಪು ಅವರ ಮಲೆಗಳಲ್ಲಿ ಮದುಮಗಳು-ಕೀರ್ತಿನಾಥ ಕುರ್ತಕೋಟಿ:ಪು.ಸಂ.೧೨೧.

ರಂಗಪ್ಪಗೌಡನೊಟ್ಟಿಗೆ ಮತ್ತೆ ಸೇರುವುದು ಮೊದಲೇ ಹೇಳಿದಂತೆ ಪರಿಸ್ಥಿತಿಯ ಒತ್ತಡವೇ ಆಗಿದೆ. ಮುಕುಂದಯ್ಯ ಹಾಗೂ ಚಿನ್ನಮ್ಮರು ಓಡಿ ಹೋದ ಸಂಗತಿ ಅನೈತಿಕ ಎಂದು ಘೋಷಿಸಬಲ್ಲ ರಂಗಪ್ಪಗೌಡನಿಗೆ ತಾನೇ ಸ್ವತಃ ಅನೈತಿಕ ಕಾರ್ಯವೆಸಗುತ್ತಿದ್ದೇನೆ ಎನ್ನುವ ಅರಿವಿಲ್ಲ. ಇದೊಂದು ಬಗೆಯ ದ್ವಂದ್ವದಿಂದ ಕೂಡಿದ ವ್ಯಂಗ್ಯವೇ ಸರಿ. ಅಕ್ಕಣಿ ಕೀಳು ಅಭಿರುಚಿಯ ಕಾಮದ ಆಸೆಗೆ ಪ್ರಯತ್ನಿಸುತ್ತಿಲ್ಲ. ಬದುಕಲು ಏನಾದರೊಂದು ದಾರಿ ಹಿಡಿಯಲೇ ಬೇಕಾದ ಸ್ಥಿತಿಗೆ ಮುಂದಾಗಿದ್ದಾಳೆಯಷ್ಟೇ. ವ್ಯವಸ್ಥೆಯ ವಿಷ ವರ್ತುಲಕ್ಕೆ ಸಿಕ್ಕಿಯೂ ಆಕೆ ಪಿಜಿಣನ ಮೇಲೆ ಹೊಂದಿದ ಪ್ರೀತಿ ಹಾಗೂ ಅನುಕಂಪ ದಾಂಪತ್ಯ ಜೀವನವನ್ನು ಕೆಲಕಾಲದ ಮಟ್ಟಿಗಾದರೂ ಸಾರ್ಥಕಗೊಳಿಸಿದೆ. "ಅಕ್ಕಣಿ ಚೀಂಕ್ರನಿಗೆ ಒಪ್ಪಿಸಿಕೊಳ್ಳುವುದು ನೈಸರ್ಗಿಕ ಕ್ರಿಯೇಯಾಗಿರದೆ, ಪರಿಸ್ಥಿತಿಯ ಒತ್ತಡದ ಪರಿಣಾಮವಾಗಿರುವುದರಿಂದ ಅವಳಲ್ಲಿ ಪಿಜಿಣನ ಸಾವು ಪಾಪ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ"[೧] ಎನ್ನುವ ಮಾತು ವಿಚಾರಾರ್ಹ.

ಕಾದಂಬರಿಯ ಆರಂಭದಲ್ಲೆ ಬರುವ ಭರಮೈ ಹೆಗ್ಗಡೆ ಸ್ವತಃ ಗುಹ್ಯ ರೋಗಿ. ಆದರೆ ತನ್ನ ಪೌರುಷವನ್ನು ಯಾರ ಮೇಲಾದರೂ ಪ್ರದರ್ಶಿವುದಷ್ಟೇ ಅವನಿಗೆ ಮುಖ್ಯವಾಗಿದೆ. ಇದಕ್ಕಾಗಿ ಅವನು ಒಂದು ಹೆಣ್ಣನ್ನು ವಿವಾಹವಾಗಬೇಕಾಗಿರುವುದು ಅನಿವಾರ್ಯವಾಗಿದೆ. ಆ ಹೆಣ್ಣು ತನ್ನ ಸಾಮಾಜಿಕ ಸ್ತರಕ್ಕೆ ಸೇರಿದವಳಾದರೆ ಸಾಕೆನ್ನುವವನು ಈಗಾಗಲೇ ಜಟ್ಟಮ್ಮನಂತಹ ದೃಢಕಾಯ ಹೆಂಗಸನ್ನು ಮದುವೆಯಾಗಿದ್ದರೂ ಗಂಡು ಸಂತಾನದ ನೆಪವೊಡ್ಡಿ ಮರುಮದುವೆಗೆ ಮುಂದಾಗುತ್ತಾನೆ. ಆ ಹೆಣ್ಣು 'ಮಗಳ' ಸಮನಾದರೂ ಚಿಂತೆಯಿಲ್ಲ. ಭರಮೈ ಹೆಗ್ಗಡೆ ತನ್ನ ಪೌರುಷದ ಹಪಹಪಿಯನ್ನು ಪೂರೈಸಿದರೆ ಸಾಕಾಗಿದೆ. ಚಿನ್ನಮ್ಮನ ತಂದೆಯ ಆರ್ಥಿಕ ದುಸ್ಥಿತಿ ತಿಳಿದು ತನ್ನ ಕಾರ್ಯ ಸಾಧನೆಗೆ ಮುಂದಾಗುತ್ತಾನೆ. ಇದಕ್ಕೆಲ್ಲ ಉತ್ತರವೆಂಬಂತೆ ಚಿನ್ನಮ್ಮ ಹಾಗೂ ಮುಕುಂದಯ್ಯ ನಿರ್ಧಾರ ತೆಗೆದುಕೊಳ್ಳುವುದು ಸ್ವಾತಂತ್ರ್ಯ ಧೋರಣೆಯಾಗಿದೆ.

ವಿಧವೆ ನಾಗಕ್ಕ ಪಾತಿವ್ರತ್ಯ ಧರ್ಮವನ್ನೇ ನೆಚ್ಚಿದವಳು; ಆದರೆ ನಾಗತ್ತೆ ತಮ್ಮ ಆರ್ಥಿಕ ದೌರ್ಬಲ್ಯದಿಂದ ದೂರವಾಗಲು ವೆಂಕಟಣ್ಣನಿಗೆ ಕೂಡಿಕೆ ಮಾಡಲು ಮುಂದಾಗುತ್ತಾಳೆ. ಈಗಾಗಲೇ ಎರಡು ಮದುವೆಯಾಗಿರುವ ನಾಗಕ್ಕ ದುಡಿದು ತಿನ್ನಲು ಇಷ್ಟಪಡುವವಳೇ ವಿನಾ ಮತ್ತೊಂದು ಮದುವೆಯನ್ನಲ್ಲ. ನಾಗತ್ತೆ ಮಾಡುವ ಕೃತ್ಯ ನಿಜಕ್ಕೂ ಕ್ಷಮಿಸಲಾಗದ ತಪ್ಪೇ ಸರಿ. ನಾಗಕ್ಕನಿಗೆ ಪ್ರಜ್ಞೆ ತಪ್ಪಿಸಿ ವೆಂಕಟಣ್ಣನೊಂದಿಗೆ ಸೇರಿಸುವ ಕೀಳು ಕಾರ್ಯ ನಿಜಕ್ಕೂ ಅಪರಾಧ. ಪಾತಿವ್ರತ್ಯವನ್ನು ಒಂದು ಮೌಲ್ಯವೆಂದು ಸ್ವೀಕರಿಸಿದ ನಾಗಕ್ಕನಿಗೆ ದೊರೆತದ್ದು ಅಪವಿತ್ರತೆಯ

---

[೧] .ಕನ್ನಡ ಕಥನ ಸಾಹಿತ್ಯ: ಕಾದಂಬರಿ – ಜಿ.ಎಸ್.ಅಮೂರ:ಪು.ಸಂ.೯೫.

ಸೋಂಕು. ಮನಸ್ಸಿಗೆ ವಿರುದ್ಧವಾದ ನಾಗಕ್ಕ ವೆಂಕಟಣ್ಣರ ಸಂಬಂಧ ನಾಗಕ್ಕನ ಪಾಲಿಗೆ ದಿನನಿತ್ಯದ ಅತ್ಯಾಚಾರವೇ ಆಗಿಬಿಡುತ್ತದೆ. ವೆಂಕಟಣ್ಣನ ಕಾಮುಕ ಪ್ರವೃತ್ತಿ ಆತನ ಕೀಳು ಅಭಿರುಚಿಗೆ ಹಿಡಿದ ಕೈಗನ್ನಡಿ. ಈತನಿಗೆ ಕ್ಷಮೆಯೇ ಇಲ್ಲ; ಆದರೆ ಮರಣವೇ ಆತನನ್ನು ಹಿಡಿದಿಡಬಲ್ಲ ಶಕ್ತಿಯಾಗುತ್ತದೆ. ವೆಂಕಟಣ್ಣನ ಕೃತ್ಯವನ್ನು ವಿರೋಧಿಸಿ ಬಂಡೇಳಬಲ್ಲ ಧೈರ್ಯ ನಾಗಕ್ಕನಲ್ಲಿದ್ದರೂ ಚಿನ್ನಮ್ಮನ ನಿಶ್ಕಲ್ಮಶ ಪ್ರೀತಿ ಆಕೆಗೆ ಗೊತ್ತಿಲ್ಲದಂತೆಯೇ ಅದನ್ನು ನಿಯಂತ್ರಿಸಿಬಿಟ್ಟಿದೆ.

ತಿಮ್ಮಪ್ಪ ಹೆಗ್ಗಡೆ ಸಹ ವಿಚಿತ್ರ ಬಗೆಯ ಪ್ರಣಯಕ್ಕೆ ಮುಂದಾದವನೇ. "ಅವನ ಹಾಗೆಯೇ ತಿಮ್ಮಪ್ಪ ಹೆಗ್ಗಡೆಯ ಸ್ಥಿತಿ ಇದ್ದರೂ ಕಾರಣಗಳು ಬೇರೆ. ನೋಡಲು ಕುರೂಪಿ, ಸ್ವಭಾವದಿಂದ ಒರಟಾದ ತಿಮ್ಮಪ್ಪ ಹೆಗ್ಗಡೆಗೆ ಹೆಣ್ಣು ಕೊಡಲು ಯಾರೂ ಸಿದ್ಧರಿಲ್ಲ. ಅವನದು ತೀರ ಪ್ರವೃತ್ತಿ ನೆಲೆಯ ಲೈಂಗಿಕ ತುರ್ತು".[೧] ಈತನ ವ್ಯಕ್ತಿತ್ವ ಎಂತಹದೆಂದರೆ ಈತನನ್ನು ನೋಡಿದರೆ ಸ್ತ್ರೀಯರು ಮನೆಯಿಂದ ಹೊರಬೀಳದ ಸ್ಥಿತಿಯಲ್ಲಿರುತ್ತಾರೆ. ತನ್ನ ಕಾಮ ತೃಷೆಗೆ ಯಾವುದಾದರೂ ಒಂದು ಹೆಣ್ಣಾದರೆ ಸಾಕೆನ್ನುವ ಪಶುಪ್ರವೃತ್ತಿಯವನು. ಆದರೆ ಮದುವೆಯೆಂಬ ಸಾಮಾಜಿಕ ಸಂಬಂಧವನ್ನು ಸಹ ಹೊಂದಬೇಕೆನ್ನುವ ಅಭೀಪ್ಸೆ ಕೂಡ ಈತನಲ್ಲಿದೆ. ಭರಮೈ ಹೆಗ್ಗಡೆ ತಂಗಿ ಲಕ್ಕಮ್ಮನ ಹೊರತಾಗಿ ಬೇರೊಂದು ಹೆಣ್ಣು ಇಲ್ಲದಿರುವುದೇ ಈತನಿಗಿರುವ ಸಮಸ್ಯೆ. ಇದರ ನಿವಾರಣೆಗಾಗಿಯೇ ಈತ ಮುಕುಂದಯ್ಯನ ಪ್ರಕರಣಕ್ಕೆ ನೆರವಾಗಲು ಮುಂದಾಗುವುದು. ಪ್ರಣಯದ ಪೂರೈಕೆಗಾಗಿ ತಿಮ್ಮಪ್ಪ ಹೆಗ್ಗಡೆ ಹಿಡಿಯುವ ದಾರಿ ಆದರ್ಶ ನೆಲೆಯದ್ದಾಗದೆ, ಕಾಮುಕ ಭಾವನೆಯದೆ ಆಗಿದೆ.

ಕಾದಂಬರಿಯಲ್ಲಿ ಬರುವ ಮತ್ತೊಂದು ಮುಖ್ಯ ಪಾತ್ರವಾದ ದೇವಯ್ಯ ತನ್ನ ಬಹು ಪ್ರಣಯಕ್ಕೆ ಮತಾಂತರ ನೆರವಾಗುತ್ತದೆ ಎನ್ನುವ ಸ್ಥಿತಿಯಲ್ಲಿ ಇರುತ್ತಾನೆ. ದೇವಯ್ಯ ದೇವಮ್ಮನೊಟ್ಟಿಗೆ ಕೌಟುಂಬಿಕ ಚೌಕಟ್ಟಿನಲ್ಲಿ ಪ್ರಣಯವನ್ನು ಅನುಭವಿಸಿದವನೇ. ಆದರೆ ಆತನ ಅತಿಯಾದ ರತ್ಯಾಸಕ್ತಿಯಿಂದಾಗಿ ಕಾವೇರಿಯೊಟ್ಟಿಗೆ ಸಂಬಂಧ ಹೊಂದುತ್ತಾನೆ. ಅಂತಕ್ಕ ಸೆಟ್ಟಿಯ ಮಗಳಾದ ಕಾವೇರಿ ತನ್ನ ಜಾತಿಯಲ್ಲಿ ತನಗೆ ಅನುರೂಪನಲ್ಲದ ಗಂಡು ದೊರೆಯಲಿಲ್ಲವೆಂದು ಮದುವೆಯನ್ನು ನಿರಾಕರಿಸಿದವಳು. ಆದರೆ ದೇವಯ್ಯನೊಟ್ಟಿಗೆ ಇಟ್ಟುಕೊಂಡವಳಾಗಿ ಇರಲು ಆಶೆ ಪಡುವಳು. ಸಾಮಾಜಿಕ ಸಂಬಂಧವಾದ ವಿವಾಹವನ್ನೇ ನಿರಾಕರಿಸಿ ವಿವಾಹ ಪೂರ್ವದಲ್ಲಿ ಸಂಬಂಧ ಹೊಂದುವ ಕಾವೇರಿಯ ವ್ಯಕ್ತಿತ್ವ ಪ್ರಶ್ನಾರ್ಹ? ಇದನ್ನು ಸ್ವಾತಂತ್ರ್ಯವೆಂದು ಕರೆಯಬೇಕೆ? ಇಲ್ಲ ಸ್ವೇಚ್ಛಾಚಾರವೆಂದು ಕರೆಯಬೇಕೆ? ಎಂಬುದರಲ್ಲಿ ಸಮಸ್ಯೆಗಳಿವೆ. ಈ

---

[೧] .ಸ್ತ್ರೀವಾದ : ಕುವೆಂಪು ಕಾದಂಬರಿಗಳ ಒಂದು ಸ್ತ್ರೀವಾದಿ ಓದು – ಬಿ.ಎನ್.ಸುಮಿತ್ರಾಬಾಯಿ : ಪು.ಸಂ.೧೧೪.

ವಿವಾಹ ಪೂರ್ವದ ಸಂಬಂಧಗಳು ಕೂಡ ಜಾತಿ ಶ್ರೇಣಿಕರಣವನ್ನವಲಂಬಿಸಿಯೇ ಇರುತ್ತವೆ ಎನ್ನುವುದು ವಿಚಿತ್ರ, ವಿಶೇಷ. ಗುತ್ತಿ ಹಾಗೂ ಕಾವೇರಿಯವರ ನೋಟದಲ್ಲಿ ಪ್ರಣಯ ಭಾವವಿದ್ದರೂ ಸಾಮಾಜಿಕ ಅಂತಸ್ತಿನ ಕಾರಣಕ್ಕೆ ಅದು ದೂರ ಸರಿಯುತ್ತದೆ.

ಅಕ್ಕಣಿಯಲ್ಲಿ ರೂಪಾತಾಳಿದ್ದ ಚೀಂಕ್ರನ ಕಾಮ, ಕಾವೇರಿಯಲ್ಲಿ ವಿಕೃತಾವಸ್ಥೆಯ ಪರಮಾವಧಿಗೆ ಬಂದು ನಿಲ್ಲುತ್ತದೆ. ಚೀಂಕ್ರನ ಅತಿ ಕಾಮದ ಚಾಂಚಲ್ಯವೇ ಕಾವೇರಿಯ ಮೇಲಿನ ಅತ್ಯಾಚಾರಕ್ಕೆ ಮೂಲ ಕಾರಣವಾಗಿ ಬಿಡುತ್ತದೆ. ಇಜಾರದ ಸಾಬಿಗಳೊಟ್ಟಿಗೆ ಸೇರಿ ಚೀಂಕ್ರನು ಮಾಡುವ ಅತ್ಯಾಚಾರ ಕಾವೇರಿಯ ಬದುಕನ್ನೇ ಆಪೋಶನ ತೆಗೆದುಕೊಂಡು ಬಿಡುತ್ತದೆ. ಮುಗ್ಧ ಹೆಣ್ಣೊಬ್ಬಳ ಮೇಲೆ ನಡೆದ ಘೋರ ಅತ್ಯಾಚಾರವಾಗಿದೆ ಇದು. ಕಾವೇರಿಯ ದೇಹವನ್ನು ರಾಕ್ಷಸ ಪ್ರವೃತ್ತಿಯಿಂದ ಅನುಭವಿಸಿ ಛಿದ್ರಗೊಳಿಸಿದರ ರೀತಿಯನ್ನು ನಿರೂಪಕರ ವಿವರಣೆಯಲ್ಲೆ ಸಮರ್ಥವಾಗಿ ಕಾಣಬಹುದಾಗಿದೆ.

"...ಕಾವೇರಿಗೆ ತನ್ನ ಶರೀರ ತನ್ನ ಜೀವಕ್ಕೆ ಮೆತ್ತಿಕೊಂಡಿರುವ ಅಮೇಧ್ಯದಷ್ಟು ಅಸಹಕರವಾಯಿತು. ಆ ಎಂಜಲನ್ನು ಹ್ಯಾಕ್ ಥೂ ಉಗುಳಿ ಬಿಡಬೇಕೆಂದು ಮನಸ್ಸು ಉರಿಯತೊಡಗಿತು. ಪಕ್ಕದಲ್ಲಿ ಬಿದ್ದಿದ್ದ ಶಾಲನ್ನು ಎತ್ತಿಕೊಂಡಳು. ಬಾಗಿಲಿಂದ ಹೊರಬಿದ್ದಳು; ಗಾಯ, ನೋವು, ಅವಮಾನ, ಆಯಾಸ, ಒಂದೂ ಈಗ ಅವಳಿಗೆ ತಡೆಯಲಾಗಲಿಲ್ಲ..."[೧]

ತನ್ನ ಹಾಗೂ ದೇವಯ್ಯನ ಪ್ರಣಯ ಸಂಬಂಧವನ್ನು ಪವಿತ್ರವೆಂದೇ ಭಾವಿಸಿದಳು ಕಾವೇರಿ. ಆ ಕಾರಣಕ್ಕಾಗಿಯೇ ದೇವಯ್ಯ ಕೊಟ್ಟ ಉಂಗುರವನ್ನು ಕಳೆದುಕೊಂಡು ದುಃಖಿಸಿ ಅದನ್ನು ಮರಳಿ ಪಡೆಯಲು ಮುಂದಾಗಿ ದುರಂತವನ್ನೇ ಕಂಡುಕೊಂಡಳು. ಸುಂದರವಾದ ಬದುಕು ಪ್ರಣಯ ಪ್ರಕರಣದ ವಿಕೃತವೆನ್ನಬಹುದಾದ ಪರಿಮಿತಿಗೆ ಬಂದುಬಿಟ್ಟಿದೆ ಕಾವೇರಿಯ ಜೀವನದಲ್ಲಿ.

ಕಾವೇರಿ ಹಾಗೂ ದೇವಯ್ಯರ ಸಂಬಂಧ ದೇಹಕ್ಕಷ್ಟೇ ಸೀಮಿತವಲ್ಲ. ಅದು ಮಾನಸಿಕ ಕೂಡ ಹೌದು ಎಂದು ಕಾದಂಬರಿಯ ಅವರಿಬ್ಬರ ಸಂಭಾಷಣೆಯಲ್ಲಿ ತಿಳಿಯುತ್ತದೆ. ಆದರೆ ಕಾವೇರಿಯ ಮರಣ ದೇವಯ್ಯನಲ್ಲಿ ತೀವ್ರವಾದ ಪ್ರಭಾವನ್ನೇನು ಬೀರಲಿಲ್ಲ. ಇದು ಈ ಎರಡೂ ಪಾತ್ರಗಳ ಸಂಬಂಧ ಹಾಗೂ ಮಿತಿಗಳೆರಡನ್ನು ಸೂಚಿಸುತ್ತದೆ.

---

[೧] .ಮಲೆಗಳಲ್ಲಿ ಮದುಮಗಳು – ಕುವೆಂಪು: ಪು.ಸಂ.೬೭೭

ಕ್ರೈಸ್ತ ಧರ್ಮ ಪ್ರಚಾರಕನಾದ ಉಪದೇಶಿ ಜೀವರತ್ನಯ್ಯ, ದೇವಯ್ಯನನ್ನು ಮತಾಂತರಗೊಳಿಸಲು ತನ್ನ ಮಗಳೊಟ್ಟಿಗೆ ಸಂಬಂಧ ಹೊಂದಲು ಪ್ರೇರೇಪಿಸುತ್ತಾನೆ. ದೇವಯ್ಯನ ಪ್ರಣಯ ಜೀವನ ದೇವಮ್ಮ, ಕಾವೇರಿ, ಪಾದ್ರಿಯ ಮಗಳು ಈ ಮೂರು ವ್ಯಕ್ತಿಗಳಲ್ಲಿ ಕವಲೊಡೆದಿದೆ. ಏಕ ಕಾಲದಲ್ಲಿ ಚಿನ್ನಮ್ಮಳೊಬ್ಬಳನ್ನೇ ಧ್ಯಾನಿಸುವ ಮುಕುಂದಯ್ಯನೊಟ್ಟಿಗೆ; ಹಲವರನ್ನು ಬಯಸುವ ದೇವಯ್ಯನೂ ಸಹ ಇದ್ದಾನೆ. ಮುಕುಂದಯ್ಯನಿಗೆ ಅವಕಾಶಗಳಿದ್ದರೂ ಬಹು ಪ್ರಣಯಕ್ಕೆ ಮುಂದಾಗುವುದೇ ಇಲ್ಲ. ಈ ಅಂಶ ಮುಖ್ಯವಾಗಿ ಸಾಂಪ್ರದಾಯಿಕ ವಿವಾಹಕ್ಕೂ, ಸ್ವಾತಂತ್ರ್ಯ ಇಚ್ಛೆಯಿಂದ ವಿವಾಹವಾಗುವ ವ್ಯಕ್ತಿಗಳ ಭಿನ್ನ ಜೀವನ ನೆಲೆಗಳನ್ನು ಬಿಡಿಸಿ ಹೇಳುತ್ತವೆ. ಮತಾಂತರಕ್ಕೆ ಹೆಣ್ಣನ್ನು ಬಳಸಿಕೊಳ್ಳುವ ಪಾದ್ರಿ ಇರುವಂತೆ, ಅದನ್ನು ವಿರೋಧಿಸುವ ಪಾದ್ರಿಯೂ ಕೂಡ ಇರುವುದು ಗಮನಾರ್ಹ.

'ಮಲೆಗಳಲ್ಲಿ ಮದುಮಗಳು' ಹೆಣ್ಣು-ಗಂಡುಗಳ ಪ್ರಣಯ ಸಂಬಂಧವನ್ನು ಪರಸ್ಪರ ಒಂದಾಗಿಸುವ, ದೂರತಳ್ಳಲ್ಪಡುವ ಹಾಗೆಯೇ ವಿಕೃತವಾದ ಕೃತ್ಯಗಳ ಜೊತೆಗೆ ಸಾವು-ನೋವುಗಳನ್ನು ತರುವ ಅನೇಕ ಮಗ್ಗಲುಗಳಲ್ಲಿ ಕಾಣಿಸಿಕೊಂಡಿದೆ. ಕಾದಂಬರಿಯಲ್ಲಿ ಬರುವ ಪ್ರಣಯ ಮಾನವರ ಜೀವನದ ಒಂದು ಸಾಮಾನ್ಯ ಬದುಕಿನ ಸಂಗತಿ ಎನಿಸಿದರೂ; ಇಲ್ಲಿ ಬರುವ ಹಲವು ಪಾತ್ರಗಳನ್ನು ಅಧ್ಯಯನ ಮಾಡಿದಾಗ ಕಾದಂಬರಿಯ ವಸ್ತು ಬಹುಪಾಲು ಪ್ರಣಯದ ಆಕರ್ಷಣೆ-ವಿಕರ್ಷಣೆ ಮತ್ತು ಅದರಿಂದುಂಟಾಗುವ ದುಷ್ಪರಿಣಾಮ ಹಾಗೂ ಸಂತೋಷಗಳೇ ಎಂಬಂತೆ ಕಾಣುತ್ತವೆ. ಪ್ರಣಯ ಪ್ರಕೃತಿಯ ಮೂಲ ಪ್ರವೃತ್ತಿಯೇ ಆದರೂ ಮಾನವನ ಪ್ರಜ್ಞೆ ಈ ಸಂದರ್ಭದಲ್ಲಿ ನಿಗಧಿತ ಫಲಿತಾಂಶವನ್ನು ಕೊಡುವುದಿಲ್ಲ ಎಂಬುದಕ್ಕೆ ಕಾದಂಬರಿಯಲ್ಲಿನ ಹಲವು ಪಾತ್ರಗಳು ನಿದರ್ಶನವಾಗಿವೆ. ಈ ಕಾದಂಬರಿಯ ವ್ಯಕ್ತಿಗಳ ಬದುಕಿನಲ್ಲಿ ಆಳವಾದ ವಿಚಾರಶೀಲತೆಗೆ ಎಡೆಯಿಲ್ಲ. ಏಕೆಂದರೆ ಇವರಲ್ಲಿ ಯಾರೂ ನಾಗರಿಕ ಅಥವಾ ಸಾಂಸ್ಕೃತಿಕ ಮಟ್ಟದ ಬುದ್ಧಿಜೀವಿಗಳಲ್ಲ. ವಿಕಾಸಶೀಲ ಜನಾಂಗದ ಸದಸ್ಯರಂತೆ ಗೋಚರಿಸುತ್ತಾರೆ.

ಅಧ್ಯಾಯ-೬

ವಾಸ್ತವತಾವಾದ ಮತ್ತು ಕುವೆಂಪು

ವಾಸ್ತವತಾವಾದ ಎಂಬ ಪರಿಕಲ್ಪನೆ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಈಚೆಗೆ ಪ್ರಚಾರಗೊಂಡ ದೃಷ್ಟಿಕೋನ. ಇಂಗ್ಲೀಷಿನ ರಿಯಲಿಸಂ ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ವಾಸ್ತವತಾವಾದ ಎಂಬ ಪದವನ್ನು ಬಳಸಲಾಗುತ್ತಿದೆ. ಅದು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ವಾಸ್ತವವನ್ನು ಅದರ ಎಲ್ಲಾ ಸಮಗ್ರ ಹಾಗೂ ಸಂಕೀರ್ಣ ಆಯಾಮಗಳಲ್ಲಿ ಹಿಡಿದಿಡುವುದಾಗಿದೆ. "ಅಂದರೆ ವಾಸ್ತವತಾವಾದದ ಪರಿಕಲ್ಪನೆ ಮುಖ್ಯವಾಗಿ ಆದರ್ಶವಾದಕ್ಕೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡಿತು".[೧]

ವಾಸ್ತವಿಕ ವಿಚಾರಗಳಿಗೆ ಪದ್ಯ ಸಾಹಿತ್ಯಕ್ಕಿಂತ ಗದ್ಯ ಸಾಹಿತ್ಯ ಅದರಲ್ಲೂ ಕಾದಂಬರಿ ಪ್ರಕಾರವೇ ಹೆಚ್ಚು ಸಮೀಪವಾದದ್ದು. ವಾಸ್ತವಿಕ ಸಾಹಿತ್ಯದಲ್ಲಿ ಪಾತ್ರಗಳು ಯಾವುದೇ ಪೂರ್ವ ನಿಯೋಜಿತ ಕ್ರಮಕ್ಕನುಗುಣವಾಗಿ ಬದುಕುತ್ತಿವೆ ಎನ್ನುವ ಭಾವ ಉಂಟಾಗುವುದಿಲ್ಲ.

ಮಲೆಗಳಲ್ಲಿ ಮದುಮಗಳು ಕಾದಂಬರಿ

ಒಂದು ಹೆಗ್ಗಾಡನ್ನು ಹೊಕ್ಕು ಕಾಡುಕಣಿವೆಗಳ ಮರಗತ್ತಲಲ್ಲಿ, ಬೆತ್ತ ಬಿದಿರುಗಳ ಹಿಂಡಿಲುಗಳಲ್ಲಿ ಹುಳುವುಗಳ ಸಾಂದ್ರತೆಯಲ್ಲಿ ಹೋ ಎಂದು ಸುರಿಯುವ ಮಳೆಯಲ್ಲಿ ದಿಕ್ಕು ತಪ್ಪಿ, ಮತ್ತೆ ದಾರಿಯನ್ನು ಹುಡುಕಿಕೊಂಡು ಗದ್ದೆ ತೋಟ, ಹಕ್ಕಲು ಹಾಡ್ಯಗಳನ್ನು ಹಾಯ್ದು ಅವುಗಳ ಮಧ್ಯದಲ್ಲಿ ವಾಸಿಸುತ್ತಿದ್ದ ಬಗೆಬಗೆಯ ಜನಗಳ ಮಧ್ಯದಲ್ಲಿ ನಿಂತು ನೋಡಿ ಅವರ ಕಷ್ಟ ಸುಖಗಳನ್ನೋ ಅವರ ಹವಣಿಕೆ ಹಾರೈಕೆಗಳನ್ನೋ ತಿಳಿದುಕೊಂಡು ಕಾಡನ್ನು ದಾಟಿ ಮತ್ತೆ ಬಯಲಿಗೆ ಬಂದ ಅನುಭವವಾಗುತ್ತದೆ. ಬೇರೊಂದು ಲೋಕವನ್ನೇ ನೋಡಿಬಂದಂತೆನಿಸುತ್ತದೆ. ಈ ಕೃತಿಯ ಅಧ್ಯಯನ ಮಲೆನಾಡು ಮತ್ತು ಅದರ ಮಧ್ಯದಲ್ಲಿ ಬದುಕುತ್ತಿದ್ದ ಜನಗಳ ಬದುಕು ಅಷ್ಟು ಜೀವಂತವಾಗಿ ನಮ್ಮ ಕಣ್ಣೆದುರು ನಿಲ್ಲುತ್ತವೆ. ಕಣ್ಣೆದುರು ನಿಲ್ಲುವುದು ಮಾತ್ರವಲ್ಲ ಅದರ ಒಳ-ಹೊರಗುಗಳೆಲ್ಲ ನಮ್ಮ ಅನುಭವದ ವಿಷಯವಾಗಿ ಮನಸ್ಸಿನಲ್ಲಿ ನೆಲೆಯೂರಿ ನಿಲ್ಲುತ್ತದೆ. ಇಷ್ಟೊಂದು ನಿಬಿಡವಾದ, ಗಾಢವಾದ ಅನುಭವವನ್ನು ತಂದುಕೊಡುವುದರಲ್ಲಿ ಕಾದಂಬರಿ ಸಫಲವಾಗಿದೆ. ಇಂಥ ಅನುಭವವನ್ನು ಕಾದಂಬರಿ ಹೇಗೆ ತಂದುಕೊಡುತ್ತದೆ. ಎಂಬುದನ್ನು ಕಾದಂಬರಿಯ ವಿವರಗಳಲ್ಲಿ ಕಾಣಬಹುದು. ಕಾದಂಬರಿಯ ಕೆಲವು ಭಾಗಗಳನ್ನು ಈ ವಿಷಯದ

---

೧. ವಾಸ್ತವವಾದ ಟಿ.ಪಿ.ಅಶೋಕ.ಪು.ಸಂ.೪.

ಸಮರ್ಥನೆಗಾಗಿ ಮುಂದೆ ನೋಡಬಹುದು. ಎರಡು ಪ್ರಮುಖ ಅಂಶಗಳು ತಕ್ಷಣ ಗಮನ ಸೆಳೆಯುತ್ತವೆ. ಒಂದು ಜೀವಂತವಾಗಿ ಚಿತ್ರಿತವಾದ ಮಲೆನಾಡ ಪರಿಸರ ಮತ್ತು ವಾತಾವರಣ; ಮತ್ತೊಂದು, ಕಾದಂಬರಿಯಲ್ಲಿ ನಡೆದದ್ದೆಲ್ಲವೂ ನಿಜವಾಗಿಯೂ ನಡೆದ ಸಂಗತಿ ಎಂಬ ಭ್ರಮೆಯನ್ನುಂಟು ಮಾಡಬಲ್ಲ ಜೀವಂತಿಕೆಯನ್ನುಳ್ಳ ಪಾತ್ರವರ್ಗ. ಈ ಜಗತ್ತಿನಲ್ಲಿ ಬಾಳಿ ಕೇಳೀ, ನೋಡಿ, ಮೂಸಿ, ಆಸ್ವಾದಿಸಿ, ಮುಟ್ಟಿ ತೂಗುವ ಮನುಷ್ಯ ತನ್ನದಾದ ಅನುಭವಗಳನ್ನು ಗಳಿಸಿ, ಯಾವುದೋ ಆಂತರಿಕ ಒತ್ತಡದಿಂದ ಪ್ರಕಟಿಸುವ ಬಗೆಯನ್ನು ವಾಸ್ತವಿಕ ಸಾಹಿತ್ಯವೆನ್ನಬಹುದು. ಈ ಪ್ರಪಂಚದ ಗೊಡವೆಯನ್ನು ಬಿಟ್ಟು ಯಾರೂ ಕಾಣದ ರಮ್ಯ, ಅದ್ಭುತ ಪ್ರಪಂಚವೊಂದನ್ನು ನಿರ್ಮಿಸಿ, ಕಲ್ಪನಾ ಸಾಮ್ರಾಜ್ಯ ಕಟ್ಟುವುದು ಆದರ್ಶ. "ಕಣ್ಣಿಗೆ ಕಾಣುವುದು ವಾಸ್ತವ ಕಾಣಬೇಕಾದುದು ಆದರ್ಶ; ಇರುವುದು ವಾಸ್ತವ, ಇರಬೇಕಾದುದು ಆದರ್ಶ..."[೧]

ವಾಸ್ತವತಾವಾದದ ಪ್ರದದ ಪ್ರಧಾನ ಪ್ರೇರಣೆ ಭೌತಿಕ ಪ್ರಪಂಚವನ್ನು ಅದರ ಅಂತರ್ ಸಂಬಂಧಗಳಲ್ಲಿ ಹಿಡಿದಿಡುವುದರಲ್ಲಿದೆ. ಅಂದರೆ "ನಮ್ಮ ಕಣ್ಣಿಗೆ ಕಾಣುವ ಪ್ರಪಂಚವನ್ನು ನಾವು ಚಿತ್ರಿಸಬೇಕು ಆದರ್ಶ ರಾಜ್ಯವನ್ನಲ್ಲ. ನಮ್ಮ ಕಣ್ಣಿಗೆ ಕಾಣುವುದು ಸುಂದರವಲ್ಲದಿದ್ದರೆ ನಷ್ಟವೇನೂ ಅಲ್ಲ; ಸತ್ಯವಾದರೆ ಸಾಕು".[೨]

ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿನ ವಿವರಗಳನ್ನು ಕಾನೂರು ಹೆಗ್ಗಡತಿ ಕೃತಿಯ (ಅದರಲ್ಲೂ ಹೂವಯ್ಯನ ಇತರೆ ಕೆಲವು) ವಿವರಗಳಿಗೆ ಹೋಲಿಸಿ ನೋಡಿದಾಗ ಒಂದರಲ್ಲಿ ವಾಸ್ತವಿಕತೆ, ಮತ್ತೊಂದರಲ್ಲಿ ಆದರ್ಶವನ್ನು ಸ್ಪಷ್ಟವಾಗಿ ಗುರುತಿಸಬಹುದು. ಹೂವಯ್ಯನ ಪಾತ್ರ ಹೆಚ್ಚು ಆದರ್ಶೀಕೃತವಾಗುತ್ತಾ ಹೋಗಿದೆ. ಆದರೆ ಗುತ್ತಿ-ತಿಮ್ಮಿ, ಐತ-ಪೀಂಚಲು ಹಾಗೂ ಚಿನ್ನಮ-ಮುಕುಂದಯ್ಯನ ಪಾತ್ರಗಳು ವಾಸ್ತವವಾದರೂ ಅದ್ಭುತಾಂಶಗಳಿಂದ ಬಣ್ಣಗೊಂಡ ಪ್ರಣಯಗಳ ಸಫಲ ಸಾಹಸವಾಗಿದೆ.

ಮಾನವ ನಾಗರೀಕನಾದಂತೆಲ್ಲ ನಿಸರ್ಗದಿಂದ ದೂರ ಸರಿಯತೊಡಗುತ್ತಾನೆ. ನಿಸರ್ಗದಿಂದ ದೂರ ಸರಿಯುವುದೆಂದರೆ ವಾಸ್ತವ ಬದುಕಿನಿಂದ ದೂರ ಸರಿಯುವುದು. ಯಾವುದೋ ಉದ್ದೇಶಕ್ಕಾಗಿ ರೂಪಿಸಿಕೊಂಡ ಕೃತಕ ಆದರ್ಶಗಳು, ಅವನು ಹೀಗೆ ದೂರ ಸರಿದಂತೆಲ್ಲಾ ಜಟಿಲವಾಗಿ ಅವನ ಕ್ರಿಯಾತ್ಮಕ ತುಡಿತವನ್ನೇ ತೊಡೆದುಹಾಕುತ್ತವೆ. ಈ ದೃಷ್ಟಿಯಿಂದ ನೋಡಿದಾಗ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕೃತಿ ಯಾವ

---

೧. ವಾಸ್ತವವಾದ, ಟಿ.ಪಿ.ಅಶೋಕ.ಪು.ಸಂ.೧೨೮

೨. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೦೨.

ಆದರ್ಶೀಕೃತ ಅತಿಗೂ ಹೋಗದೆ, ಸಹಜ-ವಾಸ್ತವಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ರಚನೆಗೊಂಡಿದೆ. ಕೊಳೆ ಸರ್ವವ್ಯಾಪಿಯಾಗಿದ್ದರೂ, ಷೋಕಿಯಾಗಿದ್ದನು. ತಲೆಗೆ ಒಂದು ಕೆಂಪು ವಸ್ತ್ರವನ್ನು ಸುತ್ತಿದ್ದನು. ಮೈಗೊಂದು ಕಸೆ ಅಂಗಿ ಹಾಕಿದ್ದನು. ಪಂಚೆಯ ತುದಿ ಮೊಳ ಕಾಲನ್ನು ದಾಟಿತ್ತು. ಕಿವಿಗೆ ಬೇರೆ ಒಂಟಿ! ಒಂಟಿಗಳನ್ನು ಹೊಸದಾಗಿ ಹಾಕಿರಲಿಲ್ಲವಾದರೂ ಹೊಸ ವೇಷದಿಂದ ಅವುಗಳಿಗೊಂದು ಹೊಸ ಷೋಕಿ ಬಂದಿತ್ತು. ಎಲ್ಲಕ್ಕೂ ತಿಲಕಪ್ರಾಯವಾಗಿ ಮುಖಕ್ಷೌರ, ಹೊಲೆಯನಾದರೂ ಬೆಳ್ಳಗಿದ್ದುದರಿಂದ ಮಲೆಯನಂತೆ ಕಾಣುತ್ತಿದ್ದನು. ಹೆಗಲ ಮೇಲೆ ಮಡಿಸಿ ಹಾಕಿಕೊಂಡಿದ್ದ ಕಂಬಳಿಕೊಪ್ಪೆ ಅವನು ಮಳೆಗೆ ತಯಾರಾಗಿ ಹೊರಟಿದ್ದನ್ನೂ, ಬಗಲಲ್ಲಿ ಇರುಕಿಕೊಂಡಿದ್ದ ಬಗನಿಯ ಮರದ ಕರಿಯ ದೊಣ್ಣೆ ಹೊಡೆದಾಟಕ್ಕೂ ಕೂಡ ಅವನು ಸಿದ್ದನಾಗಿದ್ದಾನೆ. ಎಂಬುದನ್ನು ಸೂಚಿಸುತ್ತಿದ್ದವು.

ಗುತ್ತಿಯ ವ್ಯಕ್ತಿತ್ವ ಹಾಗೂ ಗುಣಲಕ್ಷಣವನ್ನು ಹೇಳುವ ಈ ಸಾಲುಗಳು ಭಾಷೆಯ ಸಮೃದ್ಧಿಯಿಂದ ಕೂಡಿದ್ದರು ವಾಸ್ತವಿಕತೆಗೆ ದೂರವಾಗಿಲ್ಲ. ಗುತ್ತಿಯ ಪಾತ್ರ ರಚನೆ ಎಲ್ಲಿಯೂ ಸಹೃದಯನಿಗೆ ಅಸಹಜವೆನಿಸುವುದಿಲ್ಲ. ಕಾದಂಬರಿಯುದ್ದಕ್ಕೂ ಸ್ತ್ರೀಯನ್ನು ಎರಡನೇ ದರ್ಜೆ ವ್ಯಕ್ತಿಯಾಗಿ 'ಅದು' ಎಂದು ಸಂಭೋದಿಸುವ ವಾಸ್ತವಿಕ ಚಿತ್ರಣವಿದೆ. ಪುರುಷ ಪ್ರಧಾನ ವ್ಯವಸ್ಥೆಯ ಪಳಿಯುಳಿಕೆಯ ನಿಜದರ್ಶನ ಇಲ್ಲಿ ಗೋಚರಿಸುತ್ತದೆ. ಊಳಿಗಮಾನ್ಯ ಪದ್ಧತಿ, ಉಳ್ಳವರು – ಇಲ್ಲದವರು ಎಂಬ ತಾರತಮ್ಯ, ಮುಸ್ಲಿಂರ ಕ್ರೌರ್ಯ, ಸ್ತ್ರೀಯರ ಅಸಹಾಯಕತೆ ಹೀಗೆ ಕೃತಿಯುದ್ದಕ್ಕೂ ವಾಸ್ತವಿಕ ಬದುಕಿನ ಚಿತ್ರಣಕ್ಕೆ ಹೆಚ್ಚು ಹೆಚ್ಚು ಸಮರ್ಥನೆಗಳು ದೊರೆಯುತ್ತವೆ. ಯಾವ ರಾಗದ್ವೇಷ ಭಾವಗಳಿಗೂ ಒಳಗಾಗದೆ, ನಿರ್ಲಿಪ್ತವಾಗಿ ಕುವೆಂಪು ಒಂದು ಕಾಲಘಟ್ಟದ ವಿಶಿಷ್ಟ ಪ್ರದೇಶದ ಜನಜೀವನವನ್ನು ತಮ್ಮ ಸಾಚಾ ಅನುಭವಗಳಲ್ಲಿ ಕಟ್ಟಿಕೊಂಡಿದ್ದಾರೆ. ಕೃತಿಯುದ್ದಕ್ಕೂ ಈ ಬಗೆಯ ವಾಸ್ತವಿಕ ಚಿತ್ರಣ ಇನ್ನಿಲ್ಲದಂತೆ ತುಂಬಿಕೊಂಡಿದೆ. ಹಳೆಯ ಮತ್ತು ಹೊಸತುಗಳ ಸಂಘರ್ಷಕ್ಕೆ ಉದಾಹರಣೆಗಳು. ಸುಬ್ಬಣ್ಣ ಹೆಗ್ಗಡೆಯವರ ಹಂದಿವೊಡ್ಡಿಯ ವರ್ಣನೆಯಂತು ಮರೆಯಲಾರದ ವಾಸ್ತವ ನೆಲೆಯ ನಿದರ್ಶನವಾಗಿದೆ.

ನವೋದಯ ರಮ್ಯತೆ ಹಾಗೂ ಆದರ್ಶದ ನೆಲೆಯಲ್ಲಿ ಬರೆಯುತ್ತಿದ್ದ ಕುವೆಂಪು ಅವರು ನವ್ಯ ಸಾಹಿತಿಗಳು ಬರೆದಿರುವ ವಾಸ್ತವಿಕ ಹಿನ್ನೆಲೆಯ ಕೃತಿಗಳೆಂದರೆ ಕಾದಂಬರಿಗಳು. ಕಾನೂರು ಹೆಗ್ಗಡತಿ ಕುರಿತು ನವ್ಯ ಸಾಹಿತಿಗಳು ಮಾಡಿದ ಕಟು ಟೀಕೆಗೆ ಪ್ರತಿಕ್ರಿಯೆಯಾಗಿ ಬಂದ 'ಮಲೆಗಳಲ್ಲಿ ಮದುಮಗಳು' ಬಹುತೇಕ ನೈಜ ಚಿತ್ರಣವನ್ನು ದಟ್ಟವಾಗಿ ಒಳಗೊಂಡಿದೆ.

ವಾಸ್ತವತಾವಾದ ಯಾವತ್ತೂ ಮೂರ್ತ ಜಗತ್ತಿನ ಮೂರ್ತ ವಿವರಗಳ ಅಂತರ್ ಸಂಬಂಧಗಳನ್ನು ಮುಖ್ಯವಾಗಿ ಪರಿಗಣಿಸುತ್ತದೆ. ಹೀಗಾಗಿ ವಸ್ತುನಿಷ್ಠತೆ ಇದರ ಪ್ರಧಾನ ಕಾಳಜಿಯಾಗುತ್ತದೆ. ವೈಯಕ್ತಿಕ ನಿಲುವುಗಳಿಗಿಂತ ಹೆಚ್ಚಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂರಚನೆಗಳು ಮುಖ್ಯವಾಗುತ್ತವೆ. ವಿಶೇಷವೆಂದರೆ ನಮ್ಮ ವಾಸ್ತವ ಪ್ರಜ್ಞೆಗೂ ಒಂದು ಮಿತಿ ಇದ್ದೇ ಇರುತ್ತದೆ. ಮೊದಲಿನಿಂದ ಕೊನೆಯವರೆಗೆ ಕಾದಂಬರಿ ವಾಸ್ತವ ಚಿತ್ರಣದ ವಿಧಾನವನ್ನೇ ಅನುಸರಿಸಿಕೊಂಡು ಹೋಗುತ್ತದೆಯಾದರೂ ಆ ವಿಧಾನಕ್ಕೆ ನೆರವಾದ ಆಹ್ವಾನದಂತೆ ಇಂದ್ರಿಯಾತೀತ ಪ್ರಪಂಚಕ್ಕೆ ಸಂಬಂಧಿಸಿದ ಕೆಲವೊಂದು ಗ್ರಹಿಕೆಗಳು ನಂಬಿಕೆಗಳು ಕಾದಂಬರಿಯ ಘಟನೆಗಳ ಹಿಂದಿನ ಕಾರ್ಯಕಾರಣ ಪರಂಪರೆಯ ವಿಶ್ಲೇಷಣೆಯ ಅಂಗವಾಗಿ ಸೂಚಿತವಾಗುತ್ತದೆ. ಪ್ರತ್ಯಕ್ಷ ಪ್ರಪಂಚದಲ್ಲಿಯ ಆಗು ಹೋಗುಗಳ ಹಿಂದೆ ಇಂದ್ರಿಯಾತೀತವಾದ ಪ್ರಭಾವಗಳು, ಸಂಕಲ್ಪಗಳು, ಕೆಲಸ ಮಾಡುತ್ತಿರುತ್ತವೆ ಅಥವಾ ಮಾಡುತ್ತಿರಬಹುದು ಎಂಬ ವಿಚಾರಧೋರಣೆ ಮುಖ್ಯವಾಗಿ ಚಿನ್ನಮ್ಮ ಮುಕುಂದಯ್ಯ ಅವರ ನಡುವಿನ ಆಕರ್ಷಣೆಗೆ ಸಂಬಂಧಿಸಿದಂತೆ ವ್ಯಕ್ತವಾಗುತ್ತದೆ. ಆ ಮುಖ್ಯ ಸಂದರ್ಭಗಳನ್ನು ನೆನೆಯಬಹುದು.

೧. ಚಿನ್ನಮ್ಮ ಇನ್ನೂ ತೀರ ಚಿಕ್ಕವಳಾಗಿದ್ದಾಗ ಹೂವಳ್ಳಿಗೆ ಬಂದಿದ್ದ ದಾನಮ್ಮ ಜೊತೆಯಲ್ಲಿ ಕರೆದುಕೊಂಡು ಬಂದಿದ್ದ ಮುಕುಂದಯ್ಯನನ್ನು ತೋರಿಸಿ "ಇಂವ ಯಾರು? ಹೇಳು ನೋಡಾನ?" ಎಂದು ಚಿನ್ನಮ್ಮನನ್ನು ಕೇಳಿದಾಗ ಮಕ್ಕಳಿಬ್ಬರ ಕಣ್ಣುಗಳು ಸಂಧಿಸಿದೊಡನೆಯೆ "ಆ ಒಂದು ಕ್ಷಣದಲ್ಲಿ ಒಂದು ಅತೀಂದ್ರಿಯ ವ್ಯಾಪಾರ ನಡೆದಿತ್ತು; ಚಿಕ್ಕ ಮಗು ಚಿನ್ನಮ್ಮ ಹುಡುಗ ಮುಕುಂದಯ್ಯನಲ್ಲಿ ತನ್ನ ಹಿಂದಿನ ಜನ್ಮದ ಗಂಡನನ್ನು ಕಂಡಿದ್ದಳೂ! ಆ ಅನುಭವ ನೆನಪಿನ ರೂಪಾದ್ದಾಗಿಯೂ ಇರಲಿಲ್ಲ. ಅದೊಂದು ಕಾಣುವಿಕೆಯಾಗಿತ್ತು. ಆ ಒಂದು ಕ್ಷಣ ದರ್ಶನದಲ್ಲಿ ಚಿನ್ನಮ್ಮ ತಾನೂ ಮುಕುಂದಯ್ಯನೂ ತಮ್ಮ ಹಿಂದಿನ ಜನ್ಮದಲ್ಲಿ ದಂಪತಿಗಳಾಗಿದ್ದುದನ್ನು ಆಗಿ ಅನುಭವಿಸಿ ಕಂಡಿದ್ದಳು. ಅವರು ಎಂದು ಉತ್ತರವಾಗಿ ಹೇಳಿದ್ದಳು.

೨. ಕಲ್ಲೂರಿನ ಗಡ್ಡದಯ್ಯ ಮುಕುಂದಯ್ಯನಿಗೆ ಭವಿಷ್ಯ ಹೇಳುತ್ತಾನೆ. – ಮುಕುಂದಯ್ಯ ಮದುವೆಯಾಗಬೇಕೆಂದಿದ್ದ ಚಿನ್ನಮ್ಮನಲ್ಲಿ ಹುಟ್ಟುವ ಮಗಳು ಆಗಲೆ ಆತನ ಅಕ್ಕ ದೇವಮ್ಮನಿಗೆ ಮಗನಾಗಿ ಹುಟ್ಟಿದ್ದ ಚಲುವಯ್ಯನನ್ನು ಮದುವೆಯಾಗುತ್ತಾಳೆಂದೂ, ತಿರುಪತಿಗೆ ಹೋಗಿ ಕಾಣೆಯಾಗಿದ್ದ ಅಕ್ಕ ರಂಗಮ್ಮನ ಗಂಡ ದೊಡ್ಡಣ್ಣ ಗೌಡ ಆಗಲೆ ತೀರಿ ಹೋಗಿ ಅವನೇ ಚೆಲುವಯ್ಯನಾಗಿ ಹುಟ್ಟಿಬಂದಿದ್ದಾನೆಂದೂ ಗಂಡನ ಹಿಂಬರವಿಗಾಗಿ ಪರಿತಪಿಸುತ್ತಿದ್ದ

ರಂಗಮ್ಮನೆ ಅವರಿಗೆ ಮಗಳಾಗಿ ಹುಟ್ಟಿ ಬಂದು ಚೆಲುವಯ್ಯನನ್ನು ಮದುವೆಯಾಗುವುದರ ಮೂಲಕ ಕಳೆದುಕೊಂಡ ಪತಿಯನ್ನು ಮತ್ತೆ ಪಡೆಯುತ್ತಾಳೆಂದೂ ಹೇಳಿದ್ದ, ಇಲ್ಲಿ ಅತೀಂದ್ರಿಯ ಮನೋವ್ಯಾಪಾರಗಳ ನಿರ್ದೇಶ ಬರುತ್ತದೆ. ವಾಸ್ತವತಾವಾದಕ್ಕಿಂತ ಭಿನ್ನವಾಗಿ ಈ ಮನೋವೈಜ್ಞಾನಿಕ ಹಿನ್ನೆಲೆ ಕಾದಂಬರಿಯಲ್ಲಿ ಕಾರ್ಯನಿರ್ವಹಿಸಿದೆ. ವಾಸ್ತವತಾ ನೆಲೆಯ ಸಾಹಿತ್ಯ ಸತ್ಯದ ನಿರೂಪಣೆಗೆ ಮುಂದಾದರೆ, ಅತೀಂದ್ರಿಯ ಸಾಹಿತ್ಯ ಸತ್ಯದ ಆಚೆಗಿನ ಕಾಣುವಿಕೆಯ ಶಕ್ತಿವುಳ್ಳದ್ದು. ಇಂಥ ಸಂಗತಿಗಳನ್ನು ನಂಬುವವರಿರುವ ಹಾಗೆ ನಂಬದವರೂ ಇರಬಹುದು.

ಇಂತಹ ಸಂದರ್ಭದಲ್ಲಿ ಅತೀಂದ್ರಿಯ ಪ್ರಪಂಚಕ್ಕೆ ಸಂಬಂಧಿಸಿದ ಸಂಗತಿಗಳನ್ನು ಕಾದಂಬರಿ ನಿರೂಪಿಸಬಾರದೆ, ಅಥವಾ ನಿರೂಪಿಸಲಾರದೆ? ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಇದಕ್ಕೆ ಉತ್ತರ ಸುಲಭ ನಿರೂಪಿಸಕೂಡದೆಂದು ಯಾರೂ ಹೇಳುವ ಹಾಗಿಲ್ಲ. ಆದರೆ ಓದುಗ ಅದನ್ನು ಒಪ್ಪಿಕೊಂಡು ನಂಬುವಂತೆ ಮಾಡುವುದು ತಪ್ಪದ ಕೆಲಸ. "ಲೇಖಕರ ಉದ್ದೇಶವೇನೋ ಸ್ಪಷ್ಟವಾಗಿದೆ. ನಮ್ಮ ಕಣ್ಣೆದುರಿನಲ್ಲಿ ನಡೆಯುವುದೆಲ್ಲರ ಹಿಂದಿನ ಕಾರ್ಯ ಕಾರಣ ಪರಂಪರೆ ನಮ್ಮ ಕಾಣ್ಕೆಯಾಚೆಗೂ ಚಾಚಿರಬಹುದು; ನಮ್ಮ ಬುದ್ಧಿಗೆ ಗೋಚರಿಸಿದ ಅದೃಷ್ಟ ಸಂಕಲ್ಪಗಳು, ಪ್ರಭಾವಗಳು, ಇಲ್ಲಿಯವರ ನಡೆನುಡಿಗಳನ್ನು ರೂಪಿಸಬಹುದು. ಸುಖ ದುಃಖಗಳಿಗೆ ಕಾರಣವಾಗಬಹುದು; ಇಲ್ಲಿ ನಡೆಯುವುದೆಲ್ಲವೂ ನಮಗೆ ತಿಳಿಯದ ಊಹಿಸಲೂ ಆಗದ, ವಿಶ್ವವ್ಯಾಪಿಯಾದ ಯಾವುದೋ ಒಂದು ಕ್ರಮಕ್ಕೆ ಉದ್ದೇಶಕ್ಕೆ ಒಳಗಾಗಿ ನಡೆಯುತ್ತಿರಬಹುದು".[೧] ಇಲ್ಲಿ ಅತೀಂದ್ರಿಯ ವ್ಯಾಪಾರದ ಒಂದು ಅಂಶ ಪುನರ್‌ಜನ್ಮದಲ್ಲಿ ಕಲ್ಪನೆ. ಚಿನ್ನಮ್ಮ ಮುಕುಂದಯ್ಯರ ಸಂಬಂಧ ಈ ಬಗೆಯದು. ಹಿಂದಿನ ಜನ್ಮದಲ್ಲಿ ಗಂಡ ಹೆಂಡತಿಯಾಗಿದ್ದವರೂ, ಈ ಜನ್ಮದಲ್ಲಿ ಗಂಡ-ಹೆಂಡತಿಯಾದರೆ ಸಂಬಂಧಗಳಲ್ಲಿ ಯಾವುದೇ ತೊಡಕು ಉಂಟಾಗುವುದಿಲ್ಲ. ಆದರೆ ನಮ್ಮ ಆತಂಕವೇನೆಂದರೆ ಹೆಂಡತಿಯಾಗಿದ್ದವಳು, ಮಗಳಾಗಿ ಹುಟ್ಟಿದರೆ, ಇನ್ನು ಬೇರೆ ಬಗೆಯ ಸಂಬಂಧಗಳಲ್ಲಿ ಹುಟ್ಟಿದರೆ ಆಗ ಅನರ್ಥಕಾರಿಯಾಗುತ್ತದೆ. ಯಾವ ತಪ್ಪೂ ಮಾಡದೆ, ಹೊಸ ಹೆಂಡತಿಯನ್ನು ಕಳೆದುಕೊಂಡು ಮನೆಯಿಂದ ದೂರವಾಗಿ ಪೊಲೀಸರ ಭಯದಲ್ಲಿ ಗಾಯದ ನೋವು-ಹೊಟ್ಟೆಯ ಹಸಿವುಗಳನ್ನು ಲೆಕ್ಕಿಸದೆ ಅನಾಥವಾಗಿ ಕಾಡಿನಲ್ಲಿ ತಿರುಗುವ ಗುತ್ತಿಗೆ, ಇದಕ್ಕೆಲ್ಲ ಪಾದ್ರಿ ಮತ್ತು ಒಡೆಯರ ಹಿತಾಸಕ್ತಿಗಳೇ ಕಾರಣವಾಗಿದ್ದರೂ ಅನಿಸುವುದು ಮಾತ್ರ ಹೀಗೆ: "ಏನು ಪಾಪ ಮಾಡಿದ್ದೇನೋ

---

೧. ಕುವೆಂಪುರವರು ಕಾದಂಬರಿ – ವಿ.ಎಂ.ಇನಾಂದಾರ್:ಪು.ಸಂ.೧೦೪.

ಹೋದ ಜನ್ಮದಲ್ಲಿ ? ಅದಕ್ಕೆ ಈಗ ಈ ಶಿಕ್ಷೆ"[೧] ಇಂತಹ ಪ್ರಕರಣ ಮತ್ತೆ ಜಾತಿ ವ್ಯವಸ್ಥೆಯನ್ನು ಪೋಷಿಸುವಲ್ಲಿ ನೆರವಾಗುತ್ತದೆ. ಆದ್ದರಿಂದ ಈ ನಂಬಿಕೆ ಪ್ರಶ್ನಾರ್ಹವಾಗಿದೆ. ವಾಸ್ತವತೆ ಎಂದರೆ ಬರವಣಿಗೆಯ ತಾಂತ್ರಿಕತೆಗೆ ಮಾತ್ರ ಸಂಬಂಧಪಟ್ಟ ವಿಷಯವಲ್ಲ; ಅದು ನಮ್ಮ ಸಮಗ್ರ ದೃಷ್ಟಿಕೋನ ಮತ್ತು ದರ್ಶನ ಮನೋಧರ್ಮಗಳಿಗೆ ಸಂಬಂಧಪಟ್ಟ ಪರಿಕಲ್ಪನೆಯೂ ಹೌದು ಎಂಬುದನ್ನು ತಿಳಿದಾಗ ಮಾತ್ರ ಅರ್ಥಪೂರ್ಣ "ವಾಸ್ತವತಾವಾದಿ" ಕೃತಿ ರಚನೆ ಮಾಡಲು ಸಾಧ್ಯ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ವಾಸ್ತವ ಮಾರ್ಗದಲ್ಲಿ ಬಂದ ಬಹುಮುಖ್ಯ ಕಾದಂಬರಿಗಳಲ್ಲೊಂದು. ಈ ಕಾದಂಬರಿಯ ನಿಜವಾದ ಸ್ವರೂಪ, ಸಾಧನೆಗಳನ್ನು ಅರಿತುಕೊಳ್ಳುವುದಕ್ಕೆ ಅದರ ಹಿಂದಿರುವ ಮುಖ್ಯ ಪ್ರೇರಣೆಗಳನ್ನು ಗುರುತಿಸುವುದು ಅವಶ್ಯಕ. ಅಂದರೆ ತಮಗೆ ಅತ್ಯಂತ ಆತ್ಮೀಯವಾದ ಮಲೆನಾಡಿನ ಪರಿಸರವನ್ನು ಅದರ ಪ್ರಾಕೃತಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿವರಗಳೊಡನೆ ಐತಿಹಾಸಿಕ ದೃಷ್ಟಿಯಿಂದ ಗ್ರಹಿಸಿ ಅದನ್ನು ಭಾಷೆಯಲ್ಲಿ ಪ್ರತಿಸೃಷ್ಟಿಸುವುದು ಲೇಖಕರ ಪ್ರಧಾನ ಆಸಕ್ತಿ.

---

[೧] . ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೪೭೩.

ಅಧ್ಯಾಯ-೭

ಸಂಘರ್ಷ ಮತ್ತು ಪ್ರತಿಭಟನೆ

ಸಂಘರ್ಷ ಮತ್ತು ಪ್ರತಿಭಟನೆ ಮಾನವ ಜೀವಿತದ ಅಳಿವು-ಉಳಿವಿನ ಪ್ರಶ್ನೆ. ಈ ಜಗತ್ತಿನಲ್ಲಿ ಬದುಕುವ ಯಾವುದೇ ಜೀವಂತ ಪ್ರಾಣಿಗೆ ಎದುರಾಗುವ ಸಮಸ್ಯೆಗಳ ವಿರುದ್ಧ ಅದು ತನ್ನ ಪ್ರತಿಕ್ರಿಯೆಗಳನ್ನು ಹೊರಹಾಕುವ ಬಗೆ ಈ ಸಂಘರ್ಷ. ಈ ಸಂಘರ್ಷ ಮತ್ತು ಪ್ರತಿಭಟನೆ ಭಿನ್ನ-ಭಿನ್ನ ಸಂದರ್ಭಗಳಿಗೆ ಅನುಗುಣವಾಗಿ ವ್ಯಕ್ತವಾಗುತ್ತದೆ. ಇದು ಮೌನವಾಗಿಯಾದರೂ ಇರಬಹುದು. ಕಲಹದ ರೂಪದಲ್ಲಿಯಾದರೂ ಇರಬಹುದು. ಅಂದರೆ ಎದುರಾದ ಪರಿಸ್ಥಿತಿ ಹಾಗೂ ಆ ವ್ಯಕ್ತಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಅದು ಇರುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿನ ಪ್ರತಿಭಟನೆ ಮತ್ತು ಸಂಘರ್ಷ ವಿವಿಧ ಬಗೆಯದು. ಅದು ವಸಾಹಾತುಷಾಹಿಗಳ ವಿರುದ್ಧದ ಮತಾಂತರವನ್ನು ಕುರಿತದ್ದಾಗಿ, ಇನ್ನುಳಿದಂತೆ ಸಂಪ್ರದಾಯ ಮತ್ತು ಹೊಸತನಗಳ ನಡುವಿನ ಸಂಘರ್ಷವಾಗಿದೆ. ಅದಕ್ಕಿಂತ ಮುಖ್ಯವಾಗಿ ಸ್ಥಳೀಯ ಜಾತಿ ವ್ಯವಸ್ಥೆಯ ಬ್ರಾಹ್ಮಣ-ಶೂದ್ರರ ನಡುವಿನ ಸಂಘರ್ಷ ಶೂದ್ರರು ಹಾಗೂ ದಲಿತರ ನಡುವಿನ ಸಂಘರ್ಷ ಇವುಗಳನ್ನು ಮೀರಿದ ವ್ಯಕ್ತಿ – ವ್ಯಕ್ತಿಗಳ ನಡುವಿನ ಸಂಘರ್ಷ ಕೃತಿಯಲ್ಲಿ ವ್ಯಕ್ತವಾಗಿದೆ. ಇದರೊಟ್ಟಿಗೆ ತಾವು ವಾಸಿಸುವ ಸುತ್ತಲಿನ ಪ್ರಕೃತಿಯ ವಿರುದ್ಧದ ಪ್ರಾಕೃತಿಕ ಸಂಘರ್ಷವನ್ನು ಸಹ ಕಾಣಬಹುದು.

ವಾಸಾಹತುಶಾಹಿಗಳ ವಿರುದ್ಧದ ಪ್ರತಿಭಟನೆ ಮತಾಂತರವನ್ನು ಕುರಿತದ್ದು. ಕ್ರೈಸ್ತ ಪಾದ್ರಿಯಾದ ಜೀವರತ್ನಯ್ಯ ಹಾಗೂ ಬೆಟ್ಟಳ್ಳಿ ದೇವಯ್ಯರ ನಡುವಿನ ಸಂಬಂಧದಿಂದ ಈ ಸಮಸ್ಯೆ ಉದ್ಭವಿಸುತ್ತದೆ. ವಿವಿಧ ಬಗೆಯ ಆಮಿಷಗಳಿಗೆ ದೇವಯ್ಯ ಒಳಗಾಗಿ ಕ್ರೈಸ್ತ ಧರ್ಮ ಸೇರಲು ಒಪ್ಪಿರುತ್ತಾನೆ. ಆದರೆ ಅವನ ಅಂತರಾಳದಲ್ಲಿ ಪ್ರತಿಭಟನೆ ಸುಪ್ತವಾಗಿ ಇದ್ದೇ ಇದೆ. ಈ ಪ್ರತಿಭಟನೆ ಸಂಘರ್ಷ ರೂಪ ತಾಳುವುದು ಮುಕುಂದಯ್ಯನ ಮಧ್ಯಪ್ರವೇಶದಿಂದ. ಸಂಘರ್ಷದ ರೂಪ ತಾಳಿದ ತರುವಾಯ ರೆವರೆಂಡ್ ಲೇಕ್‌ಹಿಲ್‌ರ ಮಧ್ಯಸ್ಥಿಕೆಯಿಂದ ಮತಾಂತರ ಕಾರ್ಯ ಸ್ಥಗಿತಗೊಳ್ಳುತ್ತದೆ. ಇದು ಧರ್ಮಗಳ ನಡುವಿನ ಹೋರಾಟದ ಒಂದು ಬಿಂದು. ವಿವೇಕಾನಂದರ ವಿದೇಶ ಯಾತ್ರೆಯ ಸಂದರ್ಭದಲ್ಲಿನ ಸಾತ್ವಿಕ ಧರ್ಮಪ್ರಚಾರ ಹಾಗೂ ಉಪನ್ಯಾಸಕ್ಕೂ ಕ್ರೈಸ್ತ ಧರ್ಮಿಯರ ಒತ್ತಾಯದ ಈ ಮತಾಂತರಕ್ಕೂ ಇರುವ ವ್ಯತ್ಯಾಸವನ್ನು ಕುವೆಂಪು ತಮ್ಮ ಕೃತಿಯಲ್ಲಿ ಸೂಚ್ಯವಾಗಿ ಚಿತ್ರಿಸಿರುವುದನ್ನು ಕಾಣಬಹುದು.

ಮತ್ತೊಂದು ಸಂದರ್ಭದಲ್ಲಿ ಹಿಂದೂ ಧರ್ಮದ ಮೂಢ ಆಚರಣೆಗಳ ಬಗ್ಗೆ ರೋಸಿ ಹೋಗಿದ್ದ ದೇವಯ್ಯನು ಬ್ರಾಹ್ಮಣರ ಅಹಂಕಾರವನ್ನು ಎದುರಿಸುವ ದೃಶ್ಯವನ್ನು ಕಾಣಬಹುದು. "ಆ ಪ್ರಾಂತ್ಯದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿತರಾಗಿದ್ದು, ಹೆಚ್ಚು ಕಡಿಮೆ ಅವರಷ್ಟೇ ವಯಸ್ಕರಾಗಿದ್ದು, ತನ್ನ ತಂದೆಯನ್ನು ಗೌರವ ಸೂಚಕ ಬಹುವಚನದಿಂದ ಕಲ್ಲಯ್ಯ ಗೌಡರು ಹುಷಾರಾಗಿದ್ದಾರೆಯೇ? ಎನ್ನದೆ ಕಲ್ಲಯ್ಯ ಹುಷಾರಾಗಿದ್ದಾನೆ? ಎಂದು ಏಕವಚನದಿಂದಲೇ ಮಾತನಾಡಿಸಿದುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆದು ನಿಂತು ಸುಳ್ಳಾದರೂ ಚಿಂತೆಯಲ್ಲ. ಈ ಹಾರವನಿಗೆ ಸರಿಯಾಗಿಯೇ ಉತ್ತರ ಹೇಳುತ್ತೇನೆ! ಎಂದು ನಿಶ್ಚಯಿಸಿ ಲಘುವಾಗಿ ನಗುತ್ತಾ ಹೇಳಿದನು. ಯಾರು ಹಳೆ ಪೈಕದ ಕಲ್ಲನಾ? ಅಂವ ಕಳ್ಳ ಒಗನಿ ಕುಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು!".

"ದೇವಯ್ಯನ ಈ ಪ್ರತಿಭಟನೆಯಲ್ಲಿ ಅನುದಿಷ್ಟವಾದ ವ್ಯಂಗ್ಯವಿದೆಯಾದರೂ ಅದು ತನ್ನ ಉದ್ದೇಶವನ್ನು ಯಶಸ್ವಿಯಾಗಿಯೇ ಸಾಧಿಸುತ್ತದೆ. ಆಧುನಿಕತೆಯ ಪರಿಣಾಮವಾಗಿ ಇತಿಹಾಸ ಮೆಲ್ಲನೆ ಚಲಿಸಲಾರಂಭಿಸಿದೆಯೆನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ."

ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ ಇನ್ನೊಂದು ಬಗೆಯದು. ಮೇಗರವಳ್ಳಿಯಲ್ಲಿ ಒಂದು ಬಾವಿಯನ್ನು ಕಟ್ಟಿಸಬೇಕೆಂದಾಗ ಕಣ್ಣಿಲ್ಲದ ಒಂದು ನಿರ್ಜೀವ ಕಡ್ಡಿಗೆ ನೀರಿರುವ ಜಾಗ ಕಂಡದ್ದು ಹೇಗೆ ಎಂಬ ಪ್ರಶ್ನೆ ಕಾಡುತ್ತದೆ. ಆದರೆ ಅಲ್ಲಿ ನೀರಿದ್ದುದು ಮಾತ್ರ ನಿಜ, ಅಲ್ಲಿ ಬಾವಿಯಾದದ್ದೂ ಇತಿಹಾಸದ ಒಂದು ಭಾಗ. ಇವತ್ತಿಗೂ ಇಂಥದೊಂದು ಪ್ರಶ್ನೆ ಪ್ರಜ್ಞಾವಂತರನ್ನು ಕಾಡುತ್ತಲೇ ಇದೆ. ವೈಜ್ಞಾನಿಕವಾಗಿ ನೀರಿರುವ ಜಾಗವನ್ನು ಪರೀಕ್ಷೆ ಮಾಡಿ ಬಾವಿ ತೆಗೆದಾಗ ನೀರು ಸಿಗದ ಪ್ರಸಂಗಗಳು ನಮಗೆ ತಿಳಿದಿವೆ. ಆದರೆ ಕಾಣದ ಈ ಅಗೋಚರ ಶಕ್ತಿಯನ್ನು ಕುವೆಂಪು ಕಾದಂಬರಿಯಲ್ಲಿ ಅನಾಯಾಸವಾಗಿ ಬಳಸಿದ್ದಾರೆ. ಆ ಮೂಲಕ ಪರಂಪರೆಯಲ್ಲಿರುವುದೆಲ್ಲ ತ್ಯಾಜ್ಯವಲ್ಲ. ಸ್ವೀಕರಿಸಬಹುದಾದ ಸಾಕಷ್ಟು ಅಂಶಗಳು ಅಲ್ಲಿವೆ ಎಂಬುದನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ.

ಶೂದ್ರರು ಹಾಗೂ ದಲಿತರ ನಡುವಿನ ಪ್ರತಿಭಟನೆಗೆ ಅತ್ಯುತ್ತಮ ಉದಾಹರಣೆ ಹೊನ್ನಾಳಿ ಹೊಡ್ತದ ಪ್ರಸಂಗ. ಸಣ್ಣ ಬೀರನನ್ನು ಕಲ್ಲಯ್ಯಗೌಡರು ಮರಕ್ಕೆ ಕಟ್ಟಿಸಿ ಹೊಡೆಸುವಾಗ, ತಾಯಿ ಸೇಸೆಯು ಮಗನ ಜೀವ ಕಾಪಾಡಲು ಅದುವರೆಗಿನ ತನ್ನೆಲ್ಲ ಸಾಮಾಜಿಕ ದಿಗ್ಬಂಧನಗಳನ್ನು ಮೀರಿ ನಿಂತು ಮಾತೃತ್ವ ಶಕ್ತಿಯ ಪ್ರತೀಕವಾಗಿ ಆ ಅನ್ಯಾಯದ ವಿರುದ್ಧ ತೀವ್ರವಾಗಿ ಪ್ರತಿಭಟಿಸುತ್ತಾಳೆ.

"ಹೊಲೆಯಳಾದರೂ ಬಡವಳಾದರೂ ಯಾವ ವಿಧವಾದ ವ್ಯಕ್ತಿತ್ವ ವಿಶೇಷವೂ ಲವಲೇಶವೂ ಇಲ್ಲದವಳಾದರೂ ಸಂಕಟತಪ್ತ ತಾಯ್ತನ ಎಂಥ ಅಲ್ಪಸ್ತ್ರೀಯನ್ನಾದರೂ ಭೂಮಪಟ್ಟಕ್ಕೇರಿಸಿ ಬಿಡುತ್ತದೆಯೋ ಏನೋ ಎಂಬಂತೆ ಅವಳ ಮಾತೃದುಃಖಜನ್ಯ ಕ್ರೋಧದ ಸಾನಿಧ್ಯ ಭೀಷಣಿಗೆ ಕ್ಷಣ ಮಾತ್ರ ಭೀತ ಚೇತಸನಾದ ಇಜಾರದ ಸಾಬಿಯು ಗೌಡರ ಆಜ್ಞೆಯನ್ನು ಮರೆತು ಸೇಸಿಯ ಮಾತಿಲ್ಲದ ಅಣತಿಗೆ ಒಳಗಾದವನಂತೆ ಬೇಗ ಬೇಗನೆ ಸಣ್ಣ ಬೀರನನ್ನು ಬಿಗಿದಿದ್ದ ಹಗ್ಗದ ಕಟ್ಟುಗಳನ್ನೆಲ್ಲ ಬಿಚ್ಚಿ ಹಾಕಿದನು".[೧] ಹೀಗೆ ಗೌಡರಿಗೆ ಎದುರಾಗಿ ಮಾತನಾಡುವ ದಿಟ್ಟತನ ತೋರುವುದು ಸಾಮಾನ್ಯ ಸಂಗತಿಯಲ್ಲ. ಇದು ಪ್ರತಿಭಟನೆಯ ಸ್ವರೂಪದ ಚಿತ್ರಣವಾದರೆ, ತರುವಾಯ ಸಣ್ಣಬೀರ ವರ್ತಿಸುವ ರೀತಿ ಸಂಘರ್ಷದ ನೆಲೆಯದು. ಅಂದರೆ ತನ್ನನ್ನು ಹೊಡೆದ ಸಾಬಿಯನ್ನು ಗಾಯಗೊಳಿಸಿ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಆದರೆ ಹಳೆಪೈಕದವರು ಸ್ವಂತ ಭೂಮಿ ಹೊಂದುವ, ಮದುವೆ ಸಮಾರಂಭಗಳಲ್ಲಿ ಗೌಡರಿಗೆ ಸಮಾನವಾಗಿ ನಿಲ್ಲುವ ಅವಕಾಶ ಪಡೆಯಲಾಗುತ್ತಿಲ್ಲ ಸೇಸನಾಯ್ಕನ ಪ್ರಯತ್ನವೆಲ್ಲ ಪ್ರತಿಭಟನೆಯ ಮಟ್ಟದಲ್ಲೇ ಉಳಿದು ಬಿಡುತ್ತದೆ. ಸಂಘರ್ಷಕ್ಕೆ ಕಾರಣವಾಗಬೇಕಿದ್ದ ಈ ಸನ್ನಿವೇಶ ಸರ್ಕಾರದ ಮಧ್ಯಪ್ರವೇಶದಿಂದ ಗೌಡರ ಪರವಾಗಿ ತೀರ್ಪು ಬರುವಂತಾಗುತ್ತದೆ. ವಿಶೇಷವಾದ ಪ್ರತಿಭಟನೆಯ ಮತ್ತೊಂದು ಉದಾಹರಣೆ ಕಲ್ಲಯ್ಯಗೌಡರ ಪತ್ನಿ ದೊಡ್ಡಮ್ಮನದು. ಜೀತದಾಳುಗಳಿಗೆ ಕೊಡುವ ಶಿಕ್ಷೆಯನ್ನು ಆಕೆ ವಿರೋಧಿಸಿದ್ದಳು. ಅಂದರೆ ಇಡೀ ಕಾದಂಬರಿಯಲ್ಲಿ ಗಂಡನಿಗೆ ಬಾಯಿಬಿಟ್ಟು ಬುದ್ಧಿವಾದ ಹೇಳಿದವರೆಂದರೆ ದೊಡ್ಡಮ್ಮ ಹೆಗ್ಗಡತಿಯವರೊಬ್ಬರೇ.

ಈ ವಿಷಯದಲ್ಲಿ ಹೆಂಡತಿ ಎದುರು ಅವರು ತಪ್ಪಿತಸ್ಥರಾಗಿ ತಲೆಬಾಗುತ್ತಿದ್ದರು. ಆದುದರಿಂದಲೇ ಅವರು ಹೆಂಡತಿ ಕಾಣದಂತೆ ದಂಡನಾ ಕಾರ್ಯದಲ್ಲಿ ತೊಡಗುತ್ತಿದ್ದರು.

ಮೂಢನಂಬಿಕೆಗಳ ವಿರುದ್ಧದ ಪ್ರತಿಭಟನೆಯನ್ನು ದೇವಯ್ಯನ ವ್ಯಕ್ತಿತ್ವದಲ್ಲಿ ವಿಶೇಷವಾಗಿ ಕಾಣಬಹುದು. ತನ್ನ ಹೆಂಡತಿ ಜಕಣಿ ಪಂಚ್ರೋಳ್ಳಿ ಮುಂತಾದವುಗಳಿಗೆ ಹರಕೆಯ ರೂಪದಲ್ಲಿ ಕಟ್ಟಿದ ತಂತ್ರ ಮುಡಿಪುಗಳನ್ನು ಕಿತ್ತೊಗೆಯುವ ರೂಪಲ್ಲಿ ಕಾಣಬಹುದು. ಆದರೆ ಇದು ಕೂಡ ಪ್ರತಿಭಟನೆಯ ಹಂತದಲ್ಲಿ ಕೊನೆಗೊಳ್ಳುತ್ತದೆ. ಸಂಘರ್ಷದ ರೂಪತಾಳಿ ಬದಲಾಗುವ ಸನ್ನಿವೇಶ ಗೋಚರಿಸುವುದಿಲ್ಲ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪರಿಸರ ತನ್ನ ಚೆಲುವಿನ ಮುಖದಿಂದ ರಮಣೀಯವೂ ಆಗಿದೆ, ಅಪಾಯ, ವಿಷಮತೆಗಳಿಂದಾಗಿ ರುದ್ರಭೀಕರವೂ ಆಗಿದೆ. ಪ್ರಾಕೃತಿಕ

---

೧. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೩೩೬.

ಸಂಘರ್ಷವೆ ಉಳಿದೆಲ್ಲ ಸಂಘರ್ಷಗಳಿಗಿಂತ ಹೆಚ್ಚು ಪ್ರಭಾವವನ್ನು ಈ ಕೃತಿಯ ಪಾತ್ರಗಳ ಮೇಲೆ ಬೀರಿದೆ. ಪ್ರತಿ ದಿನವೂ ಪ್ರಕೃತಿಯ ತೊಟ್ಟಿಲಲ್ಲಿ ಬದುಕಿರಬೇಕಾದ ಮನುಷ್ಯನ ಕಥೆಯ ವಿಭಿನ್ನ ನೆಲೆಯನ್ನು ಈ ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ಇಲ್ಲಿಯ ಜನರು ತಲೆಮಾರುಗಳಿಂದಲೂ ಪ್ರಾಕೃತಿಕ ಶಕ್ತಿಯ ಹಿಡಿತದಲ್ಲಿ ಜೀವಿಸುತ್ತಲೇ ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಮನುಷ್ಯನು ಪರಿಸರವನ್ನು ಪರಿಸರ ಮನುಷ್ಯನನ್ನು ಪರಸ್ಪರ ಪ್ರಭಾವಿಸುತ್ತಾ ಬಂದಿರುವುದುಂಟು. ಈ ಸಂಬಂಧದ ಸರಳತೆ ಹಾಗೂ ಸಂಕೀರ್ಣತೆ ನಿತ್ಯ ಜೀವನದ ಮೂಲಕ ಪ್ರಕಟವಾಗಿದೆ.

ಕಾದಂಬರಿಯಲ್ಲಿ ಪ್ರಾಣಿಪಕ್ಷಿ; ಮೀನು ಏಡಿ ಇರುವೆ ಬೇಟೆಯ ಪ್ರಸಂಗಗಳಿದ್ದು, ಇವು ಬರುವಲ್ಲೆಲ್ಲ ಸಹಜವಾಗಿ ನಿಸರ್ಗದ ಪ್ರವೇಶವಾಗುತ್ತದೆ. ಮಲೆನಾಡಿನ ಹಸಿರು ಕಾಡಿನ ಪ್ರಾಣಿ-ಪಕ್ಷಿಗಳೆಲ್ಲ ಅಲ್ಲಿಯ ಮನುಷ್ಯನ ಆಹಾರ ಕ್ರೀಡೆ ಸಾಹಸ ಹವ್ಯಾಸಗಳಿಗೆ ಕಾರಣವಾಗಿವೆ. ಇದು ಲಾಭ-ಹಾನಿಗಳ ಭೌತಿಕ ವಿಚಾರ ಮಾತ್ರವಾಗಿರದೆ ಭಾವನಾತ್ಮಕ ಸಂಬಂಧವೂ ಇಲ್ಲಿ ಮುಖ್ಯ ಪಾತ್ರವಹಿಸಿದೆ. ಅಂದರೆ ಕಾಡಿನ ಮೂಲೆಯೊಂದರಲ್ಲಿ ಗುಡ್ಡ-ಬೆಟ್ಟಗಳ ತೊರೆಯ ಮೇಲಿರುವ ಮಲೆನಾಡ ಮನೆಗಳ ಜನರು ಅವರ ನಾಯಿಗಳು, ಸಾಕುಪ್ರಾಣಿ, ಕೋಳಿ, ಹಂದಿಗಳು ನಿತ್ಯ ಹೊರಗಿನ ಪರಿಸರದ ಪೋಷಣೆಯನ್ನು ಪಡೆಯುವುದಾಗಲಿ, ಹೋರಾಟ ನಡೆಸುವುದಾಗಲಿ ಅನಿವಾರ್ಯವಾಗಿತ್ತು.

ಪ್ರಕೃತಿಯ ರುದ್ರಭೀಕರತೆಗೆ ದೊಡ್ಡಣ್ಣ ಹೆಗ್ಗಡೆ. ತೀರಿಕೊಂಡಾಗಿನ ಸನ್ನಿವೇಶ ಅತ್ಯುತ್ತಮ ಉದಾಹರಣೆ. "ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ ಮಳೆಗಾಲ ನಿಲ್ಲುತ್ತದೆಯೇ? ಮಳೆ ಹಿಡಿದು ಕೂತಿತ್ತು. ನಾಲ್ಕು ಪಾದಗಳನ್ನೂ ಬಲವಾಗಿ ಊರಿ! ಮೋಡ ಸದಾ ಕವಿದು ಸೂರ್ಯದರ್ಶನವೆ ಅಪೂರ್ವವಾಯಿತು. ತನ್ನ ದುರ್ದಮ್ಯ ವ್ಯಾಪಾರಗಳನ್ನು ನಿರ್ಲಕ್ಷ್ಯವಾಗಿ ನಿರ್ದಾಕ್ಷಿಣ್ಯವಾಗಿ ಸಾಗಿಸಿತ್ತು, ಬೃಹತ್ ಪ್ರಕೃತಿ. ಆ ಪ್ರಕೃತಿಯ ಪ್ರತಿರೂಪದ ಸಹ್ಯಾದ್ರಿ ಪರ್ವತ ಕಾನನ ಶ್ರೇಣಿ ಮನುಷ್ಯರ ಅಲ್ಪ ಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ ಭೀಷಣ ವರ್ಷಧಾರೆಯಲ್ಲಿ ತೊಪ್ಪನೆ ತೊಯ್ಯುತ್ತಾ, ಹಬ್ಬಿ ಕೊಬ್ಬಿ ನಿಂತಿತ್ತು".[೧] ಹೀಗೆ ಎಡೆಬಿಡದೆ ಸುರಿಯುವ ಮಳೆ, ಅಪರೂಪವಾಗಿ ಕಾಣಿಸುವ ಬಿಸಿಲು ಇಲ್ಲಿ ವಾಸಿಸುವ ಜನರ ಬದುಕನ್ನು ನಿಯಂತ್ರಿಸುತ್ತದೆ. ಸದಾ ಸುರಿಯುವ ಇಂತಹ ಮಳೆಯಲ್ಲಿ ಕಟ್ಟಿಗೆ ಸಂಗ್ರಹಣೆಯಂತಹ ಸಣ್ಣ ಕೆಲಸವೂ ಪ್ರಮುಖ ಪಾತ್ರವಹಿಸುತ್ತದೆ.

---

೧ . ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೪೭೬.

ಕಡೆಯದಾಗಿ ಕುವೆಂಪು ಅವರ ಎರಡು ಕಾದಂಬರಿಗಳ ಪ್ರಾಕೃತಿಕ ಸಂಘರ್ಷದ ಬದುಕನ್ನು ಕುರಿತು ಗುರುಪಾದ ಮರಿಗುದ್ದಿಯವರ ಮೌಲಿಕ ಮಾತುಗಳನ್ನು ಗಮನಿಸುವುದು. "ಕಾದಂಬರಿಗಳಲ್ಲಿಯ ಪರಿಸರ ತನ್ನ ಅಸ್ತಿತ್ವದಿಂದ ಶಕ್ತಿ ಸಾಮರ್ಥ್ಯದಿಂದ, ನದಿ, ಪ್ರವಾಹ, ಗಾಳಿ, ಮಳೆ, ಬೆಂಕಿ, ಬಿಸಿಲು, ಗಿಡ, ಮರ, ಬಳ್ಳಿ, ಪಕ್ಷಿ, ಪ್ರಾಣಿಗಳ ಮೂಲಕ ಪ್ರಸಿದ್ಧವಾಗಿದೆ. ಅದು ಜನರ ಬದುಕನ್ನು ಅವರ ಸಂಸ್ಕೃತಿಯನ್ನು ಕಟ್ಟಿದೆ, ರೂಪಿಸಿದೆ".[೧] ಈ ಮಾತು ಕೃತಿಯ ಅಧ್ಯಯನದಿಂದ ದೃಢಪಡಿಸುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ ಪ್ರಾಕೃತಿಕ ಹಾಗೂ ಮಾನವರ ಎರಡೂ ಕಡೆಯಿಂದ ಎದುರಾಗುವ ಸಮಸ್ಯೆ ಗುತ್ತಿಯ ಪೂರ್ಣತ್ವವನ್ನೇ ನಾಶಗೊಳಿಸಿಬಿಡುತ್ತದೆ. ತುಂಗಾ ನದಿಯನ್ನು ದಾಟಲೆಂದು ಹೊರಟಾಗ ದೋಣಿಯ ಜನರ ನಿರ್ಲಕ್ಷ್ಯ, ದೋಣಿಯವನ ಆಜ್ಞೆ, ಪ್ರವಾಹದ ಅಬ್ಬರ, ಪರಿಸ್ಥಿತಿಯ ಒತ್ತಡ ಈ ಎಲ್ಲವುಗಳಿಂದ ಹುಲಿಯ ನೀರು ಪಾಲಾಗುತ್ತದೆ. ಹುಲಿಯನ ಅಂತ್ಯದೊಂದಿಗೆ ಗುತ್ತಿಯ ಅಸ್ತಿತ್ವವೇ ಇಲ್ಲದಂತೆ ಆತ ಅಪೂರ್ಣ ವ್ಯಕ್ತಿಯಾಗಿ ಉಳಿಯುವಂತಾಗುತ್ತದೆ. ಹೀಗೆ ಇಲ್ಲಿನ ಪರಿಸರದ ಪ್ರಾಕೃತಿಕ ಅಪಾಯ ಇಂಬಳದಿಂದ ಹುಲಿಯವರೆಗೆ ಸಾಲು-ಸಾಲಾಗಿ ನಿಂತು ಸಂಘರ್ಷ ಪರಂಪರೆಗೆ ಎಡೆ ಮಾಡಿಕೊಟ್ಟಿದೆ.

---

೧. ಕುವೆಂಪು ಕಾದಂಬರಿಗಳು-ಸಂ:ಗುರುಪಾದ ಮರಿಗುದ್ದಿ:ಕುವೆಂಪು ಕಾದಂಬರಿಗಳಲ್ಲಿ ಪರಿಸರ, ಪು.ಸಂ.೨೦೨(೩೦೩).

ಅಧ್ಯಾಯ–೮

ದಲಿತ ಪ್ರಜ್ಞೆ

ಕನ್ನಡ ಸಾಹಿತ್ಯ ಪಂಪನ ಹೊರತಾಗಿ ಬಹುವಾಗಿ ನಿರ್ಲಕ್ಷಿಸಿದ್ದ ಸಾಮಾನ್ಯ ಮನುಷ್ಯರು ಕುವೆಂಪು ಕೃತಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಕುವೆಂಪು ಶ್ರದ್ಧೆಯಿಂದ ಪ್ರಸ್ತಾಪಿಸುವ ದಲಿತ ಜೀವನ ಕನ್ನಡ ಸಾಹಿತ್ಯದ ಒಂದು ಹೊಸ ತರಂಗ. ಕುವೆಂಪು ತಮ್ಮ'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಚಿತ್ರಿಸಿರುವ ದಲಿತ ಚಿತ್ರಣ ಕೇವಲ ಆಕಸ್ಮಿಕವಲ್ಲ, ಅದು ಅವರ ಪ್ರಜ್ಞಾವಲಯದ ಕೇಂದ್ರ ಕೂಡ. ಈ ಪ್ರಜ್ಞೆಗೆ ಕುವೆಂಪು ಅವರು ರೂಪುಗೊಂಡು ಬಂದ ಸಾಮಾಜಿಕ ಪರಿಸರವೂ ಕಾರಣವಾಗಿದೆ. ವಿಶೇಷವೆಂದರೆ ಪ್ರಜಾಪ್ರಭುತ್ವವಾದಿಯೂ, ಸಮಾನತಾವಾದಿಯೂ ಆದ ಕುವೆಂಪು ತಮ್ಮೆಲ್ಲ ಆದರ್ಶ ಆಧ್ಯಾತ್ಮಿಕ ಕಾಳಜಿಗಳ ನಡುವೆಯೂ ಸಮಾಜವಾದಿ ತಾತ್ವಿಕತೆಯಿಂದ ಪ್ರಭಾವಗೊಂಡಿರುವುದು. ಅವರ ಕಾದಂಬರಿಯುದ್ದಕ್ಕೂ ಶ್ರಮಿಕರ–ಬಡವರ ಬಗೆಗೆ ಶ್ರದ್ಧೆ ಪ್ರೀತಿಯನ್ನು ಕಾಣಬಹುದು. ಬಡವರ ಬಗೆಗಿನ ಅದರಲ್ಲೂ ದಲಿತರ ಜೀವನದ ಸಂವೇದನೆಗಳ ಚಿತ್ರಣವು ಪ್ರೀತಿಯಿಂದ 'ಮಲೆಗಳಲ್ಲಿ ಮದುಮಗಳು' ಸೃಜನಶೀಲವಾಗಿದೆ.

ಕುವೆಂಪು ತಮ್ಮ ಕಾವ್ಯದಲ್ಲಿ ಒಂದು ತತ್ತ್ವವಾಗಿ ಚಿತ್ರಿಸಿದ ವರ್ಗ ಪ್ರಜ್ಞೆ, ಕಾದಂಬರಿಯಲ್ಲಿ ಮೂರ್ತ ವಾಸ್ತವದ ಚಿತ್ರಣವಾಗಿ ಬಂದಿದೆ. ಕಾದಂಬರಿಯಲ್ಲಿ ಬರುವ ಶ್ರೇಣಿಕರಣವನ್ನು ಪುರೋಹಿತರು, ಭೂ ಮಾಲೀಕರು, ಸೆರೆಗಾರರು, ವ್ಯಾಪಾರಿಗಳು, ಗೇಣಿದಾರರು, ಜೀತದಾಳುಗಳು, ಸ್ತ್ರೀಯರು, ಅನ್ಯಮತೀಯರು ಎಂದು ವರ್ಗೀಕರಿಸಬಹುದು. ಮೇಲು ನೋಟಕ್ಕೆ ಕಾದಂಬರಿ ಜಮೀನ್ದಾರರು ಮತ್ತು ಅವರ ಮಕ್ಕಳ ಏಳುಬೀಳಿನ ಕಥೆಯಂತಿದೆ. ಆದರೆ ಲೇಖಕನ ಮಾನವೀಯ ದೃಷ್ಟಿ ದುರ್ಬಲ ವರ್ಗಗಳ ಪರವಾಗಿದೆ. ಆದರೆ ವ್ಯವಸ್ಥೆ ಬಗೆಗಿನ ದುರ್ಬಲರ ಪ್ರತಿಭಟನೆ ಸಂಕೀರ್ಣ ಸ್ವರೂಪ ಪದೆದಿದೆ. ಇದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. ಅಂದರೆ ಕುವೆಂಪು ರಚಿಸಿರುವ ಜಗತ್ತು ಇನ್ನೂ ತೀವ್ರತರವಾದ ಎಚ್ಚರಿಕೆಯನ್ನು ಪಡೆದಿರಲಿಲ್ಲ. ಕೃತಿಕಾರರು ತಮ್ಮ ಕೃತಿಯಲ್ಲಿ ಸಂಘರ್ಷವನ್ನು ತೀವ್ರವಾಗಿ ಚಿತ್ರಿಸಬಹುದಾಗಿದ್ದು, ಸಾಧ್ಯತೆಗಳಿದ್ದರೂ ಚಿತ್ರಿಸಿಲ್ಲ. ಅಂದರೆ ವಾಸ್ತವತವಾದಿ ನೆಲೆಯ ಬದುಕು ಇಲ್ಲಿ ಪ್ರಾಧಾನ್ಯವನ್ನು ಪಡೆದಿದೆ. ಬದುಕು ಇದ್ದಂತೆ ಚಿತ್ರಿಸುವುದರ ಮೂಲಕವೇ ದುರ್ಬಲ ವರ್ಗದವರನ್ನು ಜಾಗೃತಗೊಳಿಸುವ ನೆಲೆ ಇಲ್ಲಿದೆ. ನಡೆದಿಲ್ಲದ್ದನ್ನು ನಡೆದಿದೆ ಎಂದು ಚಿತ್ರಿಸುವುದು ಬಹುತೇಕ ಸಂದರ್ಭದಲ್ಲಿ ಕೃತಿಯಲ್ಲೆ ಉಳಿದುಬಿಡುವ ಸಾಧ್ಯತೆಗಳೇ ಹೆಚ್ಚು. ಪುರೋಹಿತಶಾಹಿಗಳ ವಿರುದ್ಧ ಹೋರಾಡುವ ದೇವಯ್ಯ, ಜೀತ ಪದ್ಧತಿಯನ್ನು ನಿಲ್ಲಿಸುವ ಪ್ರಯತ್ನ ಮಾಡುವುದಿಲ್ಲ. ಆ ಹೊತ್ತಿನಲ್ಲಿ ಮಲೆನಾಡಿನ ಪರಿಸರ

ಇದಕ್ಕೆ ಪಕ್ವವಾಗಿತ್ತೇ ಎಂಬ ಎಚ್ಚರದಲ್ಲೇ ಲೇಖಕನ ಬರವಣಿಗೆ ಸಾಗಿದೆ. ಆದರೆ ಜಮೀನ್ದಾರೀ ಕ್ರೌರ್ಯಗಳ ವಿರುದ್ಧ ದುಡಿವ ವರ್ಗದವರ ಸ್ಥಿತಿಯ ಬಗೆಗೆ ಅಪಾರ ಸಹಾನುಬೂತಿ, ಕುವೆಂಪು ಅವರಿಗಿದೆ. ಈ ಸಹಾನುಭೂತಿಯ ಕಾರಣದಿಂದಲೇ ಮಲೆನಾಡ ಒಕ್ಕಲಿಗರ ಬಗೆಗಿನ ವಿರೋಧ ನಿಚ್ಚಳವಾಗಿ ಕಾಣುತ್ತದೆ. ಕೃತಿಯುದ್ದಕ್ಕೂ ಗೌಡರ ಮನೆತನದ ಕ್ರೌರ್ಯ ಹಾಗೂ ದುಷ್ಕೃತ್ಯಗಳನ್ನು ಯಾವ ಮುಜುಗರವಿಲ್ಲದೆ ಚಿತ್ರಿಸಿದ್ದಾರೆ.

ಸಾಲ ಕೊಡುವ ಮೂಲಕ ಇಲ್ಲಿನ ಒಡೆಯರು, ವ್ಯಾಪಾರಿಗಳು ದುಡಿವ ವರ್ಗದ ಬದುಕನ್ನೇ ನಿಯಂತ್ರಿಸಬಲ್ಲವರಾಗಿದ್ದಾರೆ. ಪ್ರತಿಯೊಬ್ಬ ಜೀತದಾಳು ಕೂಡ ಪೂರ್ವಜರ ಸಾಲಕ್ಕೆ ಹಕ್ಕುದಾರನಾಗಿರುತ್ತಾನೆ. ಹಾಗೆ ನೋಡಿದರೆ ಈ ಮಲೆನಾಡಿನ ಆರ್ಥಿಕ ಜೀವನದಲ್ಲಿ ಸಣ್ಣಪುಟ್ಟ ರೈತವರ್ಗ ಹೆಚ್ಚು ಕಡಿಮೆ ಇಲ್ಲವೇ ಇಲ್ಲ. ಶ್ರೀಮಂತ ಭೂಮಾಲೀಕರು ಮತ್ತು ಅಪಾರ ಸಂಖ್ಯೆಯ ಜೀತದಾಳು ಇದ್ದಾರೆ.

ಜಾತಿಯ ನಂಬಿಕೆಗಳು ಮನುಷ್ಯ ಸಂಬಂಧಗಳನ್ನು ಯಾವೆಲ್ಲ ದೃಷ್ಟಿಕೋನದಲ್ಲಿ ನೋಡುತ್ತವೆ ಎಂಬುದು ಊಹೆಗೂ ಮೀರಿದ್ದು, ತನ್ನ ಹೆಂಡತಿಯನ್ನೆಂದೂ ಅಗಲಿರದ ಐತ, ಮುಕುಂದಯ್ಯನೊಡನೆ ಪೀಂಚಲುವನ್ನು ಬಿಟ್ಟಿರಬಲ್ಲನೇಕೆಂದರೆ ಕೀಳುಜಾತಿಯವರಾಗಿದ್ದ ತಾವು ಪ್ರತ್ಯೇಕವಾದ ಪ್ರಾಣಿ ವರ್ಗಕ್ಕೆ ಸೇರಿದವರೋ ಎಂಬಂತೆ, ಮೇಲು ಜಾತಿಯ ಮನುಷ್ಯ ವರ್ಗಕ್ಕೆ ಸೇರಿದ ಮುಕುಂದಯ್ಯನ ಮೋಹಕ್ಕೆ ಪಕ್ಕಾಗುವುದಿಲ್ಲ ಎಂಬ ನಂಬಿಕೆಯಿಂದ. ಇಂತಹ ನಂಬಿಕೆ ಹಾಗೂ ಭಾವನೆಗಳಿಂದ ಸಿಗುವ ಲೈಂಗಿಕ ರಕ್ಷಣೆಗಳಿಗಿಂತ ಭೀಕರವಾದದ್ದು. ಮನುಷ್ಯ ಸಂಬಂಧಗಳ ಬಗೆಗಿನ ಬಿರುಕು ಹೊಲೇರು ಗಾಡಿ ಹೊಡೆಯುವುದಕ್ಕೆ ಶಂಕರ ಹೆಗ್ಗಡೆ ಮಾಡುವ ವಿರೋಧ ಗಮನಾರ್ಹವಾದದ್ದು. ಒಮ್ಮೆ ಗುತ್ತಿಗೆ ತಾನು ತುಂಬ ಸಂಕಟಗಳಲ್ಲಿ ಸಿಲುಕಿಕೊಂಡಾಗ ನಾನು ಹೊಲೆಯನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹಿಂಗಾಗ್ತಿತ್ತೇ? ಎನ್ನುವಷ್ಟರ ಮಟ್ಟಿಗೆ ಜಾತಿಯ ಕರಾಳ ರೂಪವಿದೆ.

ದಲಿತರ ಸ್ತ್ರೀಯರ ಸ್ಥಿತಿ ಇನ್ನು ಶೋಚನೀಯವಾದದ್ದು, ತನ್ನ ಮಗಳ ಮದುವೆ ಬಗ್ಗೆ ಸೇಸಿಯ ಪ್ರತಿಕ್ರಿಯೆ ನೋಡಿದರೆ ಈ ಅಂಶ ಮನದಟ್ಟಾಗುತ್ತದೆ. "ಧಣೀರು ಹಿರೇರು ಸೇರಿ ನಿಶ್ಚಯಿಸಿಬಿಟ್ಟಿದ್ದಾರೆ. ನಾವು ಹೆಣ್ಣು ಹೆಂಗಸರು ಏನು ಮಾಡಕಾಗ್ತದಪ್ಪಾ? ನಮ್ಮನ್ನೇನು ಕೇಳ್ತಾರಾ? ಕೋಳಿ ಕೇಳಿ ಕಾರಾ ಕಡೀತಾರಾ?"[೧] ಕುರೂಪಿಯಾದ ತಿಮ್ಮಪ್ಪ ಹೆಗ್ಗಡೆಯನ್ನು ಚೀನಿ ನಾಯಿಗೂ ಅವನು ಬಳಸುವ ದಲಿತ ಹೆಣ್ಣನ್ನು ದದ್ದು ಹಿಡಿದ ಕಂತ್ರಿನಾಯಿಗೂ

೧. ಮಲೆಗಳಲ್ಲಿ ಮದುಗಳು –ಕುವೆಂಪು:ಪು.ಸಂ.೧೬೩.

ಹೋಲಿಸಿರುವುದು, ಕುವೆಂಪು ಅವರ ವ್ಯಕ್ತಿತ್ವಕ್ಕೆ ತಕ್ಕುದಲ್ಲ. ಇಂತಹ ಹಲವು ಪ್ರಶ್ನೆಗಳನ್ನು ಹೆಕ್ಕಿ ಬಿ.ಕೃಷ್ಣಪ್ಪನವರು ಪ್ರಶ್ನಿಸಿರುವುದು ಲೇಖಕನನ್ನು ಎಲ್ಲೊ ಒಂದೆಡೆ ಕಾಡುವ ಮೇಲು ಕೀಳಿನ ವ್ಯತ್ಯಾಸದ ಆಳವನ್ನು ಹೇಳಿಬಿಡುತ್ತದೆ. ಅಕ್ಕಣಿ ರಂಗಪ್ಪಗೌಡರ ಲೈಂಗಿಕ ವಸ್ತುವಾಗಿ ಪರಿಸ್ಥಿತಿಯ ಕೈಗೊಂಬೆಯಾಗುವುದು, ಹೂವಿ ತಿಮ್ಮಪ್ಪ ಹೆಗ್ಗಡೆಯ ಕೀಳು ಅಭಿರುಚಿಗೆ ಸಿಲುಕಿ ಸುಮ್ಮನಿರುವುದು – ದಲಿತ ಸ್ತ್ರೀಯರ ಅಸಹಾಯಕತೆಯನ್ನು ತಿಳಿಸುತ್ತದೆ. ತಿಮ್ಮಿಯೊಟ್ಟಿಗೆ ಗುತ್ತಿ ಇದ್ದರು, ಆಕೆಯನ್ನು ಲೈಂಗಿಕ ಭಾವದ ದೃಷ್ಟಿಯಿಂದ ಚಂದ್ರಯ್ಯಗೌಡ ನೋಡುವುದು ಕೂಡ ದಲಿತ ಸ್ತ್ರೀಯ ಅಭದ್ರತೆಯ ಲಕ್ಷಣವೇ ಆಗಿದೆ. ಎಚ್ಚರಿಕೆಯಿಂದ ಗಮನಿಸುವುದಾದರೆ ಹೊಸದಾಗಿ ತೆರೆದ ಸ್ಕೂಲಿಗೆ ದೇವಯ್ಯ ಸೇರಿಸಬೇಕೆಂದು ಹೇಳುವ ಹುಡುಗರ ಪಟ್ಟಿಯಲ್ಲಿ ಒಬ್ಬ ಜೀತದಾಳಿನ ಮಗನ ಹೆಸರು ಇಲ್ಲದಿರುವುದು. ಮೇಲ್ವರ್ಗದವರ ಇಷ್ಟೆಲ್ಲಾ ದೌರ್ಜನ್ಯಗಳ ನಡುವೆಯು ದಲಿತರ ಮನಸ್ಸಿನ ಶ್ರೀಮಂತಿಕೆ ಮೆಚ್ಚುವಂತದ್ದು. ಈ ಒಂದು ಗುಣದಿಂದಲೇ ದಲಿತರು ಬಿಡುಗಡೆ ಹೊಂದಲು ಇರುವ ಪ್ರಬಲ ತೊಡಕು. ಅವರ ಪ್ರೀತಿ ವಿಶ್ವಾಸಕ್ಕೆ ಕೊನೆಯೇ ಇಲ್ಲ. ನಾಯಿಯೊಂದು ಕೀಳುವರ್ಗದ ಪ್ರಾಣಿಯೆಂದು ಎಂದೂ ಗುತ್ತಿ ತಿಮ್ಮಿಯರಿಗೆ ಅನಿಸುವುದಿಲ್ಲ. ಹುಲಿಯ ನಿಸರ್ಗದ ಸಂಕೇತ. ನಿಸರ್ಗಕ್ಕೂ ಹುಲಿಯನಿಗೂ ಅಂತರವಿಲ್ಲ. ಅದರ ಬಗ್ಗೆ ಗುತ್ತಿ–ತಿಮ್ಮಿಯರಿಗೆ ಇರುವ ತೀವ್ರವಾದ ಪ್ರೀತಿ, ವಾತ್ಸಲ್ಯ ನಿಸರ್ಗದೊಡನೆ ಅವರಿಗಿರುವ ಪ್ರೀತಿ ವಾತ್ಸಲ್ಯವೇ ಗುತ್ತಿ ತಿಮ್ಮಿಯರು ಕೀಳು ಜಾತಿಯವರು ಅವರನ್ನು ಮನೆಯೊಳಗೆ ಸೇರಿಸಬೇಕೆ, ಬೇಡವೇ, ಎನ್ನುವ ಭಾವಗಳಿಗೆ ಒಳಗಾಗದೆಯೆ ಅವರ ಕಷ್ಟದಲ್ಲಿ ತಮ್ಮೆಲ್ಲ ಸಹಾಯವನ್ನು ನೀಡುತ್ತಾರೆ. ಅವರ ಸುಖ ತಮ್ಮ ಸುಖವೆಂದು ತಿಳಿಯುತ್ತಾರೆ. ಮುಕುಂದಯ್ಯ ಚಿನ್ನಮ್ಮನಿಗೆ ತಿಮ್ಮಿ–ಗುತ್ತಿಯಾದಿಯಾಗಿ ಸಹಾಯಕ್ಕೆ ನಿಲ್ಲುತ್ತಾರೆ. ಚಿನ್ನಮ್ಮ ಅನುಭವಿಸುತ್ತಿರುವ ನೋವು ಪಿಂಚಲುವಿನ ಕರುಳಿರಿಯುತ್ತದೆ. ಶೋಕತಪ್ತ ಚಿನ್ನಮ್ಮನ ನೆನಪಿನಿಂದ ದುಃಖ ಉಕ್ಕಿಬರುತ್ತದೆ. ಅಪ್ಪುಗೆಯ ಸುಖದಲ್ಲಿದ್ದರೂ ಅವರ ಕಷ್ಟಕ್ಕಾಗಿ ಪರಿತಪಿಸುವ, ಅವರ ಸುಖಕ್ಕಾಗಿ ಹಂಬಲಿಸುವ ಐತ ಮತ್ತು ಪಿಂಚಲು ಮಾನವೀಯತೆಯ ಸಂಕೇತಗಳು. ಚಿನ್ನಮ್ಮ ತಾನೊಬ್ಬಳೇ ಗಂಡಸರ ಸಂಗಡ ಹೋಗಲು ಸಂಕೋಚಪಟ್ಟು ತನ್ನ ಕಡೆ ಯೋಚನಾ ದೃಷ್ಟಿಯಿಂದ ನೋಡಿದ ತಕ್ಷಣ ಪೀಂಚಲು ತನ್ನೆಲ್ಲ ದಣಿವನ್ನು ಮರೆತು, ಬಸಿರ ಭಾರ, ಕಾಡಿನ ಜಿಗಣೆ, ಮುಳ್ಳು, ಕೆಸರು ಒಂದನ್ನೂ ಲೆಕ್ಕಿಸದೆ ಹುಲಿಕಲ್ಲು ಗುಡ್ಡದ ಭಯಂಕರ ಕಾಡಿಗೆ ಹೊರಟು ಬಿಡುತ್ತಾಳೆ. ಐತ ಮತ್ತು ಪಿಂಚಲು ಪ್ರಕಟಿಸುವ ಮಾನವೀಯತೆ ಯಾವ ಮಾನವ ನಿರ್ಮಿತ ಮೌಲ್ಯಗಳಿಂದ ಬಂದದ್ದಲ್ಲ. ಅದು ಅವರ ಸದ್ಯಸ್ಥಿತಿಯ ಸಹಜ ತುಡಿತ. ಮುಕುಂದಯ್ಯ ಚಿನ್ನಮ್ಮರೊಡನೆ ಗುತ್ತಿ–ತಿಮ್ಮಿ, ಐತ–ಪೀಂಚಲುವಿನ ಸ್ನೇಹ ಸಹಕಾರಗಳು ದಲಿತರ ಭಾವ ಸಮೃದ್ಧಿಯ ಕೆಲವು ನಿದರ್ಶನಗಳನ್ನು

ಹೀಗೆ ಗುರುತಿಸಬಹುದು. ಕುವೆಂಪು ಅವರು ಜಮೀನ್ದಾರ ವರ್ಗದಿಂದ ಒಂದು ಕೆಳ ವರ್ಗದವರ ಮೇಲಿನ ಪ್ರೀತಿ, ಸಹಾನುಭೂತಿಗಳಿಂದ ತನ್ನ ಜನಾಂಗದ ಕ್ರೌರ್ಯಗಳನ್ನೆಲ್ಲ ಚಿತ್ರಿಸಿದ್ದಾರೆ.

ಜನಸಾಮಾನ್ಯರ ಮುಗ್ಧ ಬಾವುಕತೆಯನ್ನು ಕಾದಂಬರಿಯಲ್ಲಿ ಬರುವ ಆಳುವ ವರ್ಗ ತನ್ನ ಅಸ್ತಿತ್ವಕ್ಕೆ ಸಮರ್ಥವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ತಮ್ಮದೇನೂ ತಪ್ಪಿಲ್ಲದಿದ್ದರೂ ಕೆಳವರ್ಗವೆಲ್ಲ ಪೊಲೀಸು–ಲಾಕಪ್ಪುಗಳಿಗೆ ಹೆದರುತ್ತದೆ. ಹಳೆಪೈಕದವರ ದಿಬ್ಬಣದಲ್ಲಿ ಮದುವೆ ಗಂಡು ಕುದುರೆ ಹತ್ತಬಾರದು, ದಂಡಿಗೆ ಬಳಸಬಾರದು ಎಂಬ ಒಕ್ಕಲಿಗರ ಒತ್ತಾಯಕ್ಕೆ ಸರ್ಕಾರವೂ ಸಮ್ಮತಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕೃತಿಯಲ್ಲಿ ಸಮರ್ಥವಾದ ಕಾರಣ ದೊರೆಯುತ್ತದೆ. "ಸರ್ಕಾರದ ಇತ್ಯರ್ಥಕ್ಕೆ ಕಾರಣ ನ್ಯಾಯಪಕ್ಷತವಾಗಿರಲಿಲ್ಲ; ಬಲಪಕ್ಷವಾಗಿತ್ತು. ಬಲಿಷ್ಠರೂ ಬಹುಸಂಖ್ಯೆಯವರೂ ಆದವರ ಕಡೆ ಸರ್ಕಾರವಿದ್ದರೆ ಅದಕ್ಕೂ ಕ್ಷೇಮ; ನ್ಯಾಯ ರಕ್ಷಣೆಗೂ ಸುಲಭ ಸಾಧ್ಯ".[೧] ಜಾತಿ ವ್ಯವಸ್ಥೆಯಲ್ಲಿ ದಲಿತರಿಗಿಂತ ಮೇಲಿನ ಸ್ಥಾನದಲ್ಲಿರುವ ಹಳೆಪೈಕದವರ ಸ್ಥಿತಿಯೇ ಹೀಗಿದೆ. ಅಂದ ಮೇಲೆ ಇನ್ನುಳಿದವರ ಸ್ಥಿತಿ ದಯನೀಯವಾಗಿದೆ.

"ಭೂ ಮಾಲೀಕರ ಕ್ರೌರ್ಯ ಮತ್ತು ದುಡಿವ ವರ್ಗದ ದಯನೀಯ ಸ್ಥಿತಿಯ ಚಿತ್ರಣದಲ್ಲಿ ಲೇಖಕನ ಸಂಶಯವು, ಆ ಕ್ರೌರ್ಯದ ತೀವ್ರತೆಯನ್ನು ಹೆಚ್ಚಿಸಿ ಬಿಟ್ಟಿದೆ".[೨] ಎನ್ನುವ ಮಾತು ಸತ್ಯವಾಗಿದೆ. ಜೀತದಾಳು ಹೊಲೆಯನೊಬ್ಬನ ಎದೆಮೇಲೆ ಹಲಗೆ ಹಾಕಿ ಮೆಟ್ಟಿಸಿ ಅವನು ರಕ್ತಕಾರಿ ಸತ್ತದ್ದು, ಸಣ್ಣ–ಬೀರನಿಗೆ ಬೀಳುವ ಹೊನ್ನಾಳಿ ಹೊಡ್ತ ಇವೆಲ್ಲ ಊಳಿಗಮಾನ್ಯ ವ್ಯವಸ್ಥೆಯ ಬರ್ಬರತೆಗೆ ನಿದರ್ಶನವಾಗಿದೆ. ವಾಲಗವನ್ನು ಸವಿಯುತ್ತಿದ್ದ ತಿಮ್ಮುವಿಗೆ ಅದನ್ನು ನುಡಿಸುತ್ತಿರುವವನು 'ಕೀಳು ಜಾತಿಯ ಹೊಲೆಯನಾಗಿ, ದನಕಾಯುವವನಾಗಿ, ಗೊಬ್ಬರಗಿಬ್ಬರ ಹೊತ್ತುಗದ್ದೆ ತೋಟಗಳಲ್ಲಿ ತಾವು ಹೇಳಿದಂತೆ ಕೆಲಸ ಮಾಡಿಕೊಂಡಿರುವ ಬಡು ತಿನ್ನುವ ಜೀತದಾಳು ಬೈರನೆಂದು ತಿಳಿದಾಗ, ಅವಮಾನದಿಂದ ಮುಖ ಸಣ್ಣಗಾಗಿ ಬಿಡುತ್ತದೆ. ಜಾತಿ ವ್ಯವಸ್ಥೆಯ ಕರಾಳತೆ ಎಳೆಯ ಮಕ್ಕಳ ತನಕ ವ್ಯಾಪಿಸಿದೆ. ದಲಿತರು ಗೌರವ ತರುವ ಯಾವುದನ್ನು ಹೊಂದಲು ಮಲೆನಾಡಿನ ಆ ವ್ಯವಸ್ಥೆ ಬಿಡುತ್ತಿರಲಿಲ್ಲ.

ಗುತ್ತಿ ತನ್ನ ನಾಯಿಗೆ 'ಹುಲಿಯ' ಎಂದಾಗ ದೋಣಿಯಲ್ಲಿನ ಜನರೂ ವ್ಯಂಗ್ಯವಾಡುತ್ತಾರೆ. ಹೀಗೆ ಅವಕಾಶ ಸಿಕಲೆಲ್ಲ ಅಸ್ಪೃಶ್ಯರ ಬಗೆಗಿನ ಮೇಲ್ಜಾತಿಯವರ ಭಾವನೆಯನ್ನು ನಿಷ್ಠುರವಾಗಿ

---

೧. ಕುವೆಂಪುರವರು ಮಲೆಗಳಲ್ಲಿ ಮದುಮಗಳು ಕಾದಂಬರಿ:ಪು.ಸಂ.೧೨.

೨. ಕುವೆಂಪು ಕಾದಂಬರಿಗಳು ಸಂ: ಗುರುಪಾದ ಮರಿಗುದ್ದಿ: ಕುವೆಂಪು ಕಾದಂಬರಿಗಳು ಸಂಘರ್ಷ ಸ್ವರೂಪ–ರಹಮತ್ ತರೀಕೆರೆ:ಪು.ಸಂ.೨೧೪.

ಹೊರಗಳೆಯುತ್ತಾರೆ, ಕುವೆಂಪು. ಉದಾಹರಣೆಗೆ ಹೆಗ್ಗಡೆಯವರು ಹಂದಿಯ ಹೇಲುಗೆಸರನ್ನೂ ಲೆಕ್ಕಿಸದೆ ಮುಟ್ಟುತ್ತಾ ಇತರ ಅಸ್ಪೃಶ್ಯರಿಂದ ದೂರ ಸರಿದು ನಿಂತರು". ತಾನು ಮುಟ್ಟುತ್ತಿರುವ ವಸ್ತು ಮತ್ತು ತನ್ನೆದುರಿಗಿರುವ ತನ್ನಂಥ ಜನ ಇವೆರಡರ ಬಗೆಗಿನ ಸುಬ್ಬಣ್ಣ ಹೆಗ್ಗಡೆಯ ವಿರೋಧಭಾಸದ ನಿಲುವನ್ನು ಇಲ್ಲಿ ಗುರುತಿಸಬಹುದು. ಇಂತಹ ಸಾಮಾಜಿಕ ಗ್ರಹಿಕೆಯು, ದಲಿತರ ಶಕ್ತಿ, ಪ್ರತಿಭೆ ಸೌಂದರ್ಯಗಳನ್ನು ಕಣ್ತೆರೆದು ಕಾಣದಷ್ಟು ಅನಾದಾರವೂ ಆಗುವಂತೆ ಮಾಡಿವೆ.

ಉಪಸಂಹಾರ

ಅರ್ಥ ಮತ್ತು ವ್ಯಾಪ್ತಿ

'ಮಲೆಗಳಲ್ಲಿ ಮದುಮಗಳು' ಎಂಬ ಶೀರ್ಷಿಕೆಯ ಔಚಿತ್ಯಪೂರ್ಣವಾಗಿದೆ. ಇದೇ ಕಾದಂಬರಿಯ ಕೇಂದ್ರ ಎಂಬ ಸ್ಪಷ್ಟ ಸೂಚನೆಯಿದೆ. ತಿಮ್ಮಿ-ಗುತ್ತಿ, ಚಿನ್ನಮ್ಮ-ಮುಕುಂದಯ್ಯರ ಕಥೆಗಳಲ್ಲಿ ಸಾದೃಶ್ಯ ಹಾಗೂ ವೈದೃಶ್ಯಗಳನ್ನು ಕಾಣಬಹುದು. ತಿಮ್ಮಿ-ಗುತ್ತಿ, ಜೀವರತ್ನಯ್ಯ-ಮುಕುಂದಯ್ಯ, ಇವರ ಕಥೆಗಳಲ್ಲದೆ ಹಲವಾರು ಬೇರೆ ಕಥೆಗಳ ಎಳೆಗಳೂ ಕಾದಂಬರಿಯ ವಸ್ತುಜಾಲದಲ್ಲಿ ಸೇರಿಕೊಂಡಿವೆ. 'ಮಲೆಗಳಲ್ಲಿ ಮದುಮಗಳು' ಕೃತಿಯನ್ನು ಹಲವಾರು ಚೌಕಟ್ಟುಗಳಲ್ಲಿ ವಿಮರ್ಶಕರು ಈಗಾಗಲೇ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಸಂಶೋಧನ ವ್ಯಾಪ್ತಿಯಲ್ಲಿ ಒಟ್ಟು ಎಂಟು ಅಧ್ಯಾಯಗಳಲ್ಲಿ ಕೃತಿಯ ಅಧ್ಯಯನ ನಡೆದಿದೆ.

ಕಾದಂಬರಿಯಲ್ಲಿ ಕಥೆ ನಡೆಯುವ ಕಾಲ ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿಯ ಒಂದು ಅತ್ಯಂತ ಮಹತ್ವದ ಸಂಧಿಕಾಲ. ನಿಧಾನವಾಗಿಯಾದರೂ ಸ್ಪಷ್ಟವಾಗಿ ಹಳೆಯ ಕಾಲದುವೆನ್ನಬೇಕಾದ ಬದುಕಿನ ರೀತಿ-ನೀತಿಗಳು, ರೂಢಿ ಸಂಪ್ರದಾಯಗಳು ಹೊಸ ಕಾಲದ ಪ್ರಭಾವ ಒತ್ತಡಗಳಿಗೆ ಒಳಗಾಗುತ್ತಿದ್ದು ಕಾಲಾವಧಿ ಅದು. ಇದುವರೆಗಿನ ಅಧ್ಯಯನದಲ್ಲಿ ಈ ಕಾದಂಬರಿಯ ಗುಣವಿಶೇಷಗಳ ವಿಶ್ಲೇಷಣೆಯನ್ನು ನೋಡಿದ ಅನೇಕರಲ್ಲಿ ಒಂದು ಬಗೆಯ ಪ್ರಶ್ನೆ ಕಾಡಬಹುದು. ಈ ಕಾದಂಬರಿಯಲ್ಲಿ ಯಾವ ಬಗೆಯ ದೋಷಗಳೂ ಇಲ್ಲವೆ ಎಂಬುದು ಈ ಪ್ರಶ್ನೆ. ದೋಷಾನ್ವೇಷಣೆಯ ಕೃತಿಯ ಮೌಲ್ಯಮಾಪನದಲ್ಲಿ ಮುಖ್ಯವಲ್ಲದಿದ್ದರು ಕೂಡ ಬಂದ ಕೊರತೆಗಳನ್ನು ಆಯಾ ಅಧ್ಯಾಯಗಳಲ್ಲಿ ಗುರುತಿಸಲಾಗಿದೆ. ಕಾದಂಬರಿಯ ಗುಣವಿಶೇಷಗಳು, ದೋಷಗಳನ್ನು ಬಹುತೇಕ ಇಲ್ಲವಾಗಿಸಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿಯ ಅತ್ಯುತ್ತಮ ಕೃತಿ. ಈ ಕೃತಿಯೊಂದು ಸಾಹಿತ್ಯ ಕ್ಷೇತ್ರದಲ್ಲಿನ ಪರಮೋಚ್ಛ ಸಿದ್ಧಿ ಎಂದು ಸಾಧಿಸಲು ಎಲ್ಲಿಯೂ ಪ್ರಯತ್ನಿಸಿಲ್ಲ. 'ಮಲೆಗಳಲ್ಲಿ ಮದುಮಗಳು'ವಿನ ದೃಶ್ಯಪರಂಪರೆ ಸುದೀರ್ಘವಾಗಿರುವುದರಿಂದ ಎಲ್ಲವನ್ನು ಅಚ್ಚಳಿಯದೆ ಉಳಿಸಿಕೊಳ್ಳುವುದು ಕಷ್ಟಕಾರ್ಯ. ಮನುಷ್ಯ ಸ್ವಭಾವದ ಮೂಲ ಪರಿಕರಗಳು ತಮ್ಮ ಸಾಧ್ಯತೆಗಳನ್ನು ಈಡೇರಿಸಿಕೊಳ್ಳುವುದನ್ನು ಶೋಧಿಸುವುದು ಕಾದಂಬರಿಯ ಸಂಪೂರ್ಣ ಆಶಯವಾಗಿದೆ. ಒಟ್ಟಾರೆಯಾಗಿ ಈ ಕೃತಿಯ ಅರ್ಥ ಮತ್ತು ಮೌಲ್ಯವೆಲ್ಲ ಸಾಹಿತ್ಯ ಸೃಷ್ಟಿಯ ಕಲಾತ್ಮಕತೆ ಹಾಗೂ ಮಾನವೀಯತೆಯಲ್ಲಿ ಅಡಕಗೊಂಡಿದೆ.

ಈ ನಿಬಂಧದ ವ್ಯಾಪ್ತಿಗೆ ಒಳಪಡದ ಇನ್ನು ಹಲವು ವಿಷಯಗಳು ಈ ಕೃತಿಯಲ್ಲಿದೆ. ಆಸಕ್ತ ಸಂಶೋಧನಾ ವಿದ್ಯಾರ್ಥಿಗಳು ಅವುಗಳನ್ನು ಅಧ್ಯಯನ ಮಾಡಬಹುದಾದ ಸಾಧ್ಯತೆಗಳಿವೆ. ಮುಖ್ಯವಾಗಿ ಆಧ್ಯಾತ್ಮಿಕ ಹಿನ್ನೆಲೆ ಮತ್ತು ವಿವೇಕಾನಂದರ ಚಿಂತನೆಗಳು, ಪುನರ್ಜನ್ಮದ ಪರಿಕಲ್ಪನೆ, ಸ್ಥಳ, ನಾಮ-ವ್ಯಕ್ತಿ ನಾಮಗಳ ಅಧ್ಯಯನ ಭೌಗೋಳಿಕ ಅಧ್ಯಯನ, ಹೀಗೆ ಇನ್ನು ಹಲವು ವ್ಯಾಸಂಗ ಸಾಧ್ಯತೆಗಳನ್ನ ಈ ಕೃತಿಯಲ್ಲಿ ಕಾಣಬಹುದು.

ಅನುಬಂಧ

ಕಾದಂಬರಿ ಪ್ರಕಾರ ಹಾಗೂ ಅದರ ವೈಶಿಷ್ಟ್ಯ

ಯಾವುದೇ ಒಂದು ಸಾಹಿತ್ಯ ಚರಿತ್ರೆಯಲ್ಲಿ, ಒಂದು ಸಾಹಿತ್ಯಿಕ ಪ್ರಭೇದ. ಯಾವ ಕಾಲಘಟ್ಟದಲ್ಲಿ ಜನ್ಮ ತಾಳಿತೆಂದು ನಿರ್ಣಯಿಸುವುದು ಕಷ್ಟದ ಕೆಲಸ. ಏಕೆಂದರೆ ಆ ಪ್ರಬೇಧದ ಪೂರ್ವ ನಿರ್ಧರಿತ ಪರಿಕಲ್ಪನೆ ಇಲ್ಲದೆ ಅದರ ಹುಟ್ಟು ಹಾಗೂ ವಿಕಾಸದ ಚರ್ಚೆ ಅರ್ಥಹೀನವಾಗುತ್ತದೆ. ಈ ಕುರಿತು ಸಂಕ್ಷಿಪ್ತವಾಗಿ ಇಲ್ಲಿ ಚರ್ಚಿಸಲಾಗಿದೆ. ಇಂಗ್ಲೀಷಿನಲ್ಲಿ 'ಓಔಗಿಇಐ' ಎಂದು ಕರೆಯಲಾಗುವ ಸಾಹಿತ್ಯ ಪ್ರಕಾರವನ್ನು ಕನ್ನಡದಲ್ಲಿ ಕಾದಂಬರಿ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಕಾದಂಬರಿ ಪ್ರಕಾರವು ಇಂದು ಅತ್ಯಂತ ಜನಪ್ರಿಯವಾದ ಮತ್ತು ಪ್ರಭಾವಶಾಲಿಯಾದ ಪ್ರಕಾರವಾಗಿದೆ. ಆಧುನಿಕ ವಿಮರ್ಶಕರು ಕಾದಂಬರಿಯ ಜನಪ್ರಿಯತೆಯನ್ನು ಮತ್ತು ಆಕರ್ಷಣೆಯನ್ನು ಗಮನಿಸಿ ಇದನ್ನು ಆಧುನಿಕ ಮಹಾಕಾವ್ಯವೆಂದು ಶ್ಲಾಘಿಸಿದ್ದಾರೆ.

ಜಗತ್ತಿನ ಸಾಹಿತ್ಯದ ಇತಿಹಾಸದಲ್ಲಿ ನಾಟಕ ಪ್ರಕಾರಕ್ಕೆ ತುಂಬಾ ಪ್ರಾಚೀನವಾದ ಇತಿಹಾಸವಿದೆ. ಈ ಪ್ರಕಾರವು ತುಂಬಾ ಶ್ರೀಮಂತವಾದುದು ಆಗಿದೆ. ಗ್ರೀಕ್ ಭಾಷೆಯಲ್ಲಿ ಕ್ರಿ.ಪೂ.ದಲ್ಲಿ ಶ್ರೇಷ್ಠ ನಾಟಕಗಳು ರಚನೆಗೊಂಡಿವೆ. ಸಂಸ್ಕೃತದಲ್ಲಿ ಕ್ರಿ.ಶ.ಆರಂಭದಲ್ಲಿ ನಾಟಕ ಕುರಿತು ಭರತನು 'ನಾಟ್ಯಶಾಸ್ತ್ರ'ವನ್ನು ರಚಿಸಿದ್ದಾನೆ.

'ಕಾವ್ಯೇಷು ನಾಟಕಂ ರಮ್ಯಂ' ಎಂಬ ಪ್ರಸಿದ್ಧ ವಾಕ್ಯ ನಾಟಕ ಪ್ರಕಾರದ ಪ್ರಾಮುಖ್ಯತೆಯನ್ನು ಹೇಳುತ್ತಿದೆ. ಆದರೆ ಇಂದು ನಾಟಕ ಪ್ರಕಾರದ ಜನಪ್ರಿಯತೆಯನ್ನು ಕಾದಂಬರಿ ಪ್ರಕಾರ ತನ್ನದಾಗಿಸಿಕೊಂಡಿದೆ. ನಾಟಕದ ಇತಿಹಾಸಕ್ಕೆ ಹೋಲಿಸಿದರೆ ಕಾದಂಬರಿ ಇತ್ತೀಚಿನದು. ಇದಕ್ಕೆ ಕೇವಲ ೨೫೦ ವರ್ಷಗಳ ಇತಿಹಾಸವಿದೆ. ಸಂಸ್ಕೃತ ಭಾಷೆಯಲ್ಲಿ ಗದ್ಯಕವಿ ಬಾಣನು ರಚಿಸಿದ 'ಕಾದಂಬರಿ' ಕೃತಿಯು ಗದ್ಯದಲಿದೆ. ಈ ಕಾದಂಬರಿಯನ್ನು ಕ್ರಿ.ಶ.೧೮೭೫ರಲ್ಲಿ ಉತ್ತರ ಕರ್ನಾಟಕದ ತುರಮುರಿ ಎಂಬುವವರು ಹೊಸಗನ್ನಡದಲ್ಲಿ ಅನುವಾದ ಮಾಡಿದ್ದಾರೆ.

ಈ ಕಾದಂಬರಿಯ ವಸ್ತು, ನಿರೂಪಣಾ ಶೈಲಿ ಮೊದಲಾದವನ್ನೇ ಸಾಹಿತ್ಯ ಪ್ರಕಾರವಾದ 'NOVEL' ಕೂಡ ಹೊಂದಿದ್ದರಿಂದ 'NOVEL'ಗೆ ಸಂವಾದಿಯಾಗಿ ಕನ್ನಡದಲ್ಲಿ ಬಂದ ಗದ್ಯ ಕೃತಿಗೆ ಬಾಣನ ಕಾದಂಬರಿಯ ಹೆಸರನ್ನೇ ಇಟ್ಟು ಕರೆಯಲಾಗಿದೆ.

ಜಗತ್ತಿನ ಬಹುತೇಕ ಭಾಷೆಗಳಲ್ಲಿ ಉಳಿದ ಪ್ರಕಾರಗಳಿಗಿಂತ ಕಾದಂಬರಿ ಪ್ರಕಾರದಲ್ಲಿ ಅತಿ ಹೆಚ್ಚು ಪುಸ್ತಕಗಳು ೨೦ನೇ ಶತಮಾನದಲ್ಲಿ ಪ್ರಕಟಗೊಂಡಿರುವುದನ್ನು ಕಾಣಬಹುದು. ಇವುಗಳನ್ನು ಓದುವವರ ಸಂಖ್ಯೆ ಕೂಡಾ ಹೆಚ್ಚಾಗಿದೆ. ಇದನ್ನು ಗಮನಿಸಿಯೇ ಈ ಆಧುನಿಕ ಕಾಲವನ್ನು 'ಕಾದಂಬರಿ ಯುಗ' ಎಂದು ವಿಮರ್ಶಕರು ಕರೆದಿದ್ದಾರೆ. ಮೆರಿಯನ್ ಕ್ರಾಫರ್ಡ್ ಕಾದಂಬರಿಯನ್ನು ಕುರಿತು ಹೇಳುತ್ತಾ 'ಕಾದಂಬರಿ ಕರತಲ ರಂಗಭೂಮಿ' ಎಂದು ಹೇಳಿರುವುದನ್ನು ಹಡ್ಸ್‌ನು ತನ್ನ ಸಾಹಿತ್ಯ ಪ್ರವೇಶದಲ್ಲಿ ದಾಖಲಿಸಿದ್ದಾನೆ. ಅಂದರೆ ಒಂದು ಉತ್ತಮ ಕಾದಂಬರಿಯು ರಂಗಭೂಮಿಯನ್ನು ಓದುಗರ ಹಸ್ತಕ್ಕೆ ತರುವ ಅದ್ಭುತವನ್ನು ಮಾಡಬಲ್ಲ ಶಕ್ತಿ ಪಡೆದಿದೆ. ಆದುದರಿಂದ ಕಾದಂಬರಿಯನ್ನು ಓದುವ ವ್ಯಕ್ತಿ ರಂಗಭೂಮಿಯಲ್ಲಿ ಕುಳಿತು ನಾಟಕ ನೋಡಲು ಇಚ್ಛೆ ಉಳ್ಳವರು ರಂಗಭೂಮಿಗೆ ಹೋಗಬೇಕು. ಆದರೆ ಕಾದಂಬರಿಯಾದರೂ ಆ ರಂಗಭೂಮಿಯನ್ನು ಕೈಗೆ ತಂದುಕೊಟ್ಟಿದೆ. ಕಾದಂಬರಿ ಅಂಗೈ ಮೇಲಿನ ರಂಗಭೂಮಿಯೇ ಆಗಿದೆ ಎಂಬ ಮಾತು ಅರ್ಥಪೂರ್ಣವಾಗಿದೆ.

ಗ್ರಂಥಸೂಚಿ

೧. ಮಲೆಗಳಲ್ಲಿ ಮದುಮಗಳು : ಕುವೆಂಪು.

ಹತ್ತನೆಯ ಮುದ್ರಣ : ೨೦೦೪

ಪ್ರ:ಉದಯರವಿ ಪ್ರಕಾಶನ

ವಾಣಿವಿಲಾಸ ಪುರಂ, ಮೈಸೂರು.

೨. ಕನ್ನಡ ಕಥನ ಸಾಹಿತ್ಯ: ಕಾದಂಬರಿ: ಜಿ.ಎಸ್.ಆಮೂರ

ಮೊದಲ ಮುದ್ರಣ : ೧೯೯೪

ಪ್ರ:ಶ್ರೀಹರಿ ಪ್ರಕಾಶನ

೩. ವಿಮರ್ಶೆಯ ವಿನಯ: ಕಾದಂಬರಿ: ಕೀರ್ತಿನಾಥ ಕುರ್ತಕೋಟಿ

ಎರಡನೆಯ ಮುದ್ರಣ: ೧೯೯೯

ಪ್ರ:ಮನೋಹರ ಗ್ರಂಥಮಾಲೆ, ಧಾರವಾಡ.

೪. ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು : ಟಿ.ಪಿ.ಅಶೋಕ

ಮೊದಲ ಮುದ್ರಣ: ೨೦೦೪

ಪ್ರ: ಅಕ್ಷರ ಪ್ರಕಾಶನ

ಹೆಗ್ಗೋಡು, ಸಾಗರ, ಕರ್ನಾಟಕ

೫. ಸ್ತ್ರೀವಾದ: ಬಿ.ಎನ್.ಸುಮಿತ್ರಾಭಾಯಿ

ಮೊದಲ ಮುದ್ರಣ : ೧೯೯೯

ಪ್ರ:ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ಷಷ್ಠಿ ಸಂಪದ: ರಾಗೌ

ಮೊದಲ ಮುದ್ರಣ: ೨೦೦೪

ಪ್ರ:ಕರ್ನಾಟಕ ಸಂವಹನ ಪ್ರಕಾಶನ, ಮೈಸೂರು.

೭. ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು: ಎನ್.ಬೋರಲಿಂಗಯ್ಯ
ಮೊದಲ ಮುದ್ರಣ: ೨೦೦೪
ಪ್ರ:ದಾರಿದೀಪ ಪ್ರಕಾಶನ
ದಾರಿದೀಪ ಸಂಶೋಧನಾಕೇಂದ್ರ, ಮೈಸೂರು

೮. ಹೊಸಗನ್ನಡ ಸಾಹಿತ್ಯಚರಿತ್ರೆ: ಎಲ್.ಎಸ್.ಶೇಷಗಿರಿರಾವ್
ಪರಿಷ್ಕೃತ-ವಿಸ್ತೃತ ದ್ವಿತೀಯ ಆವೃತ್ತಿ-೨೦೦೨
ಪ್ರ:ಅಂಕಿತ ಪುಸ್ತಕ
ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು.

೯. ಎರಿಕ್ ಫ್ರಾಂನ ಆರ್ಟ್ ಆಫ್ ಲಿವಿಂಗ್/ ಪ್ರೀತಿಸುವುದೆಂದರೆ...
ಅನು:ಕೆ.ವಿ.ನಾರಾಯಣ್
ಎಚ್.ಎಸ್.ರಾಘವೇಂದ್ರರಾವ್
ಮೊದಲ ಮುದ್ರಣ: ೨೦೦೧
ಪ್ರ-ಅಭಿನಯ.

೧೦. ಕುವೆಂಪು ಕಾದಂಬರಿಗಳು: ವಿ.ಎಂ.ಇನಾಂದಾರ್
ಮೊದಲ ಮುದ್ರಣ – ೧೯೭೯
ಪ್ರ: ಹೆಚ್.ಆರ್.ರಮೇಶ್
ಉಷಾ ಸಾಹಿತ್ಯ ಮಾಲೆ
ಚಂದ್ರಗುಪ್ತ ರಸ್ತೆ, ಮೈಸೂರು-೧.

೧೧. ವಾಸ್ತವತಾವಾದ : ಟಿ.ಪಿ.ಅಶೋಕ
ಎರಡನೆ ಮುದ್ರಣ – ೧೯೯೯
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨. ಕುವೆಂಪು ಪುನರಾವಲೋಕನ: ಜಿ.ಎಸ್.ಶಿವರುದ್ರಪ್ಪ

ಮೊದಲ ಮುದ್ರಣ: ೨೦೦೪

ಪ್ರ: ಅಂಕಿತ ಪುಸ್ತಕ.

ಬಸವನಗುಡಿ, ಬೆಂಗಳೂರು.

೧೩. ಕುವೆಂಪು ಕಾದಂಬರಿಗಳು

ಸಂ: ಗುರುಪಾದ ಮರಿಗುದ್ದಿ

ಮೊದಲ ಮುದ್ರಣ –೨೦೦೪

ಪ್ರ:ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೪. ಕುವೆಂಪು ಸಾಹಿತ್ಯ ಸಂಧಾನ: ಸಿ.ಪಿ.ಕೃಷ್ಣಕುಮಾರ್.

ಮೊದಲ ಮುದ್ರಣ – ೧೯೯೫

ಪ್ರ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ, ಮೈಸೂರು.

೧೫. ಸಾಹಿತ್ಯ ಮತ್ತು ಸತ್ಯ: ಎ.ಎನ್.ಮೂರ್ತಿರಾವ್

ಮುದ್ರಣ : ೧೯೮೨

ಪ್ರ:ಡಿ.ವಿ.ಕೆ, ಮೂರ್ತಿ, ಮೈಸೂರು.